
ಡಿಸೆಂಬರ್ 14, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2015
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಕೋರ್ಟ್ ಟ್ರಯಲ್ ಶುರುವಾದಾಗಲೇ ಸಿನಿಮಾ ರಿಲೀಸ್....

# ಡೆವಿಲ್ ಭವಿಷ್ಯ ರಿವೀಲ್!



ಇದೆಂಥಾ ದುರ್ಗತಿ?!






## ಜೈಲುಗಳಲ್ಲಿ ಬೀಡಿಯೂ ಸಿಗದಂತೆ ಮಾಡಿದ್ರು ಬಿ. ದಯಾನಂದ್ ಐಪಿಎಸ್!

## ತಾವರಕೆರೆಯಲ್ಲಿ 12 ಸಾವಿರ ಕೋಟಿ ಲ್ಯಾಂಡ್ ಗ್ಯಾಬ್ರಿಂಗ್!

ಉಡುಪಿ

## ಬೆಟ್ಟಿಂ ಕಿಂಗ್ ಶೆಟ್ಟಿ ಕಿಡ್ನಾಪ್!



## ಸ್ಮೃತಿ ಮಂದನಾ ಪ್ರೀತಿಗೆ ದ್ರೋಹ ಮಾಡಿದ ಮುಚ್ಚಲ್!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಪ್ರಕ್ರಿಯೆ ನಿಜಕ್ಕೂ ಪಾರದರ್ಶಕವಾಗಿದೆಯೇ?

ಬೆಳಗಾವಿ ಸುವರ್ಣ ಸೌಧದಲ್ಲಿ ಚಳಿಗಾಲದ ಅಧಿವೇಶನ ಶುರುವಾಗಿದೆ. ಮೊದಲ ದಿನವೇ ಆಡಳಿತ ಪಕ್ಷಕ್ಕೆ ಬಿಸಿ ಮುಟ್ಟಿಸೋ ಪ್ರಶ್ನೆಗಳು ವಿರೋಧ ಪಕ್ಷಗಳಿಂದ ಶುರುವಾಗಿದೆ! ಸಿದ್ದರಾಮಯ್ಯನವರಿಗೆ ಚೆನ್ನಾಗಿ ಗೊತ್ತಿದೆ. ತಮಗೆ ಬಿಸಿ ಮುಟ್ಟಿಸೋ ಕೆಲಸ ಮಾಡೋರು ಯಾರೂ ಅಂತ. ಸೋ, ಸೌಧಕ್ಕೆ ಕಾಲಿಟ್ಟ ಕೂಡಲೇ ಬಿಜೆಪಿ ನಾಯಕ ಅಶೋಕ್ ಅವರ ಕೈ ಕುಲುಕಿ ಯೋಗ ಕ್ಷೇಮ ವಿಚಾರಿಸಿಕೊಂಡಿದ್ದಾರೆ! ಒಂದಂತೂ ಸತ್ಯ. ಈ ಭಾರಿಯ ಚಳಿಗಾಲದ ಅಧಿವೇಶನ ಸಖತ್ ಹೀಟ್ ಆಗಿರುತ್ತದೆ. ಯಾರು ಏನೇ ಮಸ್ಕಾ ಹೊಡೆದರೂ ಬಿಜೆಪಿ ಜೆಡಿಎಸ್ ದೋಸ್ತಿ ಧುರೀಣರು ಸುಮ್ನೆ ಟೈಂ ಪಾಸ್ ಮಾಡಲಾರರು. ಇವತ್ತು ಮೊದಲಿಗೆ ಒಂದು ಮಾಹಿತಿಯನ್ನ ನಿಮಗೆ ತಿಳಿಸಬೇಕು. ಮೊದಲ ದಿನ ಅಧಿವೇಶನದಲ್ಲಿ ನಡೆದ ಬಹು ಮುಖ್ಯ ವಿಚಾರವಿದು.



ನಗರಾಭಿವೃದ್ಧಿ ಇಲಾಖೆಯಿಂದ ಹಂಚಿಕೆ ಮಾಡುವ ಸಿ.ಎ. ನಿವೇಶನಗಳಿಗೆ ಸಾರ್ವಜನಿಕರು ನಿರಾಸಕ್ತಿ ತೋರಿಸುತ್ತಿರುವ ಬಗ್ಗೆ ಹಾಗೂ ಗುತ್ತಿಗೆಯನ್ನು ವಿಸ್ತರಿಸುವ ಪ್ರಕ್ರಿಯೆಯಲ್ಲಿ ಇಲಾಖೆಯು ಸಮರ್ಪಕವಾದ ನೀತಿಯನ್ನು ಅನುಸರಿಸುತ್ತಿಲ್ಲದ್ದರ ಬಗ್ಗೆ ಸದಸ್ಯರಾದ ಡಿ.ಎಸ್. ಅರುಣ್ ಅವರು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರನ್ನು ಪ್ರಶ್ನಿಸಿ ಗಮನ ಸೆಳೆದರು!

ಇದಕ್ಕೆ ನಗರಾಭಿವೃದ್ಧಿ ಬಿ.ಎಸ್ ಸುರೇಶ್ ಪ್ರತಿಕ್ರಿಯಿಸಿ, ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಮತ್ತು ನಗರ ಯೋಜನಾ ಪ್ರಾಧಿಕಾರಗಳಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು 1991 ರನ್ವಯ ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) 2016 ರನ್ವಯ ಕ್ರಮವಾಗಿ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಪ್ರಕ್ರಿಯೆಯು ಸಂಪೂರ್ಣ ಪಾರದರ್ಶಕವಾಗಿದ್ದು, ಸದ್ಯ ರಾಜ್ಯದಲ್ಲಿ ಯಾವುದೇ ಸಮಸ್ಯೆಗಳಿಲ್ಲ ಎಂದರು. ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು 1991ರ ನಿಯಮ 7 ಉಪ ನಿಯಮ (3) ರನ್ವಯ ನಾಗರಿಕ ಸೌಲಭ್ಯಗಳುಳ್ಳ ನಿವೇಶನಗಳ ಹಂಚಿಕೆಯ ಸಮಿತಿಯನ್ನು ರಚಿಸಬಹುದಾಗಿದೆ. ಈ ಸಮಿತಿಯು ನಿಯಮ 7(1) ರಲ್ಲಿನ ಅಂಶಗಳೊಂದಿಗೆ ಪರಿಶೀಲಿಸಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಮಾಡಲು ಸಮಿತಿಯು ತೀರ್ಮಾನ ಕೈಗೊಳ್ಳುತ್ತದೆ. ಈ ತೀರ್ಮಾನವು ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಿರುತ್ತದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 1991 ನಿಯಮ 8(1)ರ ರೀತ್ಯಾ ಉಪನೋಂದಣಾಧಿಕಾರಿಗಳ ಮಾರ್ಗಸೂಚಿ ಬೆಲೆಯನ್ನು ಅನುಸರಿಸಿ ಗುತ್ತಿಗೆ ಮೊತ್ತದ ದರವನ್ನು ನಿಗಧಿಪಡಿಸಬೇಕಾಗುತ್ತದೆ. ಅದರಂತೆ ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ನಗರ ಯೋಜನಾ ಪ್ರಾಧಿಕಾರಗಳು

☞ 3

# ಕೆಎಸ್‌ಸಿಎ ಅಧ್ಯಕ್ಷರಾಗಿ ವೆಂಕಟೇಶ್ ಪ್ರಸಾದ್ ಆಯ್ಕೆ....



ಸಂಪಾದಕ
**ಎಂ. ರಾಹುಲ್**

..............................................

**ಕ**ರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (KSCA) ಅಧ್ಯಕ್ಷ ಚುನಾವಣೆ ಫಲಿತಾಂಶ ಹೊರ ಬಿದ್ದಿದ್ದು, ಮಾಜಿ ಕ್ರಿಕೆಟಿಗ ಬಿ.ಕೆ. ವೆಂಕಟೇಶ್ ಪ್ರಸಾದ್ ಗೆಲುವು ಸಾಧಿಸಿದ್ದಾರೆ. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಸೇರಿ ಒಟ್ಟು 16 ಸ್ಥಾನಗಳಿಗೆ ಡಿಸೆಂಬರ್ 07ರಂದು ಬೆಳಗ್ಗೆಯಿಂದ ಸಂಜೆವರೆಗೆ ಮತದಾನ ನಡೆದಿದ್ದು,ಮತ ಎಣಿಕೆಯಲ್ಲಿ ವೆಂಕಟೇಶ್ ಪ್ರಸಾದ್ 191 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಇದರೊಂದಿಗೆ ವೆಂಕಟೇಶ್ ಪ್ರಸಾದ್ 12 ವರ್ಷಗಳ ಬಳಿಕ ಎರಡನೇ ಭಾರಿ ಅಧ್ಯಕ್ಷರಾಗಿ ಕೆಎಸ್‌ಸಿಎಗೆ ಹಿಂತಿರುಗಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಒಟ್ಟು 1,315 ಮತಗಳ ಚಲಾವಣೆ ಆಗಿದ್ದವು. ಕೆಎಸ್‌ಸಿಎ ಚುಕ್ಕಾಣಿ ಹಿಡಿಯಲು ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಹಾಗೂ ಕೆ.ಎನ್. ಶಾಂತಕುಮಾರ್ ಬಣಗಳ ನಡುವೆ ತೀವ್ರ ಪೈಪೋಟಿ ನಡೆದಿತ್ತು. ಮಾಜಿ ಕ್ರಿಕೆಟಿಗರಾದ ಜಾವಗಲ್ ಶ್ರೀನಾಥ್ ಹಾಗೂ ಅನಿಲ್ ಕುಂಬ್ಳೆ ಬಣದ ವೆಂಕಟೇಶ್ ಪ್ರಸಾದ್ ಗೆ ಒಟ್ಟು 749 ಮತಗಳು ಬಂದಿದ್ದರೆ, ಬ್ರಿಜೇಶ್ ಪಾಟೀಲ್ ಬಣದ ಕೆ ಎನ್ ಶಾಂತ ಕುಮಾರ್ ಅವರಿಗೆ 558 ಮತಗಳು ಲಭವಿಸಿವೆ.



ಇನ್ನು ವೆಂಕಟೇಶ್ ಪ್ರಸಾದ್ ಬಣದಿಂದ ಸುಜಿತ್ ಸೋಮ ಸುಂದರ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರೆ, ಮಧುಕರ್ ಅವರು ಖಜಾಂಚಿಯಾಗಿ ಆಯ್ಕೆಯಾದರು. ಇನ್ನು ಕೆಎಸ್‌ಸಿಎ ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ್ ಮೆನನ್ ಗೆಲುವು ಸಾಧಿಸಿದ್ದಾರೆ. ಈ ಬಾರಿ ಒಟ್ಟು 1315 ಮತಗಳ ಚಲಾವಣೆಯಾಗಿವೆ. 2013 ರಲ್ಲಿ 1351 ಮತಗಳ ಚಲಾವಣೆಗೊಂಡಿದ್ದವು. ಕೆಎಸ್ಸಿಎ ಇತಿಹಾಸದಲ್ಲಿ 2013ರಲ್ಲೇ ಅತಿ ಹೆಚ್ಚು ಮತದಾನವಾಗಿತ್ತು.

ಪರಾಜಿತ ಅಭ್ಯರ್ಥಿ ಶಾಂತಕುಮಾರ್ ಅವರ ನಾಮಪತ್ರ ತಿರಸ್ಕೃತಗೊಂಡಿದ್ದರಿಂದ ವೆಂಕಟೇಶ್ ಪ್ರಸಾದ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಆದರೆ,ಕೊನೆ ಕ್ಷಣದಲ್ಲಿ ಶಾಂತಕುಮಾರ್ ಅವರು ಕೋರ್ಟ್ ಮೊರೆ ಹೋಗಿದ್ದು, ಶಾಂತ ಕುಮಾರ್ ಅವರ ನಾಮಪತ್ರ ಸಿಂಧುಗೊಳಿಸಿ ಚುನಾವಣೆ ನಡೆಸುವಂತೆ ನ್ಯಾಯಾಲಯ ಆದೇಶ ನೀಡಿತ್ತು.

ಉಪಾಧ್ಯಕ್ಷ ಸ್ಥಾನಕ್ಕೆ ಮಾಜಿ ಕ್ರಿಕೆಟಿಗ ಸುಜೀತ್ ಸೋಮಸುಂದರ್ (719) ಅವರು ವಿನೋದ್ ಶಿವಪ್ಪ (588) ಎದುರು ಮೇಲುಗೈ ಸಾಧಿಸಿದರು. ಕಾರ್ಯದರ್ಶಿ ಸ್ಥಾನಕ್ಕೆ ಸಂತೋಷ್ ಮೆನನ್ (675) ಅವರು ಇ.ಎಸ್ . ಜಯರಾಮ್ (632) ವಿರುದ್ಧ ಗೆದ್ದರು. ಬಿ.ಎನ್. ಮಧುಕರ್ (736) ಅವರು ಎಂ.ಎಸ್. ವಿನಯ್ (571) ಎದುರು ಜಯಿಸಿ, ಖಜಾಂಚಿ ಸ್ಥಾನ ಪಡೆದರು. ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಬ್ರಿಜೇಶ್ ಬಣದ ಬಿ.ಕೆ. ರವಿ (669) ಅವರು ಎ.ವಿ. ಶಶಿಧರ್ (638) ಎದುರು ಜಯಿಸಿದರು.

ಆಡಳಿತ ಸಮಿತಿಯ ಸದಸ್ಯರಾಗಿ ವಿ.ಎಂ. ಮಂಜುನಾಥ್, ಶೈಲೇಶ್ ಪೋಳ್ (ಇಬ್ಬರೂ ಆಜೀವ ಸದಸ್ಯರ ವಿಭಾಗ), ಕಲ್ಪನಾ ವೆಂಕಟಾಚಾರ್, ಆಶಿಶ್ ಅಮರಲಾಲ್, ಅವಿನಾಶ್ ವೈದ್ಯ (ಬೆಂಗಳೂರು ವಲಯ), ಶ್ರೀನಿವಾಸ್ ಪ್ರಸಾದ್ (ಮೈಸೂರು), ಡಿ.ಎಸ್. ಅರುಣ್ (ಶಿವಮೊಗ್ಗ), ಸಿ.ಆರ್. ಹರೀಶ್ (ತುಮಕೂರು), ವೀರಣ್ಣ ಸವಡಿ (ಧಾರವಾಡ), ಕುಶಾಲ್ ಪಾಟೀಲ ಗಡಗಿ (ರಾಯಚೂರು) ಮತ್ತು ಶೇಖರ್ ಶೆಟ್ಟಿ (ಮಂಗಳೂರು ಅವಿರೋಧ) ಅವರು ಆಯ್ಕೆಯಾದರು.

'ಸಂಸ್ಥೆಯ ಸದಸ್ಯರು ನಮಗೆ ಅವಕಾಶ ಕೊಟ್ಟಿದ್ದಾರೆ. ಇದು ಕ್ರಿಕೆಟ್‌ಗೆ ಒಲಿದ ಗೆಲುವು. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಮಾಡಿರುವ ವಾಗ್ದಾನಗಳನ್ನು ಈಡೇರಿಸಲು ನಾವು ಬದ್ಧರಾಗಿದ್ದೇವೆ' ಎಂದು ಫಲಿತಾಂಶ ಪ್ರಕಟವಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವೆಂಕಟೇಶ್ ಪ್ರಸಾದ್ ಹೇಳಿದರು.

ನಾಡಿನ ದಿಗ್ಗಜ ಕ್ರಿಕೆಟಿಗರಾದ ಜಿ.ಆರ್. ವಿಶ್ವನಾಥ್, ಬಿ.ಎಸ್. ಚಂದ್ರಶೇಖರ್, ರೋಜರ್ ಬಿನ್ನಿ, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್ ಸೇರಿದಂತೆ ಹಲವರು ಮತ ಚಲಾಯಿಸಿದರು.

ಅಂದಹಾಗೆ, ವೆಂಕಟೇಶ್ ಪ್ರಸಾದ್ ಈ ಹಿಂದೆ 2010 ರಿಂದ 2013ರವರೆಗೆ ಕೆಎಸ್‌ಸಿಎ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಆಗ ಅನಿಲ್ ಕುಂಬ್ಳೆ ಅಧ್ಯಕ್ಷರಾಗಿದ್ದರು. ಜಾವಗಲ್ ಶ್ರೀನಾಥ್ ಕಾರ್ಯದರ್ಶಿಯಾಗಿದ್ದರು. ಇದೀಗ ವೆಂಕಟೇಶ್ ಪ್ರಸಾದ್ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ 12 ವರ್ಷಗಳ ಬಳಿಕ ಮತ್ತೆ ಕೆಎಸ್‌ಸಿಎಗೆ ವಾಪಸ್ಸಾಗಿದ್ದಾರೆ.



1994ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ವೆಂಕಟೇಶ್ ಪ್ರಸಾದ್, 33 ಟೆಸ್ಟ್ ಪಂದ್ಯದಿಂದ 96 ವಿಕೆಟ್ ಕಬಳಿಸಿದ್ದರೆ, 161 ಏಕದಿನ ಪಂದ್ಯದಿಂದ 196 ವಿಕೆಟ್ ಉರುಳಿಸಿದ್ದಾರೆ. ಎನಿವೇ, ವಿಜೇತರಿಗೆಲ್ಲ ನಮ್ಮ ಅಭಿನಂದನೆಗಳು..... ಗೆಲ್ಲುವುದು ಮುಖ್ಯವಲ್ಲ, ಉತ್ತಮ ಆಡಳಿತ ನಡೆಸಿ ಕೆಎಸ್‌ಸಿಎ ಹೆಸರು ಉಳಿಸುವುದು ಮುಖ್ಯ. ಆಲ್ ದಿ ಬೆಸ್ಟ್...

**-ಸಂ.**

2 ☜

ನಾಗರೀಕ ಸೌಕರ್ಯ ನಿವೇಶನಗಳನ್ನು ಗುತ್ತಿಗೆ ಆಧಾರದ ಮೇಲೆ 30 ವರ್ಷಗಳ ಅವಧಿಗೆ ನೀಡುತ್ತಿರುತ್ತದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 1991 8(1)ರಂತೆ ಗುತ್ತಿಗೆ ಮೌಲ್ಯದ ಹೆಚ್ಚುವರಿ ಶೇ.50ರಂತೆ ಗುತ್ತಿಗೆ, ಮೌಲ್ಯವನ್ನು ನಿಗಧಿಪಡಿಸಿ ನಿಯಮ10 (14)ರನ್ವಯ ಸಿ.ಎ. ನಿವೇಶನಗಳ ನವೀಕರಣವನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಮುಂದಿನ 30 ವರ್ಷಗಳ ಅವಧಿ ಗೆ ಗುತ್ತಿಗೆ ಅವಧಿಯನ್ನು ವಿಸ್ತರಿಸಬೇಕಾಗಿರುತ್ತದೆ.



ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮತ್ತು ನಗರ ಯೋಜನಾ ಪ್ರಾಧಿಕಾರಗಳಿಗೆ ಸರ್ಕಾರದ ವತಿಯಿಂದ ಯಾವುದೇ ಅನುದಾನವನ್ನು ನೀಡುವುದಿಲ್ಲ. ಪ್ರಾಧಿಕಾರಗಳು ಸ್ವಂತ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಕಾರ್ಯ ನಿರ್ವಹಿಸುತ್ತವೆ. ನಾಗರೀಕ ಸೌಲಭ್ಯ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಸಂಘ ಸಂಸ್ಥೆಗಳಿಗೆ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ದರವನ್ನು ನಿಗಧಿಗೊಳಿಸಿ ಹಂಚಿಕೆ ಮಾಡಿದ್ದಲ್ಲಿ, ಪ್ರಾಧಿಕಾರಗಳಿಗೆ ಆರ್ಥಿಕ ನಷ್ಟ ಉಂಟಾಗುತ್ತದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು, 1991ರ ನಿಯಮ 8(4)ರಂತೆ ಹಾಗೂ ಯೋಜನಾ ಪ್ರಾಧಿಕಾರಗಳು (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು, 2016 ರ ನಿಯಮ 13(4) ರಂತೆ ವಿಕಲಚೇತನರು ಹಾಗೂ ಬುದ್ಧಿಮಾಂದ್ಯರ ಕಲ್ಯಾಣಕ್ಕಾಗಿ ಸ್ಥಾಪಿಸಲಾಗಿರುವ ಸಂಸ್ಥೆಗಳು, ಕೇವಲ ಕನ್ನಡ ಮಾಧ್ಯಮದಲ್ಲಿ ಶಾಲೆಯನ್ನು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದ ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ಇಲಾಖೆಗಳು ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ನಿಗಮ ಅಥವಾ ಯಾವುದೇ ಸಂಸ್ಥೆಗಳಿಗೆ ಪ್ರಾಧಿಕಾರವು ನಿಗಧಿಪಡಿಸಿದ ಗುತ್ತಿಗೆ ಹಣದ ಪೈಕಿ ಶೇ.50 ರಷ್ಟರ ದರದಲ್ಲಿ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಅರ್ಜಿದಾರರಿದ್ದಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡುವ ವ್ಯವಸ್ಥೆ ಜಾರಿಯಲ್ಲಿದೆ. ಗುತ್ತಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2016ರಲ್ಲಿ ಗುತ್ತಿಗೆಯನ್ನು ನವೀಕರಿಸಲು ಸ್ಪಷ್ಟ ಅವಕಾಶವಿರುತ್ತದೆ. ಆದುದರಿಂದ, ಈ ವಿಷಯದಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದವಿರುವುದಿಲ್ಲ ಎಂದು ಸಚಿವರು ವಿಸ್ಕೃತವಾಗಿ ವಿವರಿಸಿದರು.


ಆಗ ಸದಸ್ಯ ಡಿ.ಎಸ್. ಅರುಣ್ ಅವರು, ಈಗ ಇರುವ ನಿವೇಶನಗಳಿಗೆ ಬೇಡಿಕೆಯಿಲ್ಲ. ಈಗ ನಿರ್ಮಿಸಿರುವ ನಿವೇಶನಗಳ ಹಸ್ತಾಂತರ ಪ್ರಕ್ರಿಯೆ ಮಾಡಿಲ್ಲ. ಸಿಎ ಸೈಟ್‌ಗಳನ್ನು ಎಸ್ಸಿ ಮತ್ತು ಎಸ್ಟಿಗಳಿಗೆ ಕಾಯ್ದಿರಿಸಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸಿಎ ಸೈಟ್‌ಗಳನ್ನು ಪರಬಾರೆ ಮಾಡಲು ಬರುವುದಿಲ್ಲ. ಎಸ್ಸಿ ಮತ್ತು ಎಸ್ಟಿಗಳಿಗೆ ಮಿತಿ ಹೇರಲು ಸಾಧ್ಯವಿಲ್ಲ. ಎಸ್.ಆರ್. ವ್ಯಾಲ್ಯೂ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ರಾಜ್ಯದ ಎಲ್ಲಾ ನಗರಗಳಲ್ಲಿ ನದಿ ಮೂಲಗಳು ಕಲುಷಿತಗೊಳ್ಳದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗಧಿಪಡಿಸಿರುವ ಅಗತ್ಯ ಬಫರ್ ಅನ್ನು ಕಾಯ್ದಿರಿಸಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. 10 ಎಕರೆಗೂ ಮೇಲ್ಪಟ್ಟ ಬಡಾವಣೆಗಳನ್ನು ಅಭಿವೃದ್ಧಿಪಡಿಸುವಾಗ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಎಸ್.ಟಿ.ಪಿ.ಯನ್ನು ಕಡ್ಡಾಯವಾಗಿ ಅಳವಡಿಸುವ ನಿಬಂಧನೆಯಿದ್ದು, ಅದರಂತೆ 10 ಎಕರೆಗಿಂತ ಮೇಲ್ಪಟ್ಟ ಎಲ್ಲಾ ಬಡಾವಣೆಗಳಲ್ಲಿ ಎಸ್.ಟಿ.ಪಿ. ಸ್ಥಳಗಳನ್ನು ಗುರುತಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ಮಾರ್ಗಸೂಚಿಗಳನುಸಾರ ಅಭಿವೃದ್ಧಿಪಡಿಸಲಾಗುತ್ತಿದೆ.

ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾಗುವ ಬಡಾವಣೆಗಳಲ್ಲಿನ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನಗಳ ಹಂಚಿಕೆ) ನಿಯಮಗಳು, 1991ರಲ್ಲಿನ ಅವಕಾಶಗಳಂತೆ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳು ಅಭಿವೃದ್ಧಿ ಯೋಜನೆಗಳಿಗೆ ಬೇಕಾಗುವ ಭೂಮಿಯನ್ನು ಭೂಸ್ವಾನಪಡಿಸಿಕೊಳ್ಳುವ ಕ್ರಮದೊಂದಿಗೆ, ರೈತರ ಸಹಭಾಗಿತ್ವದೊಂದಿಗೆ ಕರ್ನಾಟಕ ನಗರಾಭಿವೃದ್ಧಿ, ಪ್ರಾಧಿಕಾರಗಳ (ಭೂಸ್ವಾನಪಡಿಸಿಕೊಂಡಿರುವುದಕ್ಕೆ ಪರಿಹಾರಗಳ ಬದಲಿಗೆ ನಿವೇಶನಗಳ ಹಂಚಿಕೆ) ನಿಯಮಗಳು, 2009ರಲ್ಲಿನ ಅವಕಾಶದಂತೆ ವ್ಯಾಪಕವಾಗಿ ಶೇ. 50:50 ರ ಅನುಪಾತದಡಿಯಲ್ಲಿ ಬಡಾವಣೆ ನಿರ್ಮಿಸಲು ಕ್ರಮವಹಿಸುತ್ತಿವೆ ಎಂದರು. ಒಟ್ಟಾರೆ, ಸಿಎ ನಿವೇಶನ ಹಂಚಿಕೆ ಕಾರ್ಯ ಪಾರದರ್ಶಕವಾಗಿ ನಡೆಯಬೇಕು, ಅಷ್ಟೇ... ಎಂಬ ದನಿ ಮೊಳಗಿತು... ☯

# ಕಾರಾಗೃಹ ಎಡಿಜಿಪಿ ಬಿ. ದಯಾನಂದ ಹೈ ಅಲರ್ಟ್! ಖೈದಿಗಳ ಮೇಲೆ ನಿಗಾ ಇಡಲು ಟ್ರ್ಯಾಕಿಂಗ್ ಸಿಸ್ಟಂ ಜಾರಿ!!



**ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿ ನಡೆಯುತ್ತಿರೋ ಅನಾಚಾರವನ್ನು ನಿಲ್ಲಿಸಲು ಎಡಿಜಿಪಿ ದಯಾನಂದರ ಮಾರ್ಗದರ್ಶನದಲ್ಲಿ ಐಪಿಎಸ್ ಅಧಿಕಾರಿ ಅಂಶುಕುಮಾರ್ ಶ್ರಮಿಸುತ್ತಿದ್ದರೆ ಇತ್ತ ಕೆಲ ಜೈಲರ್‌ಗಳು, ಸಿಬ್ಬಂದಿಗಳು ಮಾತ್ರ ಖೈದಿಗಳ ತಾಳಕ್ಕೆ ತಕ್ಕಂತೆ ಕುಣಿಯೋದನ್ನು ಮುಂದುವರಿಸಿದ್ದಾರೆ! ಹಣದಾಸಗೆ ಡ್ರಗ್ಸ್ ಸಪ್ಲೈ ಮಾಡಲು ಹೋಗಿ ಜೈಲರ್ ಒಬ್ಬ ಇದೀಗ ಲಾಕ್ ಆಗಿದ್ದಾನೆ! ಈ ಜೈಲಿನ ಹಲವು ವಿಡಿಯೋಗಳು ವೈರಲ್ ಆದ ಬಳಿಕವೂ ಇಲ್ಲಿನ ಸಿಬ್ಬಂದಿಗಳು ಪಾಠ ಕಲಿತಿಲ್ಲ ಎಂದರೆ ಏನರ್ಥ?!**

**ಬೆಂಗಳೂರು**

✍ ಹೆಚ್.ಕೆ. ಮಹದೇವ್

**ಬೆಂ**ಗಳೂರು ಕೇಂದ್ರ ಕಾರಾಗೃಹದಲ್ಲಿ ನಡೆಯೋ ಅಕ್ರಮಗಳು ಅನಾಚಾರಗಳು ಒಂದೆರಡಲ್ಲ. ಈ ಜೈಲಿನಲ್ಲಿ ಖೈದಿಗಳು ರಾಜಾತಿಥ್ಯ ಪಡೆಯುತ್ತಿರುವ ವಿಡಿಯೋಗಳು ವೈರಲ್ ಆಗಿ ಕೆಲ ಅಧಿಕಾರಿಗಳು ಸಸ್ಪೆಂಡ್ ಆದರೂ, ಎತ್ತಂಗಡಿಯಾದರೂ ಜೈಲಿನ ಸಿಬ್ಬಂದಿ ಮಾತ್ರ ಬುದ್ಧಿ ಕಲಿತಂತೆ ಕಾಣುತ್ತಿಲ್ಲ! ಬೇಲಿಯೇ ಎದ್ದು ಹೊಲ ಮೇಯ್ದಂತೆ, ಖೈದಿಗಳನ್ನ ಶಿಕ್ಷಿಸಬೇಕಿದ್ದ ಜೈಲು ಪೊಲೀಸರೇ ಹಣದಾಸೆಗೆ ಬಿದ್ದು ಮಾಡಬಾರದನ್ನು ಮಾಡುವ ಚಾಳಿ ಮುಂದುವರಿದಿದೆ! ಇದೀಗ ಬೆಳಗಾವಿಯಿಂದ ಇಲ್ಲಿಗೆ ವರ್ಗಾವಣೆ ಆಗಿ ಬಂದ ಹೊಸ ಜೈಲರ್ ಒಬ್ಬ ನಿಷೇಧಿತ ವಸ್ತುಗಳನ್ನ ಜೈಲಿನೊಳಗೆ ಸಾಗಿಸಲು ಹೋಗಿ ಮೇನ್ ಗೇಟ್‌ನಲ್ಲಿಯೇ ಲಾಕ್ ಆಗಿದ್ದಾನೆ!!



ಎಡಿಜಿಪಿ ಬಿ. ದಯಾನಂದ್

ಪರಪ್ಪನ ಅಗ್ರಹಾರ ಜೈಲಿನ ಕರ್ಮಕಾಂಡದ ಒಂದೊಂದೇ ವಿಡಿಯೋಗಳು ಹೊರ ಬಂದ ಪರಿಣಾಮ ರಾಜ್ಯ ಸರ್ಕಾರಕ್ಕೆ ಮುಜುಗರ ಉಂಟಾಗಿತ್ತು. ಅದರಲ್ಲೂ ಘಟನೆ ಬೆನ್ನಲ್ಲೇ ಗರಂ ಆಗಿದ್ದ ಗೃಹ ಸಚಿವರು ಕೆಲ ಅಧಿಕಾರಿಗಳನ್ನು ಈ ಸಂಬಂಧ ಅಮಾನತು, ಇನ್ನು ಕೆಲವರನ್ನು ಎತ್ತಂಗಡಿ ಮಾಡಿದ್ದರು. ಅಲ್ಲದೆ, ಗೃಹ ಇಲಾಖೆ ಜೈಲಿನ ಮುಖ್ಯಸ್ಥರನ್ನಾಗಿ ಐಪಿಎಸ್ ಅಧಿಕಾರಿ ನೇಮಕ ಮಾಡುವ ಮೂಲಕ ಜೈಲಿನ ಅಕ್ರಮಗಳ ಕಡಿವಾಣಕ್ಕೆ ಕಸರತ್ತು ಮಾಡ್ತಿದೆ. ಹೀಗಿದ್ರೂ ಜೈಲಿನ ಸಿಬ್ಬಂದಿ ಮಾತ್ರ ತಮ್ಮ ಕಳ್ಳಾಟ ಬಿಡುತ್ತಿಲ್ಲ. ಕೈದಿಗಳು ನೀಡುವ ಹಣದಾಸೆಗೆ ನಿಷೇಧಿತ ವಸ್ತುಗಳನ್ನು ಜೈಲಿನೊಳಗೆ ಸಾಗಿಸಲು ಹೋಗಿ ರಾಹುಲ್ ಪಾಟೀಲ್ ಎಂಬ ಸಿಬ್ಬಂದಿ ತಗಲಾಕಿಕೊಂಡಿದ್ದಾನೆ. ಸಿಗರೇಟ್ ಮತ್ತು ನಿಷೇಧಿತ ಮಾದಕ ವಸ್ತುವನ್ನ ಜೈಲಿನೊಳಗೆ ಕೊಂಡೊಯ್ಯುವಾಗ ತಪಾಸಣೆ ವೇಳೆ ಸಿಕ್ಕಿಬಿದ್ದಿದ್ದಾನೆ. ಜೈಲಿನ ಮುಖ್ಯದ್ವಾರದ ಬಳಿ ತಪಾಸಣೆ ನಡೆಸಿದಾಗ ದೇಹದ ಖಾಸಗಿ ಭಾಗದಲ್ಲಿ 2 ಸಿಗರೇಟ್ ಪ್ಯಾಕ್, 60 ಗ್ರಾಂ ನಿಷೇಧಿತ ವಸ್ತುಗಳು ಪತ್ತೆಯಾಗಿದೆ. ಈ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್ನು, ಪರಪ್ಪನ ಅಗ್ರಹಾರ ಜೈಲಿನ ಮುಖ್ಯಸ್ಥರಾಗಿ ಐಪಿಎಸ್ ಅಧಿಕಾರಿ ಅಂಶುಕುಮಾರ್ ಅವರ ನೇಮಕದ ಬೆನ್ನಲ್ಲೇ, ಕೈದಿಗಳ ಸೆಲ್‌ಗಳ ಮೇಲೆ ದಾಳಿ ಮಾಡಿ ಮೊಬೈಲ್, ಸಿಗರೇಟ್, ಚಾಕು, ಚಾರ್ಜರ್ ಸೇರಿದಂತೆ ಇತ್ಯಾದಿ ನಿಷೇಧಿತ ವಸ್ತುಗಳನ್ನ ವಶಕ್ಕೆ ಪಡೆಯಲಾಗಿತ್ತು. ಇವೆಲ್ಲ ಕೈದಿಗಳ ಕೈಗೆ ಬಂದಿದ್ದೇಗೆ ಎಂದು ಪರಿಶೀಲನೆ ನಡೆಸಿದಾಗ, ಕೆಲ ಜೈಲು ಅಧಿಕಾರಿಗಳು ಮತ್ತು ಸಿಬ್ಬಂದಿಯೇ ಇದರಲ್ಲಿ ಶಾಮೀಲಾಗಿರೋದು ಗೊತ್ತಾಗಿತ್ತು. ಹೀಗಿದ್ರೂ ಕೆಲ ಸಿಬ್ಬಂದಿಗೆ ಮಾತ್ರ ಇನ್ನೂ ಬುದ್ಧಿ ಬಂದಿಲ್ಲ. ಒಂದು ಕಡೆ ಐಪಿಎಸ್ ಅಧಿಕಾರಿ ನೇತೃತ್ವದ ತಂಡ ಕೈದಿಗಳ ರಾಜಾತಿಥ್ಯಕ್ಕೆ ಬ್ರೇಕ್ ಹಾಕಲು ಮುಂದಾಗಿದ್ರೆ, ಇತ್ತ ಕೆಲ ಜೈಲು ಸಿಬ್ಬಂದಿ ಮಾತ್ರ ಕೈದಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿರೋದು ನಿಜಕ್ಕೂ ದುರ್ದೈವ... ಇನ್ನು, ಇದೇ ಸೆಂಟ್ರಲ್ ಜೈಲ್ ಮೇಲೆ ಮೊನ್ನೆ ಎನ್‌ಐಎ ದಾಳಿ ಕೂಡ ನಡೆದಿದೆ! ದೆಹಲಿಯಲ್ಲಿ ಕೆಂಪು ಕೋಟೆ ಬಳಿ ನಡೆದ ಘಟನೆಗೂ ಈ ಜೈಲಿಗೂ ಏನೋ ಸಂಬಂಧವಿದೆ ಅನ್ನೋ ಡೌಟ್ ಎನ್ ಐ ಎ ಅಧಿಕಾರಿಗಳಿಗೆ ಬಂದಿರುವುದೇ ಈ ದಾಳಿಗೆ ಕಾರಣ ಎನ್ನಲಾಗುತ್ತಿದೆ!



ರಾಹುಲ್ ಪಾಟೀಲ್

ಕೆಲವೇ ವಾರಗಳ ಹಿಂದೆ ರೇಪಿಸ್ಟ್ ಉಮೇಶ್ ರೆಡ್ಡಿ ಹಾಗೂ ಜೈಶ್ ಎ ಮೊಹಮ್ಮದ್ ಉಗ್ರ ಶಕೀಲ್ ಹಾಗೂ ರನ್ಯಾ ರಾವ್ ಗೆಳೆಯ ಕಿರಣ್‌ಗೆ ಜೈಲಿನಲ್ಲಿ ರಾಜಾತಿಥ್ಯ ನೀಡಿದ್ದು ಅಲ್ಲಿನ ಖೈದಿಗಳ ಮೂಲಕವೇ ಬಹಿರಂಗವಾಗಿತ್ತು. ಅದೇ ಸಂದರ್ಭದಲ್ಲಿ ಅತ್ತ ದೆಹಲಿಯಲ್ಲಿ ಬಾಂಬ್ ಬ್ಲಾಸ್ಟ್ ಆಗಿದ್ದು ಕಾಕತಾಳೀಯವಾಗಿತ್ತು!



ಅಂಶುಕುಮಾರ್ ಐಪಿಎಸ್

ಬೆಂಗಳೂರು ಜೈಲಿಗೂ ದೆಹಲಿ ಘಟನೆಗೂ ಸಂಬಂಧವಿರಬಹುದು ಎಂಬ ಅನುಮಾನ ಹುಟ್ಟಿಕೊಂಡಿದ್ದೆ ಅವಾಗ. ಈ ಎಲ್ಲಾ ಘಟನೆಗಳ ಬಗ್ಗೆ ಉನ್ನತ ಅಧಿಕಾರಿಗಳಿಂದ ತನಿಖೆ ನಡೆಯುತ್ತೆ ಅಂತಾರೆ. ಆದ್ರೆ, ಆಮೇಲೆ ಏನಾಯ್ತು? ಅನ್ನೋದೇ ಬಹಿರಂಗ ಆಗುವುದಿಲ್ಲ! ತನಿಖಾ ವರದಿ ಬಹಿರಂಗವಾಗಿ ಅಪರಾಧಿಗಳಿಗೆ ಶಿಕ್ಷೆ ಅದರಲ್ಲವೇ ಜೈಲು ಭ್ರಷ್ಟರಿಗೆ ಭಯ ಬರೋದು! ಈ ವಿಚಾರದಲ್ಲಿ ಸರ್ಕಾರ ಗಮನಹರಿಸಬೇಕಿದೆ.

**ಟ್ರ್ಯಾಕಿಂಗ್ ಸಿಸ್ಟಮ್ ಬರಲಿದೆ!**

ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಲು ಹಾಗೂ ಕೈದಿಗಳ ಚಲನವಲನಗಳ ಮೇಲೆ ಹದ್ದಿನ ಕಣ್ಣಿಡಲು ಪರಪ್ಪನ ಅಗ್ರಹಾರ ಜೈಲಿನಲ್ಲಿ ''ಪ್ರಿಸನರ್ಸ್ ಟ್ರ್ಯಾಕಿಂಗ್ ಮೂವ್‌ಮೆಂಟ್ ಸಿಸ್ಟಂ'' ಪರಿಚಯಿಸಲು ರಾಜ್ಯ ಬಂಖಾನೆ ಇಲಾಖೆ ಮುಂದಾಗಿದೆ. ಮಾದಕ ವಸ್ತುಗಳ ಸೇವನೆ, ಮೊಬೈಲ್ ಬಳಕೆ ಸೇರಿದಂತೆ ಜೈಲಿನಲ್ಲಿ ಎಗ್ಗಿಲ್ಲದೆ ನಡೆಯುತ್ತಿದ್ದ ಅಕ್ರಮಗಳನ್ನು ತಹಬದಿಗೆ ತರಲು ಹಾಗೂ ಜೈಲು ಸಿಬ್ಬಂದಿಯ ಹೊಣೆಗಾರಿಕೆ ಹೆಚ್ಚಿಸಿ, ಆಡಳಿತದಲ್ಲಿ ಪಾರದರ್ಶಕತೆ ಮೂಡಿಸಲು ಪರಪ್ಪನ ಅಗ್ರಹಾರ ಜೈಲಿನಲ್ಲಿ ಟ್ರ್ಯಾಕಿಂಗ್ ಸಿಸ್ಟಮ್ ಜಾರಿ ತರಲು ಸಲ್ಲಿಸಿದ್ದ ಪ್ರಸ್ತಾವನೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ.

## ಜೈಲಿನೊಳಗೆ ಡ್ರಗ್ಸ್ ತಂದು ಸಿಕ್ಕಿಬಿದ್ದ ವಾರ್ಡನ್!

ಈಗಿರುವ ಸಿಸಿಟಿವಿ ಕ್ಯಾಮರಾಗಳಿಗೆ ಕೃತಕ ಬುದ್ಧಿಮತ್ತೆ (ಎಐ) ಸ್ಪರ್ಶ, ಕೈದಿಗಳ ಫೋನ್ ಕರೆ ವ್ಯವಸ್ಥೆ ಸಂಪೂರ್ಣ ಡಿಜಿಟಲ್ ಟ್ರ್ಯಾಕಿಂಗ್, ಸಂದರ್ಶಕರನ್ನು ಭೇಟಿಯಾಗಲು ಡಿಜಿಟಲ್ ಟೋಕನ್ ಪದ್ಧತಿ ಸೇರಿದಂತೆ

☞ 10

## ಧೂಳು ತಿನ್ನುತ್ತಿರುವ ಹಳೇ ಕಡತಗಳಿಗೆ ಮುಕ್ತಿ ಯಾವಾಗ?!

**ಕ**ಳೆದ ಹತ್ತು ವರ್ಷಗಳಲ್ಲಿ ರಾಜ್ಯದ ಬಂದೀಖಾನೆಗಳಲ್ಲಿ ನಡೆದ ಭ್ರಷ್ಟಾಚಾರ ಹಾಗೂ ಸುಧಾರಣೆಗೆ ಉನ್ನತ ಮಟ್ಟದ ಸಮಿತಿಗಳಿಂದ ತನಿಖೆ ನಡೆದು ಸಲ್ಲಿಕೆಯಾದ ನಾಲ್ಕು ವರದಿಗಳು ರಾಜ್ಯ ಸರ್ಕಾರದ ಕಪಾಟಿನಲ್ಲಿ ಧೂಳು ತಿನ್ನುತ್ತಿವೆ! ಈಗ ಜೈಲಿನಲ್ಲಿ ಉಗ್ರನಿಗೆ ಹಾಗೂ ವಿಕೃತ ಕಾಮಿ ಉಮೇಶ್ ರೆಡ್ಡಿಗೆ ರಾಜಾತೀಥ್ಯ ಕೊಟ್ಟಿರೋ ಪ್ರಕರಣದ ತನಿಖೆಗಾಗಿ ಎಡಿಜಿಪಿ ಆರ್.ಹಿತೇಂದ್ರ ನೇತೃತ್ವದಲ್ಲಿ ಮತ್ತೊಂದು  ಹೊಸ ಸಮಿತಿ ರಚನೆಯಾಗಿದೆ.ಜೈಲ್ ಭ್ರಷ್ಟಾಚಾರ ವಿಚಾರವಾಗಿ ಇದು 5 ನೇ ತನಿಖೆ! ಇವರಿಂದ ಅದೇನು ವರದಿ ಬರುತ್ತೋ ನೋಡೋಣ.

ಮೊದಲ ಸಲ, 2104ರಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ರೇಪಿಸ್ಟ್ ಜೈಶಂಕರ್ ಪರಾರಿಯಾಗಿದ್ದ.  ಅಂದು ಕಾರಾಗೃಹದ ಭದ್ರತಾ ಲೋಪ ಕುರಿತು ಸಾರ್ವಜನಿಕ ವಲಯದಲ್ಲಿ ಭಾರಿ ಆಕ್ರೋಶ ವ್ಯಕ್ತವಾಯಿತು. ಆಗ ಕಾರಾಗೃಹಗಳ ಸುಧಾರಣೆಗೆ ಪರಿಶೀಲಿಸಿ ವರದಿ ನೀಡುವಂತೆ ರಾಜ್ಯ ಅಪರಾಧ ತನಿಖಾ ಇಲಾಖೆ (ಸಿಐಡಿ) ಡಿಜಿಪಿ ಆಗಿದ್ದ ಬಿಪಿನ್ ಗೋಪಾಲಕೃಷ್ಣ ನೇತೃತ್ವದಲ್ಲಿ ಉನ್ನತ ಸಮಿತಿ ರಚಿಸಿತ್ತು. ಸರ್ಕಾರಕ್ಕೆ ಸಮಿತಿ ವರದಿ ಸಲ್ಲಿಸಿತು. ಆನಂತರ ಏನಾಯ್ತು? ಏನೂ ಇಲ್ಲ.

ಎರಡನೆಯದಾಗಿ, 2017ರಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಆಸ್ತಿ ಸಂಪಾದನೆ ಪ್ರಕರಣದ ತಮಿಳುನಾಡಿನ ರಾಜಕಾರಣಿ ಶಶಿಕಲಾ ನಟರಾಜನ್ ಅವರಿಗೆ ವಿಐಪಿ ಸೌಲಭ್ಯ ನೀಡಲಾಗಿದೆ ಎಂದ ವಿವಾದ ಬೆಳಕಿಗೆ ಬಂದಿತ್ತು. ಆಗಲೂ ಸಹ ಮತ್ತೆ ಜೈಲಿನ ಆಡಳಿತ ವಿರುದ್ಧ ಟೀಕೆಗಳು ವ್ಯಕ್ತವಾಗಿದ್ದವು. ಅಂದು ರಾಜ್ಯ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿನಯ್ ಕುಮಾರ್ ನೇತೃತ್ವದ ಸಮಿತಿ ರಚಿಸಲಾಯಿತು. ಆ ಸಮಿತಿ ವರದಿ ನೀಡಿ ಎಂಟು ವರ್ಷಗಳು ಕಳೆದರೂ ಆ ವರದಿ ಫೈಲ್ ಸಹ ಬಿಚ್ಚಿ ನೋಡಿಲ್ಲ.

ಮೂರನೆಯದಾಗಿ, 2022ರಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಶಂಕಿತ ಉಗ್ರರು ಹಾಗೂ ಕೈದಿಗಳು ಮೊಬೈಲ್ ಬಳಕೆ ಬಗ್ಗೆ ವಿಡಿಯೋಗಳು ಬಯಲಾಗಿದ್ದವು. ಆಗ ಕಾರಾಗೃಹ ಭದ್ರತಾ ವ್ಯವಸ್ಥೆಗೆ ಬಲವರ್ಧನೆಗೆ ಎಡಿಜಿಪಿ ಎಸ್.ಮುರುಗನ್ ನೇತೃತ್ವದಲ್ಲಿ ಸಮಿತಿಯನ್ನು ಸರ್ಕಾರ ರಚಿಸಿತು. ಜೈಲಿನ ಸುರಕ್ಷತೆ ಕುರಿತು ಪರಿಶೀಲಿಸಿ ಸಮಿತಿ ವರದಿ ನೀಡಿತ್ತು. ಈ ವರದಿ ಆಧರಿಸಿ ಕೆಲ ಅಧಿಕಾರಿಗಳ ವರ್ಗಾವಣೆ ಮಾಡಿದ್ದು ಬಿಟ್ಟರೆ ಮತ್ಯಾವುದು ಶಿಫಾರಸುಗಳು ಕಾರ್ಯರೂಪಕ್ಕೆ ಬರಲಿಲ್ಲ.

ನಾಲ್ಕನೆಯದಾಗಿ, ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿ ಜೈಲು ಸೇರಿದ್ದ ನಟ ದರ್ಶನ್ ಹಾಗೂ ಅವರ ಸಹಚರಿಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರಾಜ್ಯಾಥ್ಯ ನೀಡಲಾಗಿದೆ ಎಂಬ ಆರೋಪ ಕೇಳಿ ಬಂದಿತ್ತು. ಅಲ್ಲದೆ ಇದಕ್ಕೆ ಪೂರಕವಾಗಿ ವಿಡಿಯೋ ಹಾಗೂ ಪೋಟೋಗಳು ಬಹಿರಂಗವಾಗಿ ಸಾರ್ವಜನಿಕ ವಲಯದಲ್ಲಿ ವೈರಲ್ ಆಗಿದ್ದವು. ಆಗ ಕಾರಾಗೃಹಗಳ ಸುಧಾರಣೆಗೆ ಅಂದು ಸಿಸಿಬಿ ಮುಖ್ಯಸ್ಥರಾಗಿದ್ದ ಐಜಿಪಿ ಡಾ.ಚಂದ್ರಗುಪ್ತ ನೇತೃತ್ವದ ಸಮಿತಿಯನ್ನು ಸರ್ಕಾರ ರಚಿಸಿತ್ತು. ಧಕ್ಷ ಅಧಿಕಾರಿ ಡಾ. ಚಂದ್ರಗುಪ್ತ ಸೆಂಟ್ರಲ್ ಜೈಲಿಗೆ ಹಾಗೂ ಬೇರೆ ಬೇರೆ ಜೈಲುಗಳಿಗೆ ಭೇಟಿ ನೀಡಿ ಖಡಕ್ ತನಿಖೆ ನಡೆಸಿ ವರದಿ ಸಿದ್ದಪಡಿಸಿ ನಾಲ್ಕು ತಿಂಗಳ ಹಿಂದೆಯಷ್ಟೇ ಸರ್ಕಾರಕ್ಕೆ ಅವರು ವರದಿ ಸಲ್ಲಿಸಿದರು. ಈ ವರದಿಯಲ್ಲಿ ನಾಡಿನ ಸೆರೆಮನೆಗಳ ಅಕ್ರಮ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲಿದ್ದರು. ಕಾರಾಗೃಹದಲ್ಲಿ ಡ್ಯೂಟಿ ಮಾಡುವ ಅಧಿಕಾರಿ-ಸಿಬ್ಬಂದಿಗೆ ವರ್ಗಾವಣೆ ನೀತಿ ಬದಲಾವಣೆ ಹಾಗೂ ಮನಶಾಸ್ತ್ರಜ್ಞರಿಂದ ಕೌನ್ಸೆಲಿಂಗ್ ಸೇರಿದಂತೆ ಹಲವು ಕ್ರಮಗಳ ಬಗ್ಗೆ ಅವರು ಶಿಫಾರಸು ಮಾಡಿದ್ದರು.

ಗೃಹ ಸಚಿವ ಪರಮೇಶ್ವರ್ ಈ ವರದಿಯನ್ನಾದರೂ ಪರಾಂಭರಿಸಿದ್ದರೆ, ಇಂದು ಹೀಗೆ ಸರ್ಕಾರದ ಮಾನ ಮರ್ಯಾದೆ  ಬಹಿರಂಗವಾಗಿ ಹರಾಜು ಆಗುತ್ತಿರಲಿಲ್ಲವೇನೋ...

## ಕೋರ್ಟ್ ಟ್ರಯಲ್ ಶುರುವಾದಾಗಲೇ ಸಿನಿಮಾ ರಿಲೀಸ್!

# ದಿ ಡೆವಿಲ್ ಭವಿಷ್ಯ ರೀವೀಲ್!




✍ ಮಹದೇವ್ ಕೆಂಪಯ್ಯ

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಆರೋಪಿಯಾಗಿ ಆತನ ತಂದೆ ತಾಯಿಗಳಿಂದ 'ಡೆವಿಲ್' ಎನ್ನಿಸಿಕೊಂಡಿರೋ ದರ್ಶನ್, ಏನೇ ಚಾಲೆಂಜ್ ಮಾಡಿದರೂ ಜೈಲು ವಾಸ ತಪ್ಪಿಸಿಕೊಳ್ಳಲಾರದೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಲವಿಲ ಒದ್ದಾಡುತ್ತಿದ್ದಾರೆ! ಇತ್ತ, ಅವರ ಅಭಿನಯದ 'ದಿ ಡೆವಿಲ್' ಸಿನಿಮಾ ರಿಲೀಸ್ ಆಗುತ್ತಿದೆ!! ಡಿ ಬಾಸ್‌ಗಂತೂ ಬಿಡುಗಡೆ ಭಾಗ್ಯವಿಲ್ಲ, ಅವರ ಸಿನಿಮಾವನ್ನಾದರೂ ನೋಡುವ ಅಂತ ಅವರ ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ!! ಬರೋ ಡಿಸೆಂಬರ್ 11ಕ್ಕೆ ಡೆವಿಲ್ ಬಿಡುಗಡೆ... 6ನೇ ತಾರೀಖು ಬುಕ್ ಮೈ ಶೋನಲ್ಲಿ ಅಡ್ವಾನ್ಸ್ ಬುಕಿಂಗ್ ಓಪನ್ ಆಗಿದೆ! ಮಾಹಿತಿಗಳ ಪ್ರಕಾರ ಒಂದೇ ದಿನದಲ್ಲಿ ಕೋಟಿ ರೂ. ಕಲೆಕ್ಷನ್ ಆಗಿದೆ! ಇದು 'ದಿ ಡೆವಿಲ್' ಟ್ರೇಲರ್ ನೋಡಿದ ಹುಚ್ಚು ಅಭಿಮಾನಿಗಳ ಹುಚ್ಚು ಸಾಹಸವೇ ಸರಿ!

ಇಷ್ಟಕ್ಕೂ ಟ್ರೇಲರ್‌ನಲ್ಲಿ ಏನಿದೆ? 'ಸೂರ್ಯನಿಗೆ ಹೆಚ್ಚು ದಿನ ಗ್ರಹಣ ಹಿಡಿಯೋದಿಲ್ಲ... ನಾನ್ ಬರ್ತೀನಿ ಚಿನ್ನಾ...' ದರ್ಶನ್ ಈ ಡೈಲಾಗ್ ಹೊಡೆದ ಮರುಕ್ಷಣವೇ ರಿಲೀಸ್ ಡೇಟ್ ಮೂಡುತ್ತದೆ! ಇದು ಸಿನಿಮಾ ರಿಲೀಸ್ ಡೇಟ್, ಆದರೆ, ಹುಚ್ಚು ಫ್ಯಾನ್ಸ್ ತಮ್ಮ ಬಾಸೇ ಬಿಡುಗಡೆ ಆಗ್ತಿದ್ದಾರೆ ಅಂತ ಫೀಲ್ ಮಾಡಿಕೊಂಡು ಬೀಗುತ್ತಿದ್ದಾರೆ!! ಬಣ್ಣದ ಲೋಕದ ಮಹಿಮೆಯೇ ಅಂಥದ್ದು...

ದರ್ಶನ್ ಗ್ರಹಚಾರ ಹೇಗಿದೆ ಅಂದ್ರೆ, ಅತ್ತ ಕೋರ್ಟ್‌ನಲ್ಲಿ ರೇಣುಕಾಸ್ವಾಮಿ ಮರ್ಡರ್ ಕೇಸ್ ಟ್ರಯಲ್ ಶುರುವಾಗುತ್ತಿರೋ ಹೊತ್ತಿನಲ್ಲೇ ಇತ್ತ 'ದಿ ಡೆವಿಲ್' ಬಿಡುಗಡೆ ಆಗುತ್ತಿದೆ! ಹೀರೋ ಜೈಲಿನಲ್ಲಿ, ಕೋರ್ಟ್ ಕಟಕಟೆಯಲ್ಲಿ ಕಣ್ಣೀರು ಹಾಕುತ್ತಿರುವಾಗ, ಅವನ ಅಭಿಮಾನಿಗಳು ಚಿತ್ರಮಂದಿರಗಳಲ್ಲಿ ಕೇಕೆ ಹಾಕುವಂತ ವಿಚಿತ್ರ ಪರಿಸ್ಥಿತಿ! ಇಂಥ ವಿಚಿತ್ರ ದುಸ್ಥಿತಿ ಭಾರತೀಯ ಚಲನಚಿತ್ರರಂಗದಲ್ಲಿ ಬಹುಷಃ ಯಾವ ಹೀರೋಗೂ ಇದುವರೆವಿಗೂ ಬಂದಿಲ್ಲ!!

ಅಂದಹಾಗೆ, ಸೋ ಕಾಲ್ಡ್ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ ಬಹುನಿರೀಕ್ಷಿತ ಸಿನಿಮಾ 'ದಿ ಡೆವಿಲ್'! ನೋಟ್ ದಿಸ್ ಪಾಯಿಂಟ್, ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರ ಒಡಹುಟ್ಟಿದ ಸೋದರಿ ಜಯಮ್ಮ ಇದರ ನಿರ್ಮಾಪಕಿ! ಇವರ ಸುಪುತ್ರ ಮಿಲನ ಪ್ರಕಾಶ್ (ಪ್ರಕಾಶ್ ವೀರ್) ಇದರ ನಿರ್ದೇಶಕ! ಇವರ ಬಾವ ಜೆಡಿಎಸ್ ಮುಖಂಡ/ಉದ್ಯಮಿ ದುಷ್ಯಂತ್ ಡಿಸ್ಟ್ರಿಬ್ಯೂಟರ್!

ಏಕೋ ಗೊತ್ತಿಲ್ಲ, ಇವರೇ ದೊಡ್ಡ ನಿರ್ಮಾಪಕ ವಿತರಕರಾಗಿದ್ದರೂ, ಕೆವಿನ್ ಸಂಸ್ಥೆಗೆ ವಿತರಣೆಯ ಹೊಣೆ ಹೊರಿಸಿದ್ದಾರೆ! ಇದೆಲ್ಲಾ ಒತ್ತಟ್ಟಿಗಿರಲಿ, ಇಸವಿ 2023ರ ನವೆಂಬರ್‌ನಲ್ಲಿ ಡೆವಿಲ್ ಮುಹೂರ್ತ ನಡೆದಿತ್ತು. ಎಲ್ಲವೂ ಪ್ಲಾನ್ ಪ್ರಕಾರ ನಡೆದಿದ್ದರೆ ಕಳೆದ ವರ್ಷವೇ 'ದಿ ಡೆವಿಲ್' ದರ್ಶನ ಆಗಬೇಕಿತ್ತು. ಆದರೆ, ಪಾಪಿ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ದರ್ಶನ್ ಜೈಲು ಪಾಲಾದರಲ್ಲ, ಶೂಟಿಂಗ್ ನಿಂತು ಹೋಗಿತ್ತು. ಜಯಮ್ಮನ ಮಗ ಪ್ರಕಾಶ್ ಪುಣ್ಯಕ್ಕೆ 'ಡೆವಿಲ್' ಅರ್ಥಾತ್ ದರ್ಶನ್ ಗೆ ಬೇಲ್ ಸಿಕ್ಕಿ ಆತ ಬಳ್ಳಾರಿ ಜೈಲಿಂದ ಬಿಡುಗಡೆಯಾಗಿ ಬಂದು ಶೂಟಿಂಗ್ ಕಂಪ್ಲೀಟ್ ಮಾಡಿಕೊಟ್ಟ!

ಮೆಡಿಕಲ್ ಇಶ್ಯೂ ಮೇಲೆ ಜಾಮೀನು ಗಿಟ್ಟಿಸಿಕೊಂಡು ಬಂದ ದರ್ಶನ್, ಆಸ್ಪತ್ರೆಗೆ ಅಡ್ಮಿಟ್ ಆಗದೆ ಡೆವಿಲ್ ಶೂಟಿಂಗ್‌ಗೆ ಹಾಜರಾದ ತಪ್ಪಿಗೆ ಬೇಲ್ ರದ್ದಾಗಿ, ಮತ್ತೆ ಜೈಲು ಪಾಲಾಗಿದ್ದು ನಿಮಗೆಲ್ಲ ಗೊತ್ತೇ ಇದೆ! ಅದಿರಲಿ, 'ದಿ ಡೆವಿಲ್' ಇದೀಗ ಬಿಡುಗಡೆಗೆ ಸಜ್ಜಾಗಿದೆ. ನಾಳೆ ಡಿಸೆಂಬರ್ 11 ರಂದು ನಿಮ್ಮೆಲ್ಲರ ಮುಂದೆ ಬರಲಿದೆ. ಡಿಸೆಂಬರ್ ಐದರಂದು ರಿಲೀಸ್ ಆಗಿದ್ದ ಟ್ರೇಲರ್ ನಿಜಕ್ಕೂ ಭಯಾನಕವಾಗಿದೆ! 'ದಾಸ' ಹೇಳಿ ಕೇಳಿ ಮಾಸ್ ಹೀರೋ. ಅವರ ಇಮೇಜ್‌ಗೆ ತಕ್ಕ ಹಾಗೆ 'ದಿ ಡೆವಿಲ್'

☞15

## ದರ್ಶನ್ ಮತ್ತು ಸಹಚರರ ವಿರುದ್ಧ 'ಕೋರ್ಟ್ ಟ್ರಯಲ್' ಗಂಭೀರ ಹಂತದಲ್ಲಿದೆ!



ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ದರ್ಶನ್ ಮತ್ತು ಸಹಚರರ ವಿರುದ್ಧ ನ್ಯಾಯಾಂಗ ಪ್ರಕ್ರಿಯೆ ಇದೀಗ ಅಧಿಕೃತವಾಗಿ ವೇಗ ಪಡೆದುಕೊಂಡಿದ್ದು, ಟ್ರಯಲ್ ಹಂತದಲ್ಲಿ ದೊಡ್ಡ ಮಟ್ಟದ ಸಾಕ್ಷಿಗಳ ಪರಿಶೀಲನೆ ಆರಂಭವಾಗಲಿದೆ!

ಪ್ರಾಸಿಕ್ಯೂಷನ್, ಈ ಪ್ರಕರಣಕ್ಕೆ ಸಂಬಂಧಿಸಿದಂತೆ 272 ಸಾಕ್ಷಿಗಳ ಬೃಹತ್ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಹಂತ ಹಂತವಾಗಿ ಎಲ್ಲರ ಹೇಳಿಕೆಗಳನ್ನು ದಾಖಲಿಸುವ ಕಾರ್ಯ ಮುಂದುವರಿಯಲಿದೆ! ಪ್ರಾಸಿಕ್ಯೂಷನ್, ಪುರಾವೆಗಳನ್ನು ಆಧರಿಸಿ ಸಾಕ್ಷಿಗಳನ್ನು ಕೆಳಗಿನ ಪ್ರಮುಖ ವಿಭಾಗಗಳಲ್ಲಿ ವಿಭಜಿಸಲಾಗಿದೆ.

★ಪ್ರೈವೇಟ್ ಸಾಕ್ಷಿಗಳು: 100, ★ಐ ವಿಟ್ನೆಸ್ಸ್: 02, ★ ಭಾಗಶಃ ಪ್ರತ್ಯಕ್ಷ/ಸಾಂದರ್ಭಿಕ ಸಾಕ್ಷಿಗಳು: 05, ★ಮಹಜರ್ ಸಾಕ್ಷಿಗಳು : 62, ★FSL/CFSL ಸಿಬ್ಬಂದಿ : 15, ★ ವೈದ್ಯರು: 01, ★ ತಾಂತ್ರಿಕ ಸಾಕ್ಷಿಗಳು: 04. ★ ಬ್ಯಾಂಕ್ ಅಧಿಕಾರಿಗಳು: 17, ★ ಮ್ಯಾಜಿಸ್ಟ್ರೇಟ್‌ಗಳು: 02, ★ಪೊಲೀಸ್ ಅಧಿ ಕಾರಿಗಳು: 64, ಈ ಪಟ್ಟಿಯೇ ಪ್ರಕರಣದ ಗಂಭೀರತೆಯನ್ನು ಸೂಚಿಸುವಂತಿದ್ದು, ಪ್ರತಿ ವಿಭಾಗದಿಂದ ಅನೇಕ ಮುಖ್ಯ ಮಾಹಿತಿಗಳು N-CW-09, ರೇಣುಕಾಸ್ವಾಮಿ ತಂದೆ ಕಾಶಿನಾಥಯ್ಯ CW-07, ರೇಣುಕಾಸ್ವಾಮಿ ತಾಯಿ ರತ್ನಪ್ರಭಾ CW-08 ಇದಲ್ಲದೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಮಹತ್ವದ ಪಾತ್ರ ವಹಿಸಿರುವ ಐವಿಟ್ನೆಸ್‌ಗಳಾದ ಕಿರಣ್ (CW-76) ಮತ್ತು ಪುನೀತ್ (CW-91) ಅವರ ಹೇಳಿಕೆಗಳು ಟ್ರಯಲ್‌ನಲ್ಲಿ ನಿರ್ಣಾಯಕವಾಗುವ ಸಾಧ್ಯತೆ ಇದೆ!



ಮೃತ ರೇಣುಕಾಸ್ವಾಮಿಯ ತಂದೆ, ತಾಯಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಭೇಟಿಯಾಗಿರುವುದು

ಸಮನ್ಸ್ ಜಾರಿಯಾದ ನಂತರ, ಎಲ್ಲ ಸಾಕ್ಷಿಗಳು ನ್ಯಾಯಾಲಯ ಸೂಚಿಸಿದ ದಿನಾಂಕದಲ್ಲಿ ಕೋರ್ಟ್‌ಗೆ ಹಾಜರಾಗಿ ಹೇಳಿಕೆ ನೀಡಬೇಕಿದೆ. ಪ್ರತಿಯೊಬ್ಬರ ಸಾಕ್ಷ್ಯವೂ ಪ್ರಕರಣದ ದಿಕ್ಕನ್ನೇ ಬದಲಾಯಿಸುವ ಸಾಮರ್ಥ್ಯ ಹೊಂದಿರುವುದರಿಂದ, ರೇಣುಕಾಸ್ವಾಮಿ ಹತ್ಯೆ ಕೇಸ್ ಈಗ ನ್ಯಾಯಾಲಯದಲ್ಲಿ ಅತ್ಯಂತ ಸಂವೇದನಶೀಲ ಅಂದ್ರೆ, ಗಂಭೀರ ಹಂತ ಪ್ರವೇಶಿಸಿದೆ ಎನ್ನಬಹುದು! ☯

# ಕಾಫಿ ತೋಟಗಳ ಮಾಲೀಕರೇ ಎಚ್ಚರ...

**ಕೊಡಗು ಸೇರಿದಂತೆ ಮಲೆನಾಡಿನಲ್ಲಿ ಇನ್ಮುಂದೆ ಬಿಡುವಿಲ್ಲದೆ ಕೆಲಸಗಳು ಆರಂಭವಾಗಲಿದೆ. ಅದರಲ್ಲೂ ಕಾಫಿ ಕೊಯ್ಲು ಆರಂಭವಾದ ಬಳಿಕ ಎಷ್ಟೇ ಕಾರ್ಮಿಕರಿದ್ದರೂ ಸಾಕಾಗುವುದಿಲ್ಲ. ಅದರಲ್ಲೂ ಕೆಲಸಕ್ಕೆ ಹೊರಗಿನವರನ್ನು ಆಶ್ರಯಿಸಬೇಕಾಗಿರುವುದರಿಂದ ಕೆಲಸಕ್ಕೆ ಬರುವವರು ಕಳ್ಳರೋ, ಪ್ರಾಮಾಣಿಕರೋ ಎಂಬುದು ಗೊತ್ತಾಗದಂತಾಗಿದೆ. ಆದ್ದರಿಂದ ಕೆಲಸಕ್ಕೆ ಬರುವವರು ಮಾಲೀಕರ ಬಗ್ಗೆ ತಿಳಿದುಕೊಂಡು ಮನೆಗೆ ಕನ್ನ ಹಾಕುವ ಸಾಧ್ಯತೆ ಹೆಚ್ಚಾಗಿದೆ. ಹೀಗಾಗಿ ಎಚ್ಚರಿಕೆ ವಹಿಸುವುದು ಇದೀಗ ಅನಿವಾರ್ಯವಾಗಿದೆ.**



**ಕೊಡಗು**

✍ಬಿ.ಎಂ. ಲವಕುಮಾರ್

ಮಲೆನಾಡುಗಳಲ್ಲಿ ಹೆಚ್ಚಾಗಿ ಒಂಟಿ ಮನೆಗಳಿದ್ದು, ಅಂತಹ ಮನೆಗಳನ್ನು ಕಳ್ಳರು ಹಾಗೂ ದರೋಡೆಕೋರರು ಟಾರ್ಗೆಟ್ ಮಾಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಪ್ರತಿಯೊಬ್ಬರೂ ಎಚ್ಚರ ವಹಿಸಬೇಕಾಗುತ್ತದೆ. ಅಲ್ಲದೆ ತಮಗೆ ತಾವೇ ಕೆಲವೊಂದು ಸುರಕ್ಷತಾ ಕ್ರಮಗಳನ್ನು



ಅಳವಡಿಸಿಕೊಳ್ಳಬೇಕಾಗಿದೆ. ತೋಟದಲ್ಲಿ ಕಾರ್ಮಿಕರ ಕೊರತೆಯಿದೆ ಎಂಬ ಕಾರಣ ಗುರುತು ಪರಿಚಯವಿಲ್ಲದವರನ್ನು ಸೇರಿಸಿಕೊಳ್ಳುವ ಮುನ್ನ ಅವರ ಬಗ್ಗೆ ತಿಳಿದುಕೊಳ್ಳುವುದು ಬಹು ಮುಖ್ಯ. ತಮ್ಮಲ್ಲಿ ಇರುವವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡ ಬೇಕಾಗುತ್ತದೆ.

ಇತ್ತೀಚೆಗಿನ ದಿನಗಳಲ್ಲಿ ಕಾಫಿ ಬೆಲೆ ಗಗನಕ್ಕೇರುತ್ತಿದ್ದಂತೆಯೇ ಬೆಳೆಗಾರರಿಗೆ ಕಾಫಿಯನ್ನು ಕಳ್ಳರಿಂದ ರಕ್ಷಿಸಿಕೊಳ್ಳುವುದು ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಮೊದಲೆಲ್ಲ ಕಾಫಿ ಕೊಯ್ಲು ಮಾಡಿ ಎಲ್ಲೆಂದರಲ್ಲಿ ರಾಶಿ ಹಾಕಿಟ್ಟರೂ ಯಾರೂ ಅದರ ಗೋಜಿಗೆ ಹೋಗುತ್ತಿರಲಿಲ್ಲ. ಆದರೆ ಈಗ ಹಾಗಿಲ್ಲ. ಕಾಫಿಯನ್ನು ಕೊಯ್ಲು ಮಾಡಿ ಮಾರಾಟ ಮಾಡುವ ತನಕ ಕಣ್ಣಿಗೆ ಎಣ್ಣೆ ಹಾಕಿಕೊಂಡು ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಈಗಾಗಲೇ ಅರೇಬಿಕಾ ಕಾಫಿ ಕೊಯ್ಲು ನಡೆಯುತ್ತಿದ್ದು, ರೋಬಸ್ಟಾ ಕಾಫಿ ಕೂಡ ಹಣ್ಣಾಗುತ್ತಿದ್ದು, ಕೊಯ್ಲು ಆರಂಭಗೊಳ್ಳಬೇಕಿದೆ. ಕೊಡಗಿನ ಹೆಚ್ಚಿನ ಪ್ರದೇಶದಲ್ಲಿ ರೊಬಸ್ಟಾ ಕಾಫಿಯನ್ನೇ ಬೆಳೆಯುತ್ತಿದ್ದು, ಇದು ಅರೇಬಿಕಾ ಕಾಫಿಯಷ್ಟು ಬೇಗ ಕೊಯ್ಲಿಗೆ ಬರುವುದಿಲ್ಲ. ಹೀಗಾಗಿ ಜನವರಿ ಮತ್ತು ಫೆಬ್ರವರಿವರೆಗೆ ಕೊಯ್ಲು ನಡೆಯಲಿದೆ. ಆದರೆ ಕಾಫಿ ಗಿಡದಲ್ಲಿ ಕೊಯ್ಲಿಗೆ ಬರುತ್ತಿದ್ದಂತೆಯೇ ಕಾಫಿ ಬೆಳೆಗಾರರಲ್ಲಿ ಆತಂಕವೂ ಶುರುವಾಗಿದೆ. ಕಾಫಿ ಹಣ್ಣಾಗುತ್ತಿದ್ದಂತೆಯೇ ಕೊಯ್ಲು ಮಾಡಿ ಮುಗಿಸಬೇಕಿದೆ. ಆದರೆ ಕೂಲಿ ಕಾರ್ಮಿಕರ ಕೊರತೆಯಿಂದಾಗಿ ಪರದಾಡುವಂತಾಗಿದೆ.

ಈ ಹಿಂದೆ ಸ್ಥಳೀಯವಾಗಿಯೇ ಕಾರ್ಮಿಕರು ಕೆಲಸಕ್ಕೆ ಸಿಗುತ್ತಿದ್ದರು. ಆದರೆ ಬದಲಾದ ಕಾಲದಲ್ಲಿ ತೋಟದಲ್ಲಿ ಕೆಲಸ ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ಇರುವ ಕೆಲವು ಕಾರ್ಮಿಕರು ಕೆಲವು ಎಸ್ಟೇಟ್‌ಗಳಲ್ಲಿ ಖಾಯಂ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಉಳಿದಂತೆ ಕಾರ್ಮಿಕರಿಗೂ ಹೆಚ್ಚಿನ ಬೇಡಿಕೆಯಿರುವುದರಿಂದ ಅವರನ್ನು ಮನೆಗೆ ಬಂದು ಕರೆದೊಯ್ಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಕಾರ್ಮಿಕರ ಕೊರತೆಯಿಂದಾಗಿ ದೂರದಿಂದ ಬರಲಿರುವ ಅಸ್ಸಾಂ ಕಾರ್ಮಿಕರನ್ನು ಕಾದು ಕುಳಿತುಕೊಳ್ಳುವಂತಾಗಿದೆ.

ಇದೆಲ್ಲದರ ನಡುವೆ ಮಳೆ ಮತ್ತು ಮಳೆ ಮೋಡದ ವಾತಾವರಣ ಇದ್ದುದರಿಂದ ಬೆಳೆಗಾರರು ಆತಂಕಗೊಂಡಿದ್ದಾರೆ. ಈ ಸಮಯದಲ್ಲಿ ಹೆಚ್ಚಿನ ಬಿಸಿಲಿನ ಅವಶ್ಯಕತೆಯಿದೆ. ಕೊಯ್ಲು ಮಾಡಿದ ಕಾಫಿ ಹಣ್ಣನ್ನು ಬಿಸಿಲು ಚೆನ್ನಾಗಿ ಬೀಳುವ ಪ್ರದೇಶದಲ್ಲಿ ಹರಡಿ ಒಣಗಿಸಬೇಕಾಗುತ್ತದೆ. ಹೀಗೆ ಹರಡಿ ಒಣಗಿಸುವುದೇ ಬೆಳೆಗಾರರಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಕಾರಣ ಕಳ್ಳರು ಹೆಚ್ಚಾಗುತ್ತಿದ್ದು, ಕೆಲವೆಡೆ ಒಣ ಹಾಕಿದ್ದಲ್ಲಿಂದಲೇ ಕಾಫಿಯನ್ನು ಕಳ್ಳತನ ಮಾಡುತ್ತಿರುವುದು ವರದಿಯಾಗಿದೆ. ಹೀಗಾಗಿ ರಾತ್ರಿ ಹಗಲು ಕಾವಲು ಕಾದು ಕಾಫಿಯನ್ನು ಒಣಗಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ದೂರದಿಂದ ಬಂದಿರುವ ಅಸ್ಸಾಂ ಕಾರ್ಮಿಕರಿಂದಲೇ ಕಾಫಿ ಕೊಯ್ಲು ಮಾಡಿಸಬೇಕಾಗಿದೆ. ಇತ್ತೀಚೆಗಿನ ವರ್ಷಗಳಲ್ಲಿ ಅವರಿಲ್ಲದೆ ತೋಟದ ಕೆಲಸವೇ ನಡೆಯುವುದಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ತಮ್ಮ ಕೆಲಸ ಬೇಗ ಮುಗಿಯಲಿ ಎಂಬ ಕಾರಣಕ್ಕಾಗಿ ತೋಟದ ಮಾಲೀಕರು ಸಿಕ್ಕ ಸಿಕ್ಕವರನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ. ಇದು ಅಪಾಯಕಾರಿ ಎಂಬುದು ಗೊತ್ತಿದ್ದರೂ ಅದನ್ನೇ ಮಾಡುತ್ತಿದ್ದಾರೆ. ಹಿಂದೆ ಕಾಫಿಯನ್ನು ದಾಸ್ತಾನಿಟ್ಟಲ್ಲಿಂದ ಕಳ್ಳತನ ಮಾಡುತ್ತಿದ್ದ ಪ್ರಕರಣಗಳು ನಡೆಯುತ್ತಿತ್ತು. ಆದರೀಗ ಹಸಿಕಾಫಿಯನ್ನೇ ಕಳ್ಳತನ ಮಾಡುತ್ತಿರುವ ಪ್ರಕರಣ ಬೆಳಕಿಗೆ ಬರುತ್ತಿದೆ.

ಹೀಗಿರುವಾಗ ಬೆಳೆಗಾರರು ಗುರುತು ಪರಿಚಯ



ವಿಲ್ಲದ ಮತ್ತು ಪೊಲೀಸ್ ಇಲಾಖೆ ನಿಯಮಗಳನ್ನು ಪಾಲಿಸದೆ ಕೆಲಸಕ್ಕೆ ದೂರದ ಅಸ್ಸಾಂನ ಕೆಲಸಗಾರರನ್ನು ನೇಮಿಸಿಕೊಳ್ಳುವುದು ಅಪಾಯಕಾರಿಯಾಗಿದೆ. ಒಂದು ವೇಳೆ ಪೊಲೀಸ್ ಇಲಾಖೆ ನೀಡಿರುವ ಸೂಚನೆ ಮತ್ತು ನಿಯಮವನ್ನು ಪಾಲಿಸದೆ ಹೋದರೆ ಅಪರಾಧ ಘಟನೆ ನಡೆದರೆ ಅದಕ್ಕೆ ಮಾಲೀಕರನ್ನೇ ಎ2 ಆರೋಪಿಯನ್ನಾಗಿ ಮಾಡಲಾಗುತ್ತದೆ. ಈ ಬಗ್ಗೆ ಮಾಲೀಕರು ಅರಿತು ಕೊಳ್ಳುವುದು ಒಳ್ಳೆಯದು.

ಪ್ರತಿವರ್ಷವೂ ಪೊಲೀಸ್ ಇಲಾಖೆಯಿಂದ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲೆಯಲ್ಲಿನ ಕಾಫಿ ಮತ್ತು ಕಾಳು ಮೆಣಸು ವ್ಯಾಪಾರಿಗಳು, ತೋಟದ ಮಾಲೀಕರೊಂದಿಗೆ ಸಭೆ ನಡೆಸಿ ಸೂಕ್ತ ಸಲಹೆ ಸೂಚನೆಗಳನ್ನು ಪಡೆದು, ಕಾಫಿ ಮತ್ತು ಕಾಳು ಮೆಣಸು ವ್ಯಾಪರಸ್ಥರ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಜತೆಗೆ ಕಾಫಿ ಮತ್ತು ಕಾಳು ಮೆಣಸು ವ್ಯಾಪಾರಸ್ಥರು ಕಾಫಿ ಮತ್ತು ಕಾಳು ಮೆಣಸು ಖರೀದಿ ಮಾಡುವ ಸಂದರ್ಭದಲ್ಲಿ ಮಾರಾಟ ಮಾಡುವವರ ಸಂಪೂರ್ಣ ಮಾಹಿತಿ (ಹೆಸರು, ವಿಳಾಸ, ಮೊಬೈಲ್ ಸಂಖ್ಯೆ)ಯನ್ನು ಸಂಗ್ರಹಿಸಿ ಇಟ್ಟುಕೊಳ್ಳುವಂತೆ ಸೂಚಿಸಲಾಗುತ್ತಿದೆ.

ಕಾಫಿ ಖರೀದಿ ಸಂದರ್ಭ ಸಂಶಯ ಉಂಟಾದಲ್ಲಿ ಅಂತಹ ವ್ಯಕ್ತಿಗಳ ಭಾವಚಿತ್ರವನ್ನು ತೆಗೆದುಕೊಳ್ಳುವುದು ಹಾಗೆಯೇ ಸದರಿ ಮಾರಾಟಗಾರರ ಕುರಿತು ಮತ್ತು ಅವರ ಹಿನ್ನೆಲೆಯನ್ನು ಪರಿಶೀಲಿಸಿ ಎಚ್ಚರಿಕೆಯಿಂದ ವ್ಯವಹರಿಸಲು ಬೆಳೆಗಾರರಿಗೆ ಸೂಚಿಸಲಾಗಿದೆ. ವ್ಯಾಪಾರಸ್ಥರು ಖರೀದಿದಾರರ ವಿವರವನ್ನು ಸಂಗ್ರಹಿಸದಿರುವುದು ಕಂಡುಬಂದಲ್ಲಿ ಅಂತಹ ವ್ಯಾಪರಸ್ಥರ ಮೇಲೆ ಸೆಕ್ಷನ್: 411 ಐಪಿಎಸ್ ಅಡಿಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಹಾಗೂ ನ್ಯಾಯಾಲಯವು 3 ವರ್ಷಗಳ ಕಾಲ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಎಚ್ಚರಿಕೆ ನೀಡಲಾಗಿದೆ.

ಇದರಾಚೆಗೆ ಮಲೆನಾಡಿನಲ್ಲಿ ಕಾಫಿಕೊಯ್ಲು ಸಂದರ್ಭದಲ್ಲಿ ಹೊರಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಅವರ ನಡುವೆ ಕಾರ್ಮಿಕರ ವೇಷದಲ್ಲಿ ಬರುವ ಕ್ರಿಮಿನಲ್ ಗಳಿರುವ ಸಂಭವವಿದೆ. ಆದ್ದರಿಂದ ಆ ಬಗ್ಗೆಯೂ ತೋಟದ ಮಾಲೀಕರು ಸೇರಿದಂತೆ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕಾಗುತ್ತದೆ. ಇದಕ್ಕಾಗಿ ಪೊಲೀಸ್ ಇಲಾಖೆ ಹಲವು ಸುರಕ್ಷತಾ ಸಲಹೆಗಳನ್ನು ನೀಡಿದೆ.

ಅದು ಏನೆಂದರೆ, ಮನೆಯ ಎದುರು ಬಾಗಿಲಿಗೆ ಸೆಂಟರ್ ಲಾಕ್ ಹಾಕಿ ಭದ್ರ ಪಡಿಸಿಕೊಳ್ಳುವುದು, ಮನೆಯ ಮುಂಭಾಗ ಹಾಗೂ ಹಿಂಬದಿ ಬಾಗಿಲಿಗೆ ಒಳಗಡೆಯಿಂದ ಕಬ್ಬಿಣದ ಅಡ್ಡ ಪಟ್ಟಿಯನ್ನು ಅಳವಡಿಸುವುದು, ಮನೆಯಿಂದ ಕಾರ್ಯಕ್ರಮ, ಜಾತ್ರೆಗಳಿಗೆ ಹೋಗುವಾಗ ಮನೆಯಲ್ಲಿ ಕನಿಷ್ಟ ಪಕ್ಷ ಒಬ್ಬರಾದರೂ ಮನೆಯಲ್ಲಿ ಉಳಿದುಕೊಳ್ಳುವುದು, ಗುಜರಿ ಹೆಕ್ಕುವವರು, ಹಾಸಿಗೆ ಮಾರಾಟ, ಬೆಡ್ ಸಿಟ್ ಮಾರಾಟ, ಸ್ಟವ್ ರಿಪೇರಿ ಬಂದಲ್ಲಿ ಅವರ ಆದಾರ್ ಕಾರ್ಡ್‌ನ ಪೋಟೋ ಹಾಗೂ ಅವರ ಪೋಟೊ ಮೊಬೈಲ್‌ನಲ್ಲಿ ತೆಗೆದಿಡುವುದು, ಗ್ಯಾಸ್ ಸಿಲಿಂಡರ್ ಬದಲಿಸುವ ಸಮಯ ಗ್ಯಾಸ್ ಸಿಲಿಂಡರ್‌ಗಳನ್ನು ರಸ್ತೆ ಬದಿಯಲ್ಲಿ ಇಟ್ಟು ಹೋಗಬಾರದು ಎಂಬ ಎಚ್ಚರಿಕೆ ನೀಡಲಾಗಿದೆ.

ಹಗಲು, ರಾತ್ರಿ ಹೊತ್ತಿನಲ್ಲಿ ಸಂಶಯಾಸ್ಪದವಾಗಿ ಯಾವುದೇ ವಾಹನ ರಸ್ತೆಯಲ್ಲಿ ನಿಂತಿದ್ದರೆ ನೋಂದಣಿ ನಂಬರ್ ಬರುವಂತೆ ಪೋಟೋ ತೆಗೆದಿಟ್ಟುಕೊಳ್ಳುವುದು, ರಸ್ತೆಗೆ ಕಾಣುವಂತೆ ಬಾಗಿಲಿಗೆ, ಗೇಟಿಗೆ ಬೀಗ ಹಾಕಬಾರದು, ಮನೆಯಲ್ಲಿ ಒಂಟಿಯಾಗಿರುವಾಗ ಮುಂಬಾಗಿಲು ಹಾಕಿಕೊಂಡು ಕೆಲಸ ಮಾಡುವುದು, ಮುಂಬಾಗಿಲು ಮತ್ತು ಹಿಂಬಾಗಿಲಿಗೆ ಸಮಾನ ಪ್ರಾಮುಖ್ಯತೆ ನೀಡುವುದು, ಮನೆಯ ಬಾಗಿಲು ತಟ್ಟಿದಾಗ, ಬೆಲ್ ಮಾಡಿದಾಗ ತಕ್ಷಣ ಬಾಗಿಲು ತೆರೆಯದೆ ಕಿಟಕಿಯಿಂದ ನೋಡಿ ಖಚಿತಪಡಿಸಿಕೊಂಡು ವ್ಯವಹರಿಸುವುದು, ಅಪರಿಚಿತರು ಮನೆ ಬಳಿ ಬಂದು ನೀರು ವಿಳಾಸ ಇತ್ಯಾದಿ ಕೇಳಲು ಬಂದಾಗ ಅವರಲ್ಲಿ ಜಾಗೃತೆಯಿಂದ ವ್ಯವಹರಿಸುವುದು ಒಳ್ಳೆಯದು.

ನೆರೆಹೊರೆಯವರೊಂದಿಗೆ ಸಂಬಾಷಣೆಯಲ್ಲಿ ತೊಡಗಲು ಅಥವಾ ಸಮಯ ಕಳೆಯಲು ತೆರಳುವಾಗ ಮನೆಗೆ ಮತ್ತು ಗೇಟಿಗೆ ಬೀಗ ಹಾಕುವುದನ್ನು ಮರೆಯ



ಬೇಡಿ, ಮನೆಗಳಲ್ಲಿ ಅಪ್ರಾಪ್ತ ವಯಸ್ಸಿನವರನ್ನು, ವಯೋವೃದ್ಧರನ್ನು ಬಿಟ್ಟು ಹೋಗುವುದನ್ನು ತಪ್ಪಿಸಿ, ಅಂಚೆ ಕೊರಿಯರ್ ಪಾರ್ಸೆಲ್ ಉಡುಗೊರೆಗಳನ್ನು ಪಡೆದುಕೊಳ್ಳುವಾಗ ಖಚಿತಪಡಿಸಿಕೊಂಡು ವ್ಯವಹರಿಸಿಕೊಳ್ಳುವುದು. ಕಿಟಕಿಯ ಪಕ್ಕ ಬೆಲೆ ಬಾಳುವ ವಸ್ತುಗಳು ಮೊಬೈಲ್ ಫೋನ್ ಇಡುವುದು ತಪ್ಪಿಸಿ, ಬೆಲೆ ಬಾಳುವ ವಸ್ತುಗಳನ್ನು ಆದಷ್ಟು ಬ್ಯಾಂಕ್ ಲಾಕರ್ ಗಳಲ್ಲಿ ಇಡುವುದು ಉತ್ತಮ, ಮನೆ ಬಾಗಿಲುಗಳಿಗೆ ಮ್ಯಾಜಿಕ್ ಅಲಾರ್ಮ್ ಸಿಸ್ಟಮ್‌ಗಳಂತಹ ಸುರಕ್ಷಾ ಸಾಮಾಗ್ರಿಗಳ ಬಗ್ಗೆ ಒತ್ತು ಕೊಡಿ, ನೀವು ಮನೆಯಲ್ಲಿ ಮಲಗುವ ಸಮಯದಲ್ಲಿ ಬಾಗಿಲು, ಕಿಟಕಿ ಬೀಗ ಹಾಕಿ ಭದ್ರಪಡಿಸಿರುವುದನ್ನು ಪುನ; ಖಚಿತ ಪಡಿಸಿಕೊಳ್ಳುವುದು, ಮನೆಗೆ ಬೀಗ ಹಾಕಿ ಪರ ಊರಿಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಅಕ್ಕ ಪಕ್ಕದವರಿಗೆ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕಾಗುತ್ತದೆ.

ಹೊಸದಾಗಿ ಬಾಡಿಗೆ ಬರುವ ವ್ಯಕ್ತಿಗಳ ಬಗ್ಗೆ ಮನೆ ಕೆಲಸದವರ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಭಾವಚಿತ್ರವನ್ನು ಅದಾರ್ ಕಾರ್ಡ್ ,ಅವರ ರಕ್ತ ಸಂಬಂದಿಗಳ ಮೊಬೈಲ್ ನಂ ಪಡೆಯಲು ಮರೆಯಬೇಡಿ, ಅನುಮಾನಾಸ್ಪದ ವ್ಯಕ್ತಿ ವಸ್ತು ವಾಹನಗಳ ಬಗ್ಗೆ ತಕ್ಷಣ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಿ, ಚಿನ್ನದ ಒಡವೆಗಳನ್ನು ಪಾಲೀಶ್ ಮಾಡುತ್ತೇನೆಂದು ಚಿನ್ನದ ಒಡವೆ ಮಾರಾಟ

☞10

# ಬೇರೊಬ್ಬನ ಜತೆ ಲವ್ವಿಡವ್ವಿಗೆ ಗಂಡನ ಹತ್ಯೆ!
## 9 ವರ್ಷ ಬಳಿಕ ಬಯಲಾಯ್ತು ಪತ್ನಿಯ ಮಸಲತ್ತು!!


ಆರೋಪಿ ಶಾಂತಾಬಾಯಿ

ಕಲಬುರಗಿಯ ಕಡಣ್ಣಿ ಗ್ರಾಮದಲ್ಲಿ 9 ವರ್ಷಗಳ ಹಿಂದೆ ಬೀರಪ್ಪ ಪೂಜಾರಿ ಸಾವನ್ನಪ್ಪಿದ್ದರು. ಅದನ್ನು ಎಲ್ಲರೂ ಸಹಜ ಸಾವು ಎಂದೇ ನಂಬಿದ್ದರು. ಆದರೆ, ಈಗ ಅದು ಸಹಜ ಸಾವು ಅಲ್ಲ, ಸುಪಾರಿ ಕೊಲೆ ಎಂಬ ಸತ್ಯ ಬಹಿರಂಗವಾಗಿದೆ. ಸುಪಾರಿ ಹಣ ಕೇಳಿದ್ದರಿಂದ 9 ವರ್ಷಗಳ ಬಳಿಕ ಕೊಲೆ ಕೇಸ್ ಬೆಳಕಿಗೆ ಬಂದಿದೆ. ಹೌದು... ಆತ ಕೃಷಿ ಚಟುವಟಿಕೆ ಮಾಡುತ್ತ ಪತ್ನಿ, ಮಕ್ಕಳೊಂದಿಗೆ ಸುಖ ಸಂಸಾರ ನಡೆಸುತ್ತಿದ್ದ. ಆದರೆ ಆತನ ಕುಡಿತ ಚಟ ಗಂಡ ಹೆಂಡತಿ ಮಧ್ಯೆ ಜಗಳಕ್ಕೆ ನಾಂದಿ ಹಾಡಿತ್ತು. ಗಂಡ ಕುಡಿತದ ಚಟಕ್ಕೆ ಬಿದ್ದರೆ ಹೆಂಡತಿ ಮತ್ತೋರ್ವನ ಜೊತೆ ಲವ್ವಿಡವ್ವಿ ಶುರುವಿಟ್ಟುಕೊಂಡು ಕುಚಿಕು ಕುಚಿಕು ಚಕ್ಕಂದ ಶುರು ಮಾಡಿದ್ದಳು. ಇದಕ್ಕೆ ಅಡ್ಡಿಯಾಗಿದ್ದ ಗಂಡನನ್ನ ಹೆಂಡತಿ ಪ್ರಿಯಕರನ ಜೊತೆಗೂಡಿ ಸುಪಾರಿ ಕೊಟ್ಟು ಹತ್ಯೆ ಮಾಡಿಸಿದ್ದಳು. ಹತ್ಯೆ ಮಾಡಿದ್ದರ ಬಗ್ಗೆ ಸಣ್ಣ ಸುಳಿವು ಸಿಗದಂತೆ ಗಂಡನಿಗೆ ಚಟ್ಟ ಕಟ್ಟಿದ್ದಳು. ಆದರೆ ಬರೋಬ್ಬರಿ 9 ವರ್ಷದ ಬಳಿಕ ಸುಪಾರಿ ಮರ್ಡರ್‌ಗೆ ಆಡಿಯೋ ಸಾಕ್ಷಿ ಸುಳಿವು ಕೊಟ್ಟು ಹಂತಕರನ್ನು ಕಂಬಿ ಹಿಂದೆ ತಳ್ಳಿದೆ. ಕಲಬುರಗಿ ಪೊಲೀಸರು 9 ವರ್ಷದ ಬಳಿಕ ಮರ್ಡರ್ ರಹಸ್ಯ ಭೇದಿಸಿದ್ದೇ ರೋಚಕ. 9 ವರ್ಷ ಇಂಟ್ರೆಸ್ಟಿಂಗ್ ಮರ್ಡರ್ ಮಿಸ್ಟರಿ ಇಲ್ಲಿದೆ.


ಕೊಲೆಯಾದ ಬೀರಪ್ಪ

ವೈರಲ್ ಆಗಿರುವ ಅದೊಂದು ವಿಡಿಯೋದಿಂದ 9 ವರ್ಷಗಳ ಹಿಂದೆ ನಡೆದಿದ್ದ ಕೊಲೆಯ ರಹಸ್ಯ ಇದೀಗ ಬಯಲಾಗಿದೆ. ಅನೈತಿಕ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿಯನ್ನು ಪತ್ನಿ ಸುಪಾರಿ ನೀಡಿ ಕೊಲೆ ಮಾಡಿಸಿದ್ದಳು. ಪ್ರಕರಣಕ್ಕೆ ಸಂಬಂಧಿಸಿದಂತೆ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಐವರನ್ನು ಬಂಧಿಸಲಾಗಿದೆ.


ಅನೈತಿಕ ಸಂಬಂಧಕ್ಕೆ ಅಡ್ಡಿಯಾಗಿದ್ದ ತನ್ನ ಪತಿಯನ್ನೇ ಸುಪಾರಿ ಕೊಟ್ಟು ಪತ್ನಿ ಕೊಲೆ ಮಾಡಿಸಿದ್ದ ಘಟನೆ ಕಲಬುರಗಿ ತಾಲೂಕಿನ ಕಡಣಿ ಗ್ರಾಮದಲ್ಲಿ ನಡೆದಿತ್ತು. ಸಹಜ ಸಾವು ಅಂತಾ ಬಿಂಬಿಸುವಲ್ಲಿ ಪತ್ನಿ ಯಶಸ್ವಿ ಕೂಡ ಆಗಿದ್ದಳು. ಆದರೆ ಬರೋಬ್ಬರಿ 9 ವರ್ಷಗಳ ಬಳಿಕ ಅದು ಸಹಜ ಸಾವಲ್ಲ ಕೊಲೆ ಎನ್ನುವುದು ಗೊತ್ತಾಗಿದೆ. ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಐವರನ್ನು ಬಂಧಿಸಲಾಗಿದೆ.

### ನಡೆದದ್ದೇನು?

ಕಲಬುರಗಿಯ ಕಡಣಿ ಗ್ರಾಮದಲ್ಲಿ 9 ವರ್ಷದ ಬಳಿಕ ವ್ಯಕ್ತಿಯ ಸಾವಿನ ರಹಸ್ಯ ಬಯಲಾಗಿದೆ. ಬೀರಪ್ಪ ಪೂಜಾರಿ ಕೊಲೆಯಾದ ವ್ಯಕ್ತಿ. 2016ರ ಏಪ್ರಿಲ್‌ನಲ್ಲಿ ಮನೆ ಹಿಂಬದಿಯೇ ಶವವಾಗಿ ಬಿದ್ದಿದ್ದ. ಕುಡಿತದ ಚಟದಿಂದಲೇ ಪತಿ ಸಾವನ್ನಪ್ಪಿದ್ದಾನೆಂದು ಪತ್ನಿ ಕಣ್ಣೀರು ಹಾಕಿದ್ದಳು. ಸಂಬಂಧಿಕರೂ ಇದನ್ನ ನಂಬಿ ಬೀರಪ್ಪನ ಅಂತ್ಯಕ್ರಿಯೆ ಮಾಡಿ ಮುಗಿಸಿದ್ದರು. ಆದರೆ ಇದೀಗ ವಿಡಿಯೋದಿಂದಾಗಿ ಬೀರಪ್ಪನದ್ದು ಸಹಜ ಸಾವಲ್ಲ, ಕೊಲೆ ಅನ್ನೋದು ಗೊತ್ತಾಗಿದೆ.

ಅಷ್ಟಕ್ಕೂ, ಅಂದು ಬೀರಪ್ಪನನ್ನ ಕೊಂದವನು ಮಹೇಶ್, ಪತಿ ಬೀರಪ್ಪನ ಕೊಲೆಗೆ ಗೆಳೆಯನ ಜತೆ ಸೇರಿ ಪತ್ನಿ ಶಾಂತಾಬಾಯಿ ಮಸಲತ್ತು ಮಾಡಿದ್ದು, ಈ ಮಹೇಶನ ಕೈಯಿಂದ ಕೊಲೆ ಮಾಡಿಸಿದ್ದಳಂತೆ. ಆದರೆ ಡೀಲ್ ಮುಗಿಸಿ 9 ವರ್ಷವಾದರೂ ನನಗೆ ಹಣ ಕೊಟ್ಟಿಲ್ಲ ಅಂತ ಮಹೇಶ್, ಶಾಂತಾಬಾಯಿ ಜತೆ ಜಗಳ ಆಡಿದ್ದಾನೆ. ಈ ವಿಡಿಯೋ ವೈರಲ್ ಆಗುತ್ತಿದ್ದಂತೆ, ಬೀರಪ್ಪನ ಸಹೋದರ ಫರಹತಬಾದ ಠಾಣೆ ಪೊಲೀಸರಿಗೆ ದೂರು ನೀಡಿದ್ದ. ಇದೀಗ ಪೊಲೀಸರು ಶಾಂತಾಬಾಯಿ, ಜೆಸಿಬಿ ಸಿದ್ದು, ಮಹೇಶ್, ಶಂಕರ್ ಹಾಗೂ ಸೂರ್ಯಕಾಂತ್‌ರನ್ನ ಅರೆಸ್ಟ್ ಮಾಡಿದ್ದಾರೆ.

ಗ್ರಾಮದ ಜೆಸಿಬಿ ಸಿದ್ದ ಎಂಬಾತನ ಜತೆಗೆ ಶಾಂತಾಬಾಯಿಗೆ ಅಕ್ರಮ ಸಂಬಂಧವಿತ್ತಂತೆ. ಇದಕ್ಕೆ ಅಡ್ಡಿಯಾಗಿದ್ದ ಪತಿಯನ್ನ ಕೊಲ್ಲಲು ಊಟದಲ್ಲಿ ಮಾತ್ರೆ ಹಾಕಿಯತ್ನಿಸಿದ್ದಾಳೆ. ಆವಾಗ ಬೀರಪ್ಪ ಸಾಯಲಿಲ್ಲ. ಬಳಿಕ ಇದೇ ಮಹೇಶನಿಗೆ ಜೆಸಿಬಿ ಸಿದ್ದ ಕೊಲೆ ಸುಪಾರಿ ನೀಡಿದ್ದಾನೆ. ಈ ಮಹೇಶ್ ತನ್ನ ಸ್ನೇಹಿತರ ಜತೆಗೂಡಿ ಬೀರಪ್ಪನಿಗೆ ಕಂಠಮಟ್ಟ ಕುಡಿಸಿ ಕತ್ತು ಹಿಸುಕಿ ಕೊಂದಿದ್ದಾರೆ. ಆದರೆ 9 ವರ್ಷವಾದರೂ ಹಂತಕ ಮಹೇಶನಿಗೆ ಸುಪಾರಿಯ ಬಾಕಿ ಹಣ ಕೊಟ್ಟಿರಲಿಲ್ಲ. ಇದೀಗ ಬಾಕಿ ಹಣಕ್ಕಾಗಿ ಮಹೇಶ್ ಪಟ್ಟು ಹಿಡಿದಿರುವ ವಿಡಿಯೋ ವೈರಲ್ ಆಗಿದೆ.


ಬಂಧಿತ ಆರೋಪಿಗಳಾದ ಜೆಸಿಬಿ ಸಿದ್ದು, ಮಹೇಶ್, ಶಂಕರ್ ಹಾಗೂ ಸೂರ್ಯಕಾಂತ್

ಒಟ್ಟಿನಲ್ಲಿ ಬರೋಬ್ಬರಿ 9 ವರ್ಷಗಳ ಹಿಂದೆ ನಡೆದ ಕೊಲೆ ಪ್ರಕರಣವನ್ನು ಒಂದೇ ಒಂದು ವಿಡಿಯೋ ಮೂಲಕ ಇದೀಗ ಇಡೀ ಪ್ರಕರಣವನ್ನು ಪೊಲೀಸರು ಬೇಧಿಸಿದ್ದಾರೆ. ಪತಿಯನ್ನ ಕೊಂದು ತಣ್ಣಗಿದ್ದ ಪತ್ನಿ ಒಂಬತ್ತು ವರ್ಷದ ಬಳಿಕ ಪ್ರೇಮಿ ಜೊತೆಗೆ ಕಂಬಿ ಹಿಂದೆ ಸೇರಿದ್ದಾಳೆ.

-ಬಿ.ವಿ. ಕುಲಕರ್ಣಿ


# ಹತ್ಯೆಯಾದವನ ಬರ್ತ್‌ಡೇ ದಿನವೇ ಹಂತಕರಿಗೆ ಜೀವಾವಧಿ ಶಿಕ್ಷೆ

2018ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಸಿದ್ಧಾರ್ಥ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಹೆಚ್ 59ನೇ ನ್ಯಾಯಾಲಯ ಮಹತ್ವದ ತೀರ್ಪು ನೀಡಿದೆ. ಕೊಲೆಯಾದ ಸಿದ್ಧಾರ್ಥ್ ಹುಟ್ಟುಹಬ್ಬದ ದಿನವೇ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ನ್ಯಾಯಾಲಯದ ಈ ಆದೇಶದಿಂದ ಮಗನ ಸಾವಿಗೆ ನ್ಯಾಯ ಸಿಕ್ಕಿದೆ ಎಂದು ಸಿದ್ಧಾರ್ಥ್ ತಂದೆ ಕೌಶಲೇಂದ್ರ ತಿಳಿಸಿದ್ದಾರೆ.


ಮೃತ ಸಿದ್ಧಾರ್ಥ್

ಹತ್ಯೆಯಾದವನ ಬರ್ತ್‌ಡೇ ದಿನವೇ ಹಂತಕರಿಗೆ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿರುವ ಅಪರೂಪದ ಪ್ರಸಂಗ ಬೆಂಗಳೂರಲ್ಲಿ ನಡೆದಿದೆ. 2018 ಜೂನ್‌ನಲ್ಲಿ ನಡೆದಿದ್ದ ಪಾಟ್ನಾ ಮೂಲದ ಸಿದ್ಧಾರ್ಥ ಕೊಲೆ ಪ್ರಕರಣ ಸಂಬಂಧ ಮಹತ್ವದ ತೀರ್ಪು ನೀಡಿರುವ ಬೆಂಗಳೂರಿನ ಸಿಸಿಹೆಚ್ 59ನೇ ನ್ಯಾಯಾಲಯ ಪ್ರಕರಣದ ಅಪರಾಧಿ ಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಜೊತೆಗೆ 10 ಸಾವಿರ ರೂ.ಗಳನ್ನ ಮೃತನ ತಂದೆಗೆ ಪಾವತಿಸಲು ನ್ಯಾಯಾಲಯ ಸೂಚಿಸಿದೆ.

2018ರ ಜೂನ್ 26ರಂದು, ಸಿದ್ಧಾರ್ಥ್ ತಮ್ಮ ಸ್ನೇಹಿತರೊಂದಿಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ರಾತ್ರಿ 2.45ರ ಸುಮಾರಿಗೆ, ಮೂತ್ರ ವಿಸರ್ಜನೆ ಮಾಡಲು ಕಾರು ನಿಲ್ಲಿಸಿದಾಗ ಬೈಕ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಅವರನ್ನು ಉದ್ದೇಶಪೂರ್ವಕವಾಗಿ ಬೈಕ್‌ನಿಂದ ಡಿಕ್ಕಿ ಹೊಡೆದು ಪರಾರಿಯಾಗಲು ಯತ್ನಿಸಿದ್ದರು. ಈ ವೇಳೆ ಮಾತಿಗೆ ಮಾತು ಬೆಳೆದು ಜಗಳವಾಗಿದ್ದು, ಆರೋಪಿಗಳು ಸಿದ್ಧಾರ್ಥ್‌ಗೆ ದೊಣ್ಣೆಯಿಂದ ಹೊಡೆದು ಪರಾರಿಯಾಗಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾದರೂ ಚಿಕಿತ್ಸೆ ಫಲಿಸದೆ ಸಿದ್ಧಾರ್ಥ್ ಜೂನ್ 28, 2018 ರಂದು ಮೃತಪಟ್ಟಿದ್ದನು. ಘಟನೆ ಬಳಿಕ ಆರೋಪಿಗಳಾದ ಗಿರೀಶ್ ಮತ್ತು ಮಹೇಶ್ ಎಂಬವರನ್ನ ಮೈಕೋ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದು, ತನಿಖೆ ನಡೆಸಿ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿರುವ ನ್ಯಾಯಾಲಯ ಕೊಲೆಯಾಗಿರುವ ಸಿದ್ಧಾರ್ಥ್ ಜನ್ಮದಿನವಾದ ಅಕ್ಟೋಬರ್ 24ರಂದೇ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ.


ಆರೋಪಿಗಳಾದ ಗಿರೀಶ್ ಹಾಗೂ ಮಹೇಶ್

### ಮಗನ ಸಾವಿಗೆ ನ್ಯಾಯ ಸಿಕ್ಕಿದೆ

ಕೊಲೆ ಪ್ರಕರಣ ವಿಚಾರವಾಗಿ ಬೆಂಗಳೂರಿನ ಸಿಸಿಹೆಚ್ 59ನೇ ನ್ಯಾಯಾಲಯ ನೀಡಿರುವ ಆದೇಶ ಮಗನ ಸಾವಿಗೆ ಸಿಕ್ಕ ನ್ಯಾಯ ಎಂದು ಸಿದ್ಧಾರ್ಥ್ ಪೋಷಕರು ಹೇಳಿದ್ದಾರೆ. ನಮ್ಮ ನೋವಿಗೆ ಉತ್ತರ ಸಿಕ್ಕಿದೆ ಎಂದು ಮೃತ ಸಿದ್ಧಾರ್ಥ್ ತಂದೆ ಕೌಶಲೇಂದ್ರ ತಿಳಿಸಿದ್ದಾರೆ.

# ಶಾಸಕದ್ವಯರ ಸಹಚರರಿಂದ 12 ಸಾವಿರ ಕೋಟಿ ಮೌಲ್ಯದ
# ಸರ್ಕಾರಿ ಲ್ಯಾಂಡ್ ಗ್ಯಾಬ್ರಿಂಗ್?!

'ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿಯಲ್ಲಿರುವ ಸುಮಾರು 12,000 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ 500 ಎಕರೆಗಳಿಗೂ ಹೆಚ್ಚು




ವಿಸ್ತೀರ್ಣದ ಸರ್ಕಾರಿ ಸ್ವತ್ತುಗಳನ್ನು ಸದ್ದಿಲ್ಲದೇ ಕಬಳಿಸಿರುವ / ಕಬಳಿಸುತ್ತಿರುವ ಪ್ರಭಾವೀ ಸರ್ಕಾರಿ ನೆಲಗಳ್ಳರು.'


ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿಯಲ್ಲಿರುವ ಬಹುತೇಕ ಗ್ರಾಮಗಳಲ್ಲಿ ಸುಮಾರು 1,600 ಎಕರೆಗಳಿಗೂ ಹೆಚ್ಚು ವಿಸ್ತೀರ್ಣದ ಸಾವಿರಾರು ಕೋಟಿ ಮೌಲ್ಯದ ಅತ್ಯಮೂಲ್ಯ ಸರ್ಕಾರಿ ಸ್ವತ್ತುಗಳಿವೆ. ಈ ಬಗ್ಗೆ 2006 ರಲ್ಲಿ 'ಎ. ಟಿ. ರಾಮಸ್ವಾಮಿ ಆಯೋಗ'ವು ಅತ್ಯಂತ ಸ್ಪಷ್ಟವಾದ ದಾಖಲೆಗಳ ಸಹಿತ 'ವರದಿಯನ್ನು ರಾಜ್ಯ ಸರ್ಕಾರಕ್ಕೆ ನೀಡಿರುತ್ತದೆ.

ಈ ಪೈಕಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯಲ್ಲಿರುವ ಹತ್ತಾರು ಗ್ರಾಮಗಳಲ್ಲಿರುವ 500 ಎಕರೆಗಳಿಗೂ ಹೆಚ್ಚು ವಿಸ್ತೀರ್ಣದ ಸರ್ಕಾರೀ ಸ್ವತ್ತುಗಳನ್ನು ಪ್ರಭಾವೀ ನೆಲಗಳ್ಳರು ಯಾವುದೇ ಎಗ್ಗಿಲ್ಲದೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ರೂ. 12,000 ಕೋಟಿಗೂ ಹೆಚ್ಚು ಮೌಲ್ಯದ ಸರ್ಕಾರೀ ಸ್ವತ್ತುಗಳನ್ನು ಕಬಳಿಸಿದ್ದಾರೆ / ಕಬಳಿಸುತ್ತಿದ್ದಾರೆ. ಈ ಪೈಕಿ, ಕೆಲವೊಂದನ್ನು ದಾಖಲೆಗಳ ಸಹಿತ ಈ ಕೆಳಗೆ ವಿವರಿಸಲಾಗಿದೆ..

1) ತಾವರೆಕೆರೆ ಹೋಬಳಿಯ 'ದೇವ ಮಾಚೋಹಳ್ಳಿ'ಗ್ರಾಮದ ಸರ್ವೆ ನಂ: 68ರಲ್ಲಿ 106.37 ಎಕರೆ ವಿಸ್ತೀರ್ಣದ 'ಸರ್ಕಾರಿ ಸ್ವತ್ತು' ಇದೆ. ಅದರ ಪೈಕಿ, ಒಟ್ಟು 45.15 ಎಕರೆ ವಿಸ್ತೀರ್ಣದ 'ಸರ್ಕಾರಿ ಗೋಮಾಳ' ಇರುತ್ತದೆ. ಇನ್ನುಳಿದ 61.22 ಎಕರೆ ಸ್ವತ್ತು ಸಂಪೂರ್ಣವಾಗಿ 'ಸರ್ಕಾರಿ 'ಎ' ಕರಾಬು ಮತ್ತು 'ಬಿ' ಕರಾಬು' ಸ್ವತ್ತುಗಳಾಗಿವೆ. ಸದರಿ 61.22 ಎಕರೆ ವಿಸ್ತೀರ್ಣದ ಸರ್ಕಾರಿ 'ಎ' ಕರಾಬು ಮತ್ತು 'ಬಿ' ಕರಾಬು ಸ್ವತ್ತುಗಳ ಪೈಕಿ ಒಂದಷ್ಟು ಸ್ವತ್ತನ್ನು ತಲಾ 2 ಎಕರೆಗಳಷ್ಟು ಜಮೀನುಗಳನ್ನು ಕೆಲವರಿಗೆ ಸರ್ಕಾರವು ಹಂಚಿಕೆ ಮಾಡಿರುತ್ತದೆ.

ಈ ರೀತಿ 'ಅನುಭವದಾರ'ರಾಗಿರುವ ಕೆಲವು ರೈತರಿಂದ ಜಮೀನುಗಳನ್ನು ಬಿಡಿಸಿಕೊಂಡು Form # 53 ಮತ್ತು # 55 ಹಾಕಿಸಿಕೊಂಡಿರುವ ಕೆಲವು ಸರ್ಕಾರಿ ನೆಲಗಳ್ಳರು ಕಾನೂನುಬಾಹಿರ ಕಾರ್ಯ ಮಾಡಿರುತ್ತಾರೆ. ಹಾಗೆಯೇ 'ಅನುಭವದಾರ'ರಲ್ಲದ ಆದರೆ, 'RTC' ಹೊಂದಿರುವ ಚೆಲುವರಾಜು ಬಿನ್ ಲೇಟ್. ಕರಿಯಪ್ಪ ಮತ್ತು ನಾಗಮನೋಹರಿ ಟಿ.ಎಸ್. ಕೋಂ ಬಾಲಕೃಷ್ಣ ಸೇರಿದಂತೆ ಮೂವರು ರೈತ(?)ರಿಂದ 'ರಾಮಚಂದ್ರೇಗೌಡ ಮತ್ತು ಅವರ ಧರ್ಮಪತ್ನಿ ಶ್ರೀಮತಿ ನಾಗವೇಣಮ್ಮ' ಎಂಬಿಬ್ಬರು ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯರಿಬ್ಬರು ಒಟ್ಟು 6 ಎಕರೆ ಸರ್ಕಾರಿ ಸ್ವತ್ತನ್ನು ಕಾನೂನಿನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ!!!

ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್ ಅವರ ಅನುಯಾಯಿಗಳಾಗಿರುವ ರಾಮಚಂದ್ರೇಗೌಡ ಮತ್ತು ನಾಗವೇಣಮ್ಮ ದಂಪತಿಗಳು ಕಬಳಿಸಿರುವ 6 ಎಕರೆ ವಿಸ್ತೀರ್ಣದ ಸರ್ಕಾರೀ ಸ್ವತ್ತಿನ ಮಾರುಕಟ್ಟೆ ಬೆಲೆ ಕನಿಷ್ಠ 60 ಕೋಟಿ ರೂ. ಗಳಿಗೂ ಹೆಚ್ಚಿರುತ್ತದೆ. ಈ 6 ಎಕರೆ ವಿಸ್ತೀರ್ಣದ ಸರ್ಕಾರೀ ಸ್ವತ್ತಿನ ಪೈಕಿ 1 ಎಕರೆ ವಿಸ್ತೀರ್ಣದಲ್ಲಿ ಕಾನೂನು ಬಾಹಿರವಾಗಿ 'Gas Godown' ಅನ್ನೂ ನಿರ್ಮಿಸಿದ್ದಾರೆ.



ಸದರಿ ರಾಮಚಂದ್ರೇಗೌಡ ಎಂಬ ಮಾಜಿ ತಾಲ್ಲೂಕು ಪಂಚಾಯ್ತಿ ಸದಸ್ಯ ಜದೇವ ಮಾಚೋಹಳ್ಳಿ' ಗ್ರಾಮದ ಸರ್ಕಾರೀ ಸ್ವತ್ತಿನಲ್ಲಿ 'ಅನುಭವ'ದಲ್ಲಿರುವ ರೈತರಿಂದ ಜಮೀನುಗಳನ್ನು ಬಿಡಿಸಿಕೊಂಡು ಖಾಸಗಿ ವ್ಯಕ್ತಿಗಳಿಗೆ 'ಮಾರಾಟ' ಮಾಡಿಸಿರುವುದಲ್ಲದೇ Record ಗಳನ್ನು ರಾಜಾರೋಷವಾಗಿ ಮಾಡಿಸುತ್ತಿದ್ದಾರೆ!!!

'ತಿಪ್ಪಗೊಂಡನ ಹಳ್ಳಿ ಕೆರೆ' ಮತ್ತು 'ಜಲಾಶಯ'ದ 'ಜಲಾನಯನ ಪ್ರದೇಶ' (Catchment Area) ವಾಗಿರುವ 'ದೇವ ಮಾಚೋಹಳ್ಳಿ' ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಾಮಚಂದ್ರೇಗೌಡ ಮತ್ತಿತರರು ರಾಜಾರೋಷವಾಗಿಯೇ 'ಮರಳು ದಂಧೆ' ಮತ್ತು 'ಮಣ್ಣಿನ ದಂಧೆ' ಯನ್ನು ಅಕ್ರಮವಾಗಿ ಯಾವುದೇ ಅಂಜಿಕೆಯಿಲ್ಲದೆ ನಡೆಸುತ್ತಿದ್ದಾರೆ !!!

2) ತಾವರೆಕೆರೆ ಹೋಬಳಿಯ 'ಯಲಚಗುಪ್ಪೆ ರಾಂಪುರ'ಗ್ರಾಮದ ಸರ್ವೆ ನಂ: 4 ರಲ್ಲಿ ಒಟ್ಟು 35.24 ಎಕರೆ ವಿಸ್ತೀರ್ಣದ ಸ್ವತ್ತು ಸಂಪೂರ್ಣವಾಗಿ 'ಸರ್ಕಾರೀ ಸ್ವತ್ತು' ಆಗಿದೆ. ಅದರ ಪೈಕಿ, ಒಟ್ಟು 16.26 ಎಕರೆ ಸ್ವತ್ತು ಸಂಪೂರ್ಣವಾಗಿ 'ಸರ್ಕಾರಿ ಗೋಮಾಳ' ಇದ್ದು, ಇನ್ನುಳಿದ 19.38 ಎಕರೆ ಸ್ವತ್ತು ಸಂಪೂರ್ಣವಾಗಿ 'ಎ' ಕರಾಬು ಮತ್ತು 'ಬಿ'ಕರಾಬು ಆಗಿರುತ್ತದೆ.

'ಯಲಚಗುಪ್ಪೆ ರಾಂಪುರ' ಗ್ರಾಮ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಬಹುತೇಕವಾಗಿ 'ವಾಣಿಜ್ಯ ಕಟ್ಟಡ'ಗಳು ನಿರ್ಮಾಣವಾಗಿವೆ. ಇದರಿಂದಾಗಿ ಈ ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರಸ್ತುತ ಮಾರುಕಟ್ಟೆ ಮೌಲ್ಯವು ಪ್ರತೀ ಎಕರೆಗೆ ಕನಿಷ್ಠ ರೂ. 10 ಕೋಟಿಗಳಿಗೂ ಹೆಚ್ಚಿರುತ್ತದೆ.



3) ತಾವರೆಕೆರೆ ಹೋಬಳಿಯ 'ಯಲಚಗುಪ್ಪೆ ರಾಂಪುರ' ಗ್ರಾಮದ ಸರ್ವೆ ನಂ: 4 ರಲ್ಲಿ ಒಟ್ಟು 35.24 ಎಕರೆ ವಿಸ್ತೀರ್ಣದ ಸ್ವತ್ತು ಸಂಪೂರ್ಣವಾಗಿ 'ಸರ್ಕಾರೀ ಸ್ವತ್ತು' ಆಗಿದೆ. ಅದರ ಪೈಕಿ, ಒಟ್ಟು 16.26 ಎಕರೆ ಸ್ವತ್ತು ಸಂಪೂರ್ಣವಾಗಿ 'ಸರ್ಕಾರೀ ಗೋಮಾಳ' ಇದ್ದು, ಇನ್ನುಳಿದ 19.38 ಎಕರೆ ಸಂಪೂರ್ಣವಾಗಿ 'ಸರ್ಕಾರೀ 'ಎ' ಕರಾಬು ಮತ್ತು 'ಬಿ' 'ಕರಾಬು'ಆಗಿರುತ್ತದೆ. ಇದರ ಪೈಕಿ, 15 ಎಕರೆ ಸ್ವತ್ತನ್ನು 'ಆಶ್ರಯ ಯೋಜನೆ'ಗೆಂದು ಮತ್ತು 1.18 ಎಕರೆ ಸ್ವತ್ತನ್ನು 'BMT' ಸಂಸ್ಥೆಗೆಂದು ಸರ್ಕಾರದಿಂದ ಹಂಚಿಕೆ ಮಾಡಲಾಗಿದೆ.

ಇನ್ನುಳಿದ ಸರ್ಕಾರೀ ಸ್ವತ್ತಿನ ಪೈಕಿ, ಒಟ್ಟು 2.20 ಎಕರೆ ವಿಸ್ತೀರ್ಣದ ಸುಮಾರು 20 ಕೋಟಿ ರೂ. ಗಳಿಗೂ ಹೆಚ್ಚು ಮೌಲ್ಯದ ಸರ್ಕಾರೀ ಸ್ವತ್ತಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ 'ರಂಗಸ್ವಾಮಯ್ಯ ಬಿನ್ ಕದರಪತಯ್ಯ' ಎಂಬ ಪ್ರಭಾವೀ ಸರ್ಕಾರೀ ನೆಲಗಳ್ಳ ಈಗಾಗಲೇ ಕಬಳಿಸಿದ್ದಾನೆ.

4) ತಾವರೆಕೆರೆ ಹೋಬಳಿಯ ಜಗಾಣಕಲ್ಲು ಗ್ರಾಮದ ಸರ್ವೆ ನಂ: 19ರಲ್ಲಿ ಒಟ್ಟು 90.14 ಎಕರೆ ವಿಸ್ತೀರ್ಣದ ಸ್ವತ್ತು ಸಂಪೂರ್ಣವಾಗಿ 'ಸರ್ಕಾರಿ ಸ್ವತ್ತು'ಆಗಿದೆ. ಅದರ ಪೈಕಿ, ಒಟ್ಟು 49.22 ಎಕರೆ 'ಸರ್ಕಾರಿ ಗೋಮಾಳ' ಪ್ರದೇಶವಾಗಿದ್ದು, ಇನ್ನುಳಿದ 40.32 ಎಕರೆ ಸಂಪೂರ್ಣವಾಗಿ 'ಸರ್ಕಾರಿ 'ಎ'ಕರಾಬು ಮತ್ತು 'ಬಿ'ಕರಾಬು' ಆಗಿರುತ್ತದೆ. ಇದರ ಪೈಕಿ, 1.30 ಎಕರೆ ವಿಸ್ತೀರ್ಣದ ಸ್ವತ್ತನ್ನು ರಾಮಕ್ಕ ಬಿನ್ ಗಂಗ ಹನುಮಯ್ಯ ಎಂಬುವವರು ಮತ್ತು 1.10 ಎಕರೆ ವಿಸ್ತೀರ್ಣದ ಸ್ವತ್ತನ್ನು ಲಕ್ಷ್ಮಮ್ಮ ಕೋಂ ಗಂಗ ಮುನಿಯಪ್ಪ ಎಂಬಿಬ್ಬರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸಿರುತ್ತಾರೆ.

ಆಶ್ಚರ್ಯವೆಂದರೆ, ಗಾಣಕಲ್ಲು ಗ್ರಾಮದ ಸರ್ಕಾರೀ ಸ್ವತ್ತುಗಳ ಪೈಕಿ ಎಲ್ಲ ಜಮೀನು ರಹಿತ ರೈತರಿಗೆ 198384 ರಲ್ಲಿ ಜಮೀನುಗಳು 'ಹಂಚಿಕೆ' ಆಗಿದ್ದರೆ, ಮೇಲೆ ತಿಳಿಸಿದ ಇಬ್ಬರಿಗೆ ಮಾತ್ರ ಅದಕ್ಕೂ ನಾಲ್ಕು ವರ್ಷಗಳ ಮೊದಲೇ ಅಂದರೆ, 1978-79 ರಲ್ಲೇ 'ಹಂಚಿಕೆ' ಮಾಡಿರುವ ದಾಖಲೆಗಳನ್ನು ಸೃಷ್ಟಿಸಲಾಗಿದೆ!!!

ರಾಮಕ್ಕ ಮತ್ತು ಲಕ್ಷ್ಮಮ್ಮ ಎಂಬಿಬ್ಬರ ಪರವಾಗಿ ರಮೇಶ್ ಮತ್ತು ಜಿ. ಲಕ್ಷ್ಮೀಪತಿ ಎಂಬಿಬ್ಬರು ಕ್ರಮವಾಗಿ 1.30 ಎಕರೆ ಮತ್ತು 1.10 ಎಕರೆ ವಿಸ್ತೀರ್ಣದ ಸ್ವತ್ತನ್ನು ತಮ್ಮ ತಮ್ಮ ಹೆಸರುಗಳಿಗೆ 'ಪಹಣಿ' ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದಾಗ ಗಾಣಕಲ್ಲು ಗ್ರಾಮದ ರಾಜಸ್ವ ನಿರೀಕ್ಷಕ (Revenue Inspector) ಅದನ್ನು ತಿರಸ್ಕರಿಸುತ್ತಾರೆ. ಆದರೆ, ಇದನ್ನು ಪರಿಗಣನೆ ಮಾಡದೇ ಆಗಿನ ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಯಾಗಿದ್ದ 'ರಂಗಪ್ಪ' ನವರು ಅದ್ಯಾರದ್ದೋ ಪ್ರಭಾವ (?) ಕ್ಕೆ ಒಳಗಾಗಿ ಕಾನೂನಿನ ಎಲ್ಲಾನಿಯಮಗಳನ್ನು ಗಾಳಿಗೆ ತೂರಿ ಸುಮಾರು 24 ಕೋಟಿ ರೂ. ಗಳಿಗೂ ಹೆಚ್ಚು ಮೌಲ್ಯದ 3 ಎಕರೆ ವಿಸ್ತೀರ್ಣದ ಸರ್ಕಾರಿ ಸ್ವತ್ತನ್ನು ರಮೇಶ್ ಮತ್ತು ಜಿ. ಲಕ್ಷ್ಮಿಪತಿ ಎಂಬಿಬ್ಬರ ಹೆಸರಿಗೆ 'ಪಹಣಿ' ಮಾಡಿಕೊಟ್ಟಿದ್ದಾರೆ !!!

5) ತಾವರೆಕೆರೆ ಹೋಬಳಿಯ 'ಯಲಚಗುಪ್ಪೆ' ಗ್ರಾಮದ ಸರ್ವೆ ನಂ: 20/2ರಲ್ಲಿ 2 ಎಕರೆ ಸ್ವತ್ತು ಸಂಪೂರ್ಣವಾಗಿ 'ಸರ್ಕಾರಿ ಸ್ವತ್ತು' ಆಗಿರುತ್ತದೆ. 'ಜೋಡಿ ಇನಾಂ ಭೂಮಿ' ಆಗಿರುವ ಈ 2 ಎಕರೆ ಸರ್ಕಾರಿ ಸ್ವತ್ತನ್ನು ರಂಗನಾಥ್ ಆರ್. ಮತ್ತು ಪ್ರಶಾಂತ್ ವೈ.ಹೆಚ್. ಎಂಬಿಬ್ಬರು ಸರ್ಕಾರೀ ನೆಲಗಳ್ಳರ ಹೆಸರಿಗೆ 'ಪಹಣಿ' ಮಾಡಿಕೊಡಲಾಗಿದೆ.

ಸುಮಾರು 16 ಕೋಟಿ ರೂ.ಗಳಿಗೂ ಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿರುವ ಈ 'ಅಮೂಲ್ಯ ಸರ್ಕಾರೀ ಸ್ವತ್ತ'ನ್ನು ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆಸಿ ರಾಜಸ್ವ ನಿರೀಕ್ಷಕ ಮೋನಿಷ್ ಹಾಗೂ ಗ್ರಾಮ ಲೆಕ್ಕಿಗರುಗಳಾದ ನಂಜೇಗೌಡ ಮತ್ತು ರವೀಂದ್ರ ಎಂಬ ಮಹಾ ಭ್ರಷ್ಟರು ರಂಗನಾಥ್ ಆರ್. ಮತ್ತು ಪ್ರಶಾಂತ್ ವೈ. ಹೆಚ್. ಎಂಬಿಬ್ಬರು ಪ್ರಭಾವೀ ಸರ್ಕಾರೀ ನೆಲಗಳ್ಳರ ಹೆಸರುಗಳಿಗೆ ಕಾನೂನುಬಾಹಿರವಾಗಿ 'ಪಹಣಿ' ಮಾಡಿಕೊಟ್ಟಿದ್ದಾರೆ!!!

6) ತಾವರೆಕೆರೆ ಹೋಬಳಿಯ 'ಕುರುಬರ ಹಳ್ಳಿ' ಗ್ರಾಮದ ಸರ್ವೆ ನಂ: 116ರಲ್ಲಿರುವ ಒಟ್ಟು 85.09 ಎಕರೆ ಸ್ವತ್ತು ಸಂಪೂರ್ಣವಾಗಿ 'ಸರ್ಕಾರಿ ಸ್ವತ್ತು' ಆಗಿರುತ್ತದೆ. ಇದರ ಈಗಿನ ಮಾರುಕಟ್ಟೆ ಮೌಲ್ಯವೇ ಸುಮಾರು 850 ಕೋಟಿ ರೂ.ಗಳಿಗೂ ಅಧಿಕವಾಗಿರುತ್ತದೆ!!!

2006ರಿಂದೀಚೆಗೆ ಮಾಡಿರುವ ಎಲ್ಲಾ ದಾಖಲೆಗಳು ಸಂಪೂರ್ಣವಾಗಿ ನಕಲಿ ದಾಖಲೆಗಳೇ ಆಗಿವೆ. ಬಹುತೇಕ ಮಾಗಡಿ ಕ್ಷೇತ್ರದಿಂದ ಬಂದಿರುವ ಜನರ ಹೆಸರುಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು O. M. ಮಾಡಲಾಗಿದೆ !!!

'ಎ.ಟಿ. ರಾಮಸ್ವಾಮಿ ಆಯೋಗ'ನೀಡಿರುವ ನಕ್ಷೆಗಳಿಗೂ ಮತ್ತು ಈಗ ಸೃಷ್ಟಿಸಲಾಗಿರುವ 'RTC'ಗಳಿಗೂ ತಾಳೆಯೇ ಆಗುವುದಿಲ್ಲ !!! ಉದಾಹರಣೆಗೆ,





**ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಗ್ರಾಮಗಳು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುವ ಕಾರಣ ಈ ಭಾಗದ ಸ್ವತ್ತುಗಳಿಗೆ ಮೊದಲಿಗಿಂತಲೂ ದುಪ್ಪಟ್ಟು ಮಾರುಕಟ್ಟೆ ಮೌಲ್ಯ ಸೃಷ್ಟಿಯಾಗಿದೆ. ಇದರಿಂದಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಮಾತ್ರವೇ 12,000 ಕೋಟಿಗೂ ಹೆಚ್ಚು ಮೌಲ್ಯದ 500 ಎಕರೆಗಳಿಗೂ ಹೆಚ್ಚು ವಿಸ್ತೀರ್ಣದ 'ಅತ್ಯಮೂಲ್ಯ ಸರ್ಕಾರಿ ಸ್ವತ್ತು'ಗಳನ್ನು ಭ್ರಷ್ಟ ಅಧಿಕಾರಿಗಳ ನೆರವಿನಿಂದ ಪ್ರಭಾವೀ ಸರ್ಕಾರೀ ನೆಲಗಳ್ಳರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸುವ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಲೇ ಇದೆ! ಇದೀಗ ಬಿಜೆಪಿ ನಾಯಕ ಎನ್. ಆರ್. ರಮೇಶ್ ಸ್ಫೋಟಗೊಳಿಸಿರುವ 1,67,751 ಪುಟಗಳ ದಾಖಲೆ ಭಾರತೀಯ ಇತಿಹಾಸದಲ್ಲೇ ಒಂದು ದಾಖಲೆ!**

ಆಂಜಿನಪ್ಪ ಎಂಬುವವರ ಹೆಸರಿಗೆ 3.00 ಎಕರೆ ವಿಸ್ತೀರ್ಣದ ಸರ್ಕಾರೀ ಸ್ವತ್ತಿಗೆ ನೀಡಿರುವ 'ಹಕ್ಕು ಪತ್ರ'ನಕಲಿ ಆಗಿದೆ !!!

ಈ ಹಿಂದೆ ಬೆಂಗಳೂರು ದಕ್ಷಿಣ ತಾಲ್ಲೂಕಿನ 'ಉಪ ವಿಭಾಗಾಧಿಕಾರಿ'ಗಳಾಗಿ ಕಾರ್ಯ ನಿರ್ವಹಿಸಿದ್ದ 'ರಘುನಂದನ್' ಅವರು ನೀಡಿರುವ ಆದೇಶವೇ ನಕಲಿಯಾಗಿದೆ!!! ಆದರೂ ಸಹ, ಸದರಿ 3.00 ಎಕರೆ ಸ್ವತ್ತನ್ನು ಆಂಜಿನಪ್ಪ ಅವರ ಧರ್ಮಪತ್ನಿ ಪುಟ್ಟಲಕ್ಷ್ಮಿ ರವರ ಹೆಸರಿಗೆ MR ಮಾಡಿಕೊಡಲಾಗಿದೆ. ಉಪ ವಿಭಾಗಾಧಿಕಾರಿಗಳಾಗಿದ್ದ ರಘುನಂದನ್ ಅವರು ಈ ಕಾನೂನು ಬಾಹಿರ ಕಾರ್ಯವನ್ನೆಸಗಿದ್ದಾರೆ.



7) ತಾವರೆಕೆರೆ ಹೋಬಳಿಯ 'ಕುರುಬರ ಹಳ್ಳಿ' ಗ್ರಾಮದ ಸರ್ವೆ ನಂ: 158ರಲ್ಲಿರುವ 113.07 ಎಕರೆ ವಿಸ್ತೀರ್ಣದ ಸ್ವತ್ತು ಸಂಪೂರ್ಣವಾಗಿ ಸರ್ಕಾರೀ ಸ್ವತ್ತು ಆಗಿದೆ. ಸುಮಾರು 1,000 ಕೋಟಿ ರೂ.ಗಳಿಗೂ ಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿರುವ 113.07 ಎಕರೆ ವಿಸ್ತೀರ್ಣದ ಸರ್ಕಾರೀ ಸ್ವತ್ತಿನ ಬಹುಪಾಲನ್ನು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಭ್ರಷ್ಟ ಅಧಿಕಾರಿಗಳ ನೆರವಿನಿಂದ ಕೆಲವು ಪ್ರಭಾವೀ ವ್ಯಕ್ತಿಗಳು ಈಗಾಗಲೇ ಕಬಳಿಸಿದ್ದಾರೆ. ಇದೇ ಸರ್ಕಾರೀ ಸ್ವತ್ತಿನಲ್ಲಿ ಮಾಗಡಿ ಕ್ಷೇತ್ರದ ಶಾಸಕ ಹೆಚ್.ಸಿ. ಬಾಲಕೃಷ್ಣ ಅವರ ಧರ್ಮಪತ್ನಿ ಶ್ರೀಮತಿ ರಾಧ ಬಾಲಕೃಷ್ಣ ಅವರೂ ಸೇರಿದಂತೆ ಪ್ರಭಾವೀ ವ್ಯಕ್ತಿಗಳು ಅಪಾರ ಪ್ರಮಾಣದ ಸರ್ಕಾರೀ ಸ್ವತ್ತನ್ನು ನಕಲಿ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಕಬಳಿಸಿದ್ದಾರೆ.

8) ತಾವರೆಕೆರೆ ಹೋಬಳಿಯ 'ತಾವರೆಕೆರೆ' ಗ್ರಾಮದ ಸರ್ವೆ ನಂ: 15 ರಲ್ಲಿ 3.07 ಎಕರೆ ವಿಸ್ತೀರ್ಣದ 'ಬೆಂಗಳೂರಯ್ಯನ ಕೆರೆ' ಇರುತ್ತದೆ.

ಸುಮಾರು 35 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯವಿರುವ 3.07 ಎಕರೆ ವಿಸ್ತೀರ್ಣದ 'ಬೆಂಗಳೂರಯ್ಯನ ಕೆರೆ' ಯನ್ನೇ ನಕಲಿ ದಾಖಲೆಗಳನ್ನು ಸೃಷ್ಟಿಸಿರುವ 'ಟಿ. ಎನ್. ಕೃಷ್ಣಪ್ಪ ಬಿನ್ ಲೇಟ್. ನರಸೇಗೌಡ' ಎಂಬಾತನ ಹೆಸರಿಗೆ 'ಖಾತೆ' ಮಾಡಿಕೊಡಲಾಗಿದೆ!!!

2006 ರಲ್ಲಿ ಇದೇ ಸರ್ಕಾರೀ ಸ್ವತ್ತಿಗೆ ಖಾತೆ ಮಾಡಿಕೊಡುವ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿರುತ್ತದೆ. 2012 ರ ವಿಭಾಗ ಪತ್ರದಲ್ಲಿ ಸರ್ವೆ ನಂಬರ್ ಇರುವುದಿಲ್ಲ. ಆದರೆ, ದಿಢೀರನೆ 2022 ರಲ್ಲಿ ಹೊಸ 'ವಿಭಾಗ ಪತ್ರ'ದಲ್ಲಿ ಹೊಸ ಸರ್ವೆ ನಂಬರ್ ಸೇರಿಸಿ 'ಟಿ.ಎನ್. ಕೃಷ್ಣಪ್ಪ ಬಿನ್ ಲೇಟ್. ನರಸೇಗೌಡ' ಎಂಬಾತನ ಹೆಸರಿಗೆ ಖಾತೆ ಮಾಡಿ ಕೊಡಲಾಗಿದೆ!!!

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಸೀಲ್ದಾರ್ ಕಛೇರಿಯ "Record Room'ನಲ್ಲಿ ಕೆಲಸ ಮಾಡುತ್ತಿದ್ದ 'ಮಂಜುನಾಥ್' ಅಲಿಯಾಸ್ 'ವಾಲೆ ಮಂಜು' ಮತ್ತು ಪರಮ ಭ್ರಷ್ಟ ರಾಜಸ್ವ ನಿರೀಕ್ಷಕ ಎಂಬ ಕುಖ್ಯಾತಿಗೆ ಪಾತ್ರನಾಗಿರುವ ಮೋನಿಷ್ ಎಂಬಾತನೊಂದಿಗೆ ಮತ್ತೊಬ್ಬ Revenue Inspector ನವೀನ್ ಮತ್ತು ಕಛೇರಿ ಸಹಾಯಕ (Office Assistant) ಪ್ರಶಾಂತ್ ಗೌಡ ಪಾಟೀಲ್ ಎಂಬುವವರ ನೆರವಿನೊಂದಿಗೆ ಸೃಷ್ಟಿಸಲಾಗಿರುವ 'ನಕಲಿ ದಾಖಲೆ' ಗಳನ್ನು ಪರಿಶೀಲನೆ ಮಾಡದೆಯೇ ಅಂದಿನ ವಿಶೇಷ ಜಿಲ್ಲಾಧಿಕಾರಿ ಸೋಮಶೇಖರ್ ಅವರು ಮಾಡಿರುವ ಕಾನೂನುಬಾಹಿರ ಆದೇಶದನ್ವಯ 'ಸರ್ಕಾರಿ ಕೆರೆ' ಸ್ವತ್ತನ್ನು ಟಿ.ಎನ್. ಕೃಷ್ಣಪ್ಪ ಬಿನ್ ಲೇಟ್ ನರಸೇಗೌಡ ಎಂಬಾತನ ಹೆಸರಿಗೆ 'ಖಾತೆ' ಮಾಡಿಕೊಡಲಾಗಿದೆ!!!

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಗ್ರಾಮಗಳು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುವ ಕಾರಣ ಈ ಭಾಗದ ಸ್ವತ್ತುಗಳಿಗೆ ಮೊದಲಿಗಿಂತಲೂ ದುಪ್ಪಟ್ಟು ಮಾರುಕಟ್ಟೆ ಮೌಲ್ಯ ಸೃಷ್ಟಿಯಾಗಿದೆ. ಇದರಿಂದಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಮಾತ್ರವೇ 12,000 ಕೋಟಿಗೂ ಹೆಚ್ಚು ಮೌಲ್ಯದ 500 ಎಕರೆಗಳಿಗೂ ಹೆಚ್ಚು ವಿಸ್ತೀರ್ಣದ 'ಅತ್ಯಮೂಲ್ಯ ಸರ್ಕಾರಿ ಸ್ವತ್ತು'ಗಳನ್ನು ಭ್ರಷ್ಟ ಅಧಿಕಾರಿಗಳ ನೆರವಿನಿಂದ ಪ್ರಭಾವೀ ಸರ್ಕಾರೀ ನೆಲಗಳ್ಳರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸುವ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಲೇ ಇದೆ !!!

**'ಆಗ್ರಹ'**


1) ಮೇಲೆ ತಿಳಿಸಿರುವ 8 ಪ್ರಕರಣಗಳಲ್ಲಿ ನೂರಾರು ಕೋಟಿ ರೂ.ಗಳಷ್ಟು ಮಾರುಕಟ್ಟೆ ಮೌಲ್ಯವಿರುವ ಅಮೂಲ್ಯ ಸ್ವತ್ತುಗಳನ್ನು ಕಬಳಿಸಿರುವ ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯರಾದ ರಾಮಚಂದ್ರೇಗೌಡ ಮತ್ತು ಅವರ ಧರ್ಮಪತ್ನಿ ಶ್ರೀಮತಿ ನಾಗವೇಣಮ್ಮ, ಶ್ರೀಮತಿ ರಾಧ ಬಾಲಕೃಷ್ಣ ಕೋಂ ಹೆಚ್.ಸಿ. ಬಾಲಕೃಷ್ಣ, ರಾಮಕ್ಕ, ಲಕ್ಷ್ಮಮ್ಮ, ರಮೇಶ್, ಜಿ. ಲಕ್ಷ್ಮೀಪತಿ, ರಂಗಸ್ವಾಮಯ್ಯ, ರಂಗನಾಥ್ ಆರ್., ಪ್ರಶಾಂತ್ ವೈ.ಹೆಚ್., ಪುಟ್ಟಲಕ್ಷ್ಮಿ ಕೋಂ ಆಂಜಿನಪ್ಪ ಮತ್ತು ಟಿ. ಎನ್. ಕೃಷ್ಣಪ್ಪ ಬಿನ್ ಲೇಟ್. ನರಸೇಗೌಡರವರುಗಳ ವಿರುದ್ಧ ಹಾಗೂ ಈ ಅಮೂಲ್ಯ ಸರ್ಕಾರಿ ಸ್ವತ್ತು ಕಬಳಿಕೆಗೆ ಎಲ್ಲಾ ರೀತಿಯ ಸಹಾಯ / ಸಹಕಾರ ನೀಡಿರುವ 'ಕಂದಾಯ ಇಲಾಖೆ'ಯ ಅತ್ಯಂತ ಭ್ರಷ್ಟ ಅಧಿಕಾರಿ / ನೌಕರರಾದ ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳಾಗಿದ್ದ ರಂಗಪ್ಪ ಮತ್ತು ಸೋಮಶೇಖರ್, ಅಪರ ಜಿಲ್ಲಾಧಿಕಾರಿಗಳಾಗಿದ್ದ (ADC) ಆರತಿ ಆನಂದ್, ಬೆಂಗಳೂರು ದಕ್ಷಿಣ ತಾಲ್ಲೂಕಿನ ಉಪ ವಿಭಾಗಾಧಿಕಾರಿಗಳಾಗಿದ್ದ ರಜನೀಕಾಂತ್, ಅಪೂರ್ವ ಬಿದರಿ ಮತ್ತು ರಘುನಂದನ್, ತಹಸೀಲ್ದಾರ್ ಆಗಿದ್ದ ಶ್ರೀನಿವಾಸ್, ಉಪ ತಹಸೀಲ್ದಾರ್ ಕೆಂಪೇಗೌಡ, ರಾಜಸ್ವ ನಿರೀಕ್ಷಕ ಮೋನಿಷ್, ಗ್ರಾಮ ಲೆಕ್ಕಿಗರುಗಳಾದ ನಂಜೇಗೌಡ ಮತ್ತು ರವೀಂದ್ರ, Revenue Inspector ನವೀನ್, ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಸೀಲ್ದಾರ್ ಕಛೇರಿಯ "Record Room'ನಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಅಲಿಯಾಸ್ ವಾಲೆ ಮಂಜು ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಯ ಕಛೇರಿ ಸಹಾಯಕ (Office Assistant) ಪ್ರಶಾಂತ್ ಗೌಡ ಪಾಟೀಲ್ ರವರುಗಳ ವಿರುದ್ಧ ಕಾನೂನು ರೀತ್ಯಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು, ಕಂದಾಯ ಸಚಿವರನ್ನು, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರನ್ನು ಆಗ್ರಹಿಸಲಾಗಿದೆ.

2) ಸರ್ಕಾರಿ ನೆಲಗಳ್ಳರ ಪಾಲಾಗಿರುವ ತಾವರೆಕೆರೆ ಹೋಬಳಿಯ 12,000 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ 500 ಎಕರೆಗಳಿಗೂ ಹೆಚ್ಚು ವಿಸ್ತೀರ್ಣದ ಅಮೂಲ್ಯ ಸರ್ಕಾರಿ ಸ್ವತ್ತುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತೆ ಆಗ್ರಹಿಸಲಾಗಿದೆ.

3) ತಾವರೆಕೆರೆ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಸರ್ಕಾರಿ ನೆಲಗಳ್ಳರ ಪಾಲಾಗದೆ ಉಳಿದುಕೊಂಡಿರುವ 30,000 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸುಮಾರು 1,100 ಎಕರೆಗಳಿಗೂ ಹೆಚ್ಚು ವಿಸ್ತೀರ್ಣದ ಸರ್ಕಾರಿ ಸ್ವತ್ತುಗಳನ್ನು ಸಂರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಕೂಡಲೇ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಲಾಗಿದೆ.

**ದೂರುಗಳು**

1) ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯರಾದ ರಾಮಚಂದ್ರೇಗೌಡ ಮತ್ತು ಅವರ ಧರ್ಮಪತ್ನಿ ಶ್ರೀಮತಿ ನಾಗವೇಣಮ್ಮ ಹಾಗೂ ಶ್ರೀಮತಿ ರಾಧ ಬಾಲಕೃಷ್ಣ ಕೋಂ ಎ. ಇ. ಬಾಲಕೃಷ್ಣ, ರಾಮಕ್ಕ, ಲಕ್ಷ್ಮಮ್ಮ, ರಮೇಶ್, ಜಿ. ಲಕ್ಷ್ಮೀಪತಿ, ರಂಗಸ್ವಾಮಯ್ಯ, ರಂಗನಾಥ್ ಆರ್., ಪ್ರಶಾಂತ್ ವೈ.ಹೆಚ್., ಪುಟ್ಟಲಕ್ಷ್ಮಿ ಕೋಂ ಆಂಜಿನಪ್ಪ ಮತ್ತು ಟಿ.ಎನ್. ಕೃಷ್ಣಪ್ಪ ಬಿನ್ ಲೇಟ್. ನರಸೇಗೌಡರವರುಗಳ ವಿರುದ್ಧ ಹಾಗೂ ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳಾಗಿದ್ದ ರಂಗಪ್ಪ ಮತ್ತು ಸೋಮಶೇಖರ್, ಅಪರ ಜಿಲ್ಲಾಧಿಕಾರಿಗಳಾಗಿದ್ದ (ADC) ಆರತಿ ಆನಂದ್, ಬೆಂಗಳೂರು ದಕ್ಷಿಣ ತಾಲ್ಲೂಕಿನ ಉಪ ವಿಭಾಗಾಧಿಕಾರಿಗಳಾಗಿದ್ದ ರಜನೀಕಾಂತ್, ಅಪೂರ್ವ ಬಿದರಿ ಮತ್ತು ರಘುನಂದನ್, ತಹಸೀಲ್ದಾರ್ ಆಗಿದ್ದ ಶ್ರೀನಿವಾಸ್, ಉಪ ತಹಸೀಲ್ದಾರ್ ಕೆಂಪೇಗೌಡ, ರಾಜಸ್ವ ನಿರೀಕ್ಷಕ ಮೋನಿಷ್, ಗ್ರಾಮ ಲೆಕ್ಕಿಗರುಗಳಾದ ನಂಜೇಗೌಡ ಮತ್ತು ರವೀಂದ್ರ, Revenue Inspector ನವೀನ್, ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಸೀಲ್ದಾರ್ ಕಛೇರಿಯ 'Record Room' ನಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಅಲಿಯಾಸ್ ವಾಲೆ ಮಂಜು ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಯ ಕಛೇರಿ ಸಹಾಯಕ ಪ್ರಶಾಂತ್ ಗೌಡ ಪಾಟೀಲ್‌ರವರುಗಳ ವಿರುದ್ಧ ಭ್ರಷ್ಟಾಚಾರ, ನಕಲಿ ದಾಖಲೆ ತಯಾರಿಕೆ, ವಂಚನೆ, ಸರ್ಕಾರಿ ಭೂ ಕಬಳಿಕೆಗೆ ಸಹಕಾರ ಮತ್ತು ಅಧಿಕಾರ ದುರುಪಯೋಗ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ರೀತ್ಯಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕರ್ನಾಟಕ ಲೋಕಾಯುಕ್ತ ಹಾಗೂ ಲೋಕಾಯುಕ್ತದ ADGP, IGP ಅವರಲ್ಲಿ ಮತ್ತು ಜಾರಿ ನಿರ್ದೇಶನಾಲಯ (ED) ದಲ್ಲಿ ಈ ಬೃಹತ್ ಭೂ ಕಬಳಿಕೆ ಹಗರಣಕ್ಕೆ ಸಂಬಂಧಿಸಿದ ಒಟ್ಟು 8,879 ಪುಟಗಳ ಸಂಪೂರ್ಣ ದಾಖಲೆಗಳ ಸಹಿತ ದೂರುಗಳನ್ನು ದಾಖಲಿಸಲಾಗಿದೆ.



# ಖೈದಿಗಳ ಮೇಲೆ ನಿಗಾ ಇಡಲು ಟ್ರ್ಯಾಕಿಂಗ್ ಸಿಸ್ಟಂ ಜಾರಿ!!

4 ☞

ಕಾರಾಗೃಹ ಬಂಧಿಗಳ ಚಲನವಲನಗಳ ಮೇಲೆ ಸಂಪೂರ್ಣ ನಿಗಾ ಇಡಲು ಪ್ರಿಸನರ್ಸ್ ಟ್ರ್ಯಾಕಿಂಗ್ ಮೂವ್‌ಮೆಂಟ್ ಸಿಸ್ಟಂ ಜಾರಿಗೆ ತರಲು ಇಲಾಖೆ ಯೋಜಿಸಿದೆ. ಸುಮಾರು ರೂ. 2.25 ಕೋಟಿ ವೆಚ್ಚದ ಈ ಯೋಜನೆಯನ್ನು ಮೂರು ತಿಂಗಳ್ಲಲ್ಲಿ ಪೂರ್ಣಗೊಳಿಸುವ ಗುರಿ ಹೊಂದಿದೆ. ಈ ಮೂಲಕ ರಾಜ್ಯದ ಜೈಲುಗಳು ಸ್ಮಾರ್ಟ್ ಆಗಲಿದ್ದು, ಅಕ್ರಮಗಳಿಗೆ ಬ್ರೇಕ್ ಹಾಕುವ ಇರಾದೆ ಇಲಾಖೆಯದಾಗಿದ್ದು ಸದ್ಯ ಯೋಜನೆಗೆ ಟೆಂಡರ್ ಕರೆದಿದೆ.

**ಊಟ ಆಸ್ಪತ್ರೆ ನೆಪದಲ್ಲಿ ಕೂಟ...**

ಶಿಕ್ಷಾಬಂಧಿಗಳು ಹಾಗೂ ವಿಚಾರಣಾನ ಖೈದಿಗಳು ಪ್ರತ್ಯೇಕ ಬ್ಯಾರಕ್‌ಗಳಲ್ಲಿದ್ದರೂ ಊಟ ಹಾಗೂ ಚಿಕಿತ್ಸೆ ಪಡೆಯುವ ನೆಪದಲ್ಲಿ ಒಂದೇ ಕಡೆ ಸೇರುತ್ತಿದ್ದಾರೆ. ಇದರಿಂದ ಪರಸ್ಪರ ವಿಚಾರ ವಿನಿಮಯಗೊಂಡು ಪರೋಕ್ಷವಾಗಿ ಅಪರಾಧ ಚಟುವಟಿಕೆಗಳಿಗೆ ಕಾರಣವಾಗುತ್ತಿದ್ದಾರೆ. ವಿಚಾರಣಾನ ಹಾಗೂ ಸಜಾಬಂಧಿಗಳಿಗೆ ಪ್ರತ್ಯೇಕ ಊಟದ ಕ್ಯಾಂಟೀನ್ ಜೊತೆ, ಸಣ್ಣಪುಟ್ಟ ಚಿಕಿತ್ಸೆ ಪಡೆಯಲು ಆಯಕಟ್ಟಿನ ಜಾಗದಲ್ಲಿ ಹೊರ ರೋಗಿಗಳ ವಿಭಾಗ (ಒಪಿಡಿ) ತೆರೆಯಲು ಮುಂದಾಗಿದೆ. ಗಂಭೀರ ಪ್ರಮಾಣದಲ್ಲಿ ಅನಾರೋಗ್ಯಕ್ಕೆ ಒಳಗಾಗುವ ಖೈದಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು.

ಸಂದರ್ಶಕರ ಭೇಟಿ ಕೊಠಡಿಗೆ ಜೈಲಿನ ವಿವಿಧ ಬ್ಯಾರಕ್‌ನಿಂದ ಪ್ರವೇಶದ್ವಾರಕ್ಕೆ ಬರುವ ಖೈದಿಗಳು ಮಾತುಕತೆ ನಡೆಸಿದ ಬಳಿಕ ನೇರವಾಗಿ ಬ್ಯಾರಕ್‌ಗೆ ಹೋಗದೆ, ಆಸ್ಪತ್ರೆ ಹಾಗೂ ಸಜಾಬಂಧಿಗಳ ಬ್ಯಾರಕ್‌ಗಳಿಗೆ ಹೋಗುತ್ತಿದ್ದರು. ಇದನ್ನು ನಿಯಂತ್ರಿಸಲು ಇದೀಗ ಯೋಜನೆ ರೂಪಿಸಲಾಗುತ್ತಿದೆ. ಸಂದರ್ಶಕರ ಭೇಟಿ ಬಳಿಕ ಮತ್ತೆ ಕೈದಿಯಿದ್ದ ಬ್ಯಾರಕ್‌ಗೆ ತೆರಳಲು ಬಯೊಮೆಟ್ರಿಕ್ ಜೊತೆಗೆ ಟೋಕನ್ ಸಿಸ್ಟಮ್ ಪರಿಚಯಲಾಗುತ್ತಿದೆ. ಟೋಕನ್‌ನಲ್ಲಿ ಹೆಸರು, ಖೈದಿ ಸಂಖ್ಯೆ,ಸಮಯ ಸೇರಿದಂತೆ ಇನ್ನಿತರ ಅಂಶಗಳು ಮುದ್ರಿತವಾಗಿರಲಿದೆ.

ಗಮ್ಯ ಸ್ಥಳಕ್ಕೆ ತೆರಳಿ ಜೈಲು ಸಿಬ್ಬಂದಿಗೆ ಟೋಕನ್ ನೀಡಿದಾಗ ಉದ್ದೇಶಿತ ಸಾಫ್ಟ್‌ವೇರ್‌ನಲ್ಲಿ ಸಿಬ್ಬಂದಿ ಅಪ್‌ಡೇಟ್ ಮಾಡುತ್ತಾರೆ. ಹೀಗೆ ಪ್ರತಿ ಬಾರಿ ಸಂದರ್ಶಕರನ್ನು ಭೇಟಿಯಾಗಲು ಬಂದು ಹೋಗುವ ಕೈದಿಗಳ ಚಲನವಲನಗಳ ಸಂಪೂರ್ಣ ದತ್ತಾಂಶ ಸಂಗ್ರಹವಾಗಲಿದೆ. ಇನ್ನಿತರ ಖೈದಿಗಳೊಡನೆ ಕೂಡಿ ಅಕ್ರಮ ಚಟುವಟಿಕೆಗೆ ಮುಂದಾದರೆ ಅಂತಹ ಕೈದಿಗಳ ವಿರುದ್ಧ ಕ್ರಮಕೈಗೊಳ್ಳಲು ಟ್ರ್ಯಾಕಿಂಗ್ ಸಿಸ್ಟಮ್ ಸಹಕಾರಿಯಾಗಲಿದೆ!

ಅಂದಹಾಗೆ, ಬೆಂಗಳೂರು ಕಾರಾಗೃಹದಲ್ಲಿ ಸಜಾಬಂಧಿಗಳು ಹಾಗೂ ವಿಚಾರಣಾನ ಖೈದಿಗಳು ಹಾಗೂ ಮಹಿಳಾ ಕೈದಿಗಳು ಸೇರಿದಂತೆ 5 ಸಾವಿರ ಬಂಧಿಗಳಿದ್ದಾರೆ ಎನ್ನಲಾಗಿದೆ. ಸೆರೆಮನೆಯಲ್ಲಿರೋ ಖೈದಿಗಳು ಕುಟುಂಬಸ್ಥರು ಹಾಗೂ ವಕೀಲರೊಂದಿಗೆ ಎರಡು ಭಾರಿ 10 ನಿಮಿಷಗಳ ಕಾಲ ಮಾತನಾಡಬಹುದಾಗಿದೆ. ತಿಂಗಳಿಗೆ 60 ನಿಮಿಷ ಮಾತನಾಡಲು ಅವಕಾಶವಿದೆ. ಆದರೆ ದೊಡ್ಡ ಸಂಖ್ಯೆಯಿರುವ ಖೈದಿಗಳಿಗೆ ಸಾಲದಾಗಿದೆ. ಗಂಟೆಗಟ್ಟಲೇ ಕ್ಯೂನಲ್ಲಿ ನಿಲ್ಲಬೇಕಿದೆ. ಅಲ್ಲದೆ, ನಿರ್ದಿಷ್ಟ ಸಂಖ್ಯೆಯ ಕರೆಗಳಿಗೆ ಮಾತ್ರ ಅವಕಾಶವಿದ್ದು, ಪ್ರತಿಯೊಂದು ಕರೆ ರೆಕಾರ್ಡ್ ಆಗಲಿದೆ. ಹಾಲಿಯಿರುವ 8 ಡಿಜಿಟಲ್ ಕಾಲ್ ಸಿಸ್ಟಂ ಬೂತ್‌ನಿಂದ ಇನ್ನಷ್ಟು ಹೆಚ್ಚಿಸಲು ಮುಂದಾಗಿದೆ.

ಬೆಂಗಳೂರು ಮಾತ್ರವಲ್ಲದೆ, ಮೈಸೂರು, ಶಿವಮೊಗ್ಗ, ಕಲಬುರಗಿ, ಬೆಳಗಾವಿ, ಧಾರವಾಡ, ವಿಜಯಪುರ ಸೇರಿದಂತೆ ರಾಜ್ಯದ 8 ಕೇಂದ್ರ ಕಾರಾಗೃಹ ಹಾಗೂ ಬೀದರ್ ಜಿಲ್ಲಾ ಕಾರಾಗೃಹ ಸೇರಿದಂತೆ ಒಟ್ಟು 115 ಬೂತ್‌ಗಳನ್ನು ಅಳವಡಿಸಲು ಪ್ರಿಸನರ್ಸ್ ಕಾಲಿಂಗ್ ಸಿಸ್ಟಂ ಜಾರಿಗೆ ತರಲು ಸಿದ್ಧತೆ ನಡೆಸುತ್ತಿದೆ.

**ಕ್ಯಾಂಟೀನ್ ಯೂಸೇಜ್ ಸಿಸ್ಟಂ ಜಾರಿ!**

ಖೈದಿಗಳ ಪ್ರತಿಯೊಂದು ಚಲನವಲನ ತಿಳಿಯಲು ಇಲಾಖೆಯು ಕ್ಯಾಂಟೀನ್ ಯೂಸೇಜ್ ಸಿಸ್ಟಂ ಜಾರಿಗೆ ತರಲು ಉದ್ದೇಶಿಸಿದೆ. ಜೈಲಿನಲ್ಲಿರುವ ಕ್ಯಾಂಟೀನ್‌ನಲ್ಲಿ ನೇರವಾಗಿ ಹಣ ಪಾವತಿಸದೆ ಸದ್ಯ ಇರುವ ವಾಲೆಟ್ ಅಥವಾ ಕೂಪನ್ ನೀಡಿ ಬನ್ ಬಿಸ್ಕತ್ ಸೇರಿದಂತೆ ಬೇಕರಿ ತಿನಿಸುಗಳನ್ನು ತಿನ್ನಲು ಖರೀದಿಸಬಹುದಾಗಿದೆ. ಖರೀದಾರರನ ಹೆಸರು, ಖರೀದಿ ಮಾಡಿದ ವಸ್ತು, ಅದರ ಪ್ರಮಾಣ, ಸಮಯ ಹಾಗೂ ದಿನಾಂಕ, ವಾಲೆಟ್‌ನಲ್ಲಿ ಬಾಕಿಯಿರುವ ಹಣ ಸೇರಿದಂತೆ ಪ್ರತಿಯೊಂದು ಮಾಹಿತಿ ಟ್ರ್ಯಾಕ್ ಆಗಲಿದೆ.

ಟೋಕನ್ ನೀಡಿಯೇ ಹಣ ಪಾವತಿಯಾಗುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಕೈದಿ ಮಾಡಿದ ಪ್ರತಿ ಖರ್ಚಿನ ವಿವರ ದತ್ತಾಂಶಗಳಲ್ಲಿ ಅಡಕವಾಗಲಿದೆ. ಆರಂಭಿಕ ಹಂತದಲ್ಲಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಅನುಷ್ಠಾನಕ್ಕೆ ತರಲು ಇಲಾಖೆ ಮುಂದಾಗಿದೆ. ಸಂದರ್ಶನ ಕೊಠಡಿ, ಬ್ಯಾರಕ್ ಅಥವಾ ಬ್ಲಾಕ್, ಅಡುಗೆ ಮನೆ ಹಾಗೂ ಕೆಲಸ ಮಾಡುವ ಸ್ಥಳ, ನ್ಯಾಯಾಲಯದ ವಿಚಾರಣೆಗೆ ವಿಡಿಯೋ ಕಾನ್ಫರೆನ್ಸ್ ವ್ಯವಸ್ಥೆಯಿರುವ ಕೊಠಡಿ ಸೇರಿದಂತೆ ಕೈದಿಗಳು ಯಾರನ್ನು ಭೇಟಿ ಮಾಡಿದರು. ಎಲ್ಲೆಲ್ಲಿ ಎಷ್ಟು ಹೊತ್ತು ಕಾಲ ಕಳೆದರೂ ಸೇರಿದಂತೆ ಪ್ರತಿಕ್ಷಣವನ್ನು ಟ್ರ್ಯಾಕಿಂಗ್ ಮಾಡಬಹುದಾಗಿದೆ!

ಕೈದಿಗಳ ಪ್ರತಿಯೊಂದು ಚಲನವಲನ ತಿಳಿದುಕೊಳ್ಳಲು ಇಲಾಖೆಯ ಪ್ರಧಾನ ಕಚೇರಿಯಲ್ಲಿ ಕಮಾಂಡ್ ಸೆಂಟರ್ ತೆರೆಯಲು ಉದ್ದೇಶಿಸಲಾಗಿದೆ. ಪರಪ್ಪನ ಅಗ್ರಹಾರ ಜೈಲಿನ ಕೈದಿಗಳ ಟ್ರ್ಯಾಕಿಂಗ್ ಸಿಸ್ಟಂ ಹಾಗೂ ರಾಜ್ಯದ ಇನ್ನಿತರ ಕೇಂದ್ರ ಕಾರಾಗೃಹಗಳಲ್ಲಿರುವ ಬಂಧಿಗಳು ಯಾರಿಗೆ ಕರೆ ಮಾಡಿದರು? ಏನು ಮಾತನಾಡಿದರು ಎಂಬುದನ್ನು ಕೇಂದ್ರ ಕಚೇರಿ ಮೂಲಕವೇ ಆಲಿಸಬಹುದಾಗಿದೆ!!

**ದಕ್ಷ ಎಡಿಜಿಪಿ ದಯಾನಂದ ಅಲರ್ಟ್ ಆಗಿದ್ದಾರೆ...**

ಐಪಿಎಸ್ ಅಧಿಕಾರಿ ಬಿ. ದಯಾನಂದ ಅವರು ಎಂಥ ನ್ಯಾಯವಾದಿ, ನಿಷ್ಠುರವಾದಿ ಅನ್ನೋದು ಇಡೀ ದೇಶಕ್ಕೆ ಗೊತ್ತಿದೆ. ಅವರು ಸ್ವಂತ ಕೆಲಸಕ್ಕೆ ಅಂತ ಒಂದೇ ಒಂದು ದಿವಸ ರಜೆ ಹಾಕಿಲ್ಲ ಎಂಬುದಾಗಿ ಸರ್ಕಾರಿ ದಾಖಲೆಗಳೇ ಹೇಳುತ್ತವೆ.

ಬೆಂಗಳೂರು ಮೈಸೂರು ಸಿಟಿ ಕಮಿಷನರ್ ಆಗಿ ಒಳ್ಳೆ ಆಡಳಿತ ನೀಡಿರೋ ಅವರನ್ನು ಬಡ್ತಿ ನೀಡಿ ಕರ್ನಾಟಕ ರಾಜ್ಯ ಕಾರಾಗೃಹ ಮುಖ್ಯಸ್ಥರನ್ನಾಗಿ ನೇಮಿಸಿದೆ ಸರ್ಕಾರ. ಅವರು ಈ ಇಲಾಖೆಗೆ ಬಂದು ಮೂರು ತಿಂಗಳೇ ಆಗಿವೆ. ಅಂಥ ದಕ್ಷ ಅಧಿಕಾರಿ ಇದ್ದರೂ ಜೈಲಿನ ಒಳಗೆ ಭ್ರಷ್ಟಾಚಾರ ನಿಂತಿಲ್ಲ. ಇದರಿಂದ ಭಾರಿ ಮುಜುಗರ ಅನುಭವಿಸಿರೋ ದಯಾನಂದ ರು ಇದೀಗ ಕೆಲವು ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಿದ್ದಾರೆ. ಮೊಬೈಲ್ ಬಳಕೆ ಮಾತಿರಲಿ, ಬೀಡಿ ಬೆಂಕಿ ಪೊಟ್ನ ಕೂಡ ಸಿಗದಂತೆ ಮಾಡಿದ್ದಾರೆ! ಇದರಿಂದ ರೊಚ್ಚಿಗೆದ್ದಿರೋ ಖೈದಿಗಳು ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿ ಬೀಡಿ ಹಾಗೂ ಸಿಗರೇಟ್ ಮಾರಾಟಕ್ಕೆ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಿ, ಕಳೆದ ನಾಲ್ಕು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು! ಐದನೇ ದಿನ ದಯಾನಂದ ಸಾಹೇಬ್ರು ಐಪಿಎಸ್ ಅಂಶು ಕುಮಾರ್ ಮೂಲಕ ಇನ್ನೊಂದು ಆಜ್ಞೆ ಹೊರಡಿಸಿದ್ದರು! ಇದಾದ ಬಳಿಕ ಧರಣಿ ನಿರತ ಖೈದಿಗಳು ಮೂಗು ಮುಚ್ಚಿಕೊಂಡು ಪ್ರತಿಭಟನೆಯನ್ನು ಹಿಂಪಡೆದಿದ್ದಾರೆ!

ಜೈಲಿನ ಚೀಫ್ ಸೂಪರಿಂಡೆಂಟೆಂಟ್ ಆಗಿ ನೇಮಕಗೊಂಡಿರುವ ಐಪಿಎಸ್ ಅಧಿಕಾರಿ ಅಂಶುಕುಮಾರ್ ನೇತೃತ್ವದ ತಂಡ ನಿರಂತರ ಶೋಧ ನಡೆಸಿ, ಜೈಲಿನಲ್ಲಿ ನಡೆಯುತ್ತಿದ್ದ ಅಕ್ರಮಗಳಿಗೆ ಕಡಿವಾಣ ಹಾಕಿತ್ತು. ಅವ್ಯಾಹತವಾಗಿ ಬಳಕೆಯಾಗುತ್ತಿದ್ದ ಮೊಬೈಲ್‌ಗಳು, ಬೀಡಿ ಹಾಗೂ ಸಿಗರೇಟ್‌ಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು. ಈ ಕಾರ್ಯಾಚರಣೆಯು ಕೈದಿಗಳಿಗೆ ನುಂಗಲಾರದ ತುತ್ತಾಗಿತ್ತು. ಇದರಿಂದ ಅಸಮಾಧಾನಗೊಂಡು ಜೈಲಿನೊಳಗೆ ಬಂಧಿಗಳು ಪ್ರತಿಭಟನೆ ಕೈಗೊಂಡಿದ್ದರು. ಕನಿಷ್ಠ ಪಕ್ಷ ಬೀಡಿ ಹಾಗೂ ಸಿಗರೇಟ್ ಮಾರಾಟಕ್ಕೆ ಅವಕಾಶ ಕೊಡಬೇಕೆಂದು ಒತ್ತಾಯಿಸಿದ್ದರು.

ಜೈಲಿನ ನಿಯಾಮವಳಿಯಂತೆ, ಕಾರಾಗೃಹದಲ್ಲಿ ಬೀಡಿ, ಸಿಗರೇಟ್ ಮಾರಾಟ ಮಾಡುವಂತಿಲ್ಲ ಎಂದು ತಿಳಿಹೇಳಿದರೂ ಪಟ್ಟುಬಿಡದೆ ಕೈದಿಗಳು ಪ್ರತಿಭಟನೆ ಮುಂದುವರೆಸಿದ್ದರು. ಮಂಗಳವಾರ ಅಂಶುಕುಮಾರ್ ತೆರಳಿ ಪ್ರತಿಭಟನಾ ಕೈದಿಗಳೊಂದಿಗೆ ಮಾತುಕತೆ ನಡೆಸಿದ್ದರು. ಆದರೆ ಅದು ವಿಫಲವಾದ ಹಿನ್ನೆಲೆಯಲ್ಲಿ, ಪ್ರತಿಭಟನೆಯಲ್ಲಿ ಭಾಗಿಯಾಗಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಖಡಕ್ ಎಚ್ಚರಿಕೆ ನೀಡಿದ್ದರು. ಇದರಿಂದ ಕಂಗೆಟ್ಟ ಕೈದಿಗಳು ಪ್ರತಿಭಟನೆ ಹಿಂಪಡೆದಿದ್ದಾರೆ!

☯



ಖೇಲ್ ಖತಂ – ನಾಟಕ್ ಬಂದ್!

# ಕಾಫಿ ತೋಟ ಮಾಲೀಕರು ಸೇರಿದಂತೆ ಸಾರ್ವಜನಿಕರೇ ಎಚ್ಚರ...

6 ☞

ಮಾಡಲು ಮನೆಯ ಬಳಿ ಬರುವವರ ಬಗ್ಗೆ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿ. ಜನರಿಲ್ಲದ ಪ್ರದೇಶದಲ್ಲಿ ಒಂಟಿಯಾಗಿ ಹೆಂಗಸರು ಓಡಾಡುವುದನ್ನು ಆದಷ್ಟು ತಪ್ಪಿಸುವುದು, ಒಂಟಿಯಾಗಿ ಓಡಾಡುವಾಗ ಅಪರಿಚಿತ ವ್ಯಕ್ತಿಗಳು ನಿಮ್ಮ ಬಳಿ ಬಂದು ವಿಳಾಸ ಕೇಳುವುದು, ಮಾತನಾಡಿಸುವುದು ಪ್ರಯತ್ನ ಮಾಡಿದಾಗ ಎಚ್ಚರದಿಂದ ವ್ಯವಹರಿಸಬೇಕಾಗುತ್ತದೆ.

ಬ್ಯಾಂಕ್ ಅಂಗಡಿ ಪೋಸ್ಟ್ ಆಫೀಸ್ ಬಳಿ ಅಪರಿಚಿತರು ನಿಮ್ಮ ಹಣ ಕೆಳಗೆ ಬಿದ್ದಿದೆ ಎಂದು ತಿಳಿಸಿದಾಗ ಮೊದಲು ನಿಮ್ಮ ಬಳಿಯಿರುವ ಹಣ ಸುಭದ್ರವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ, ಮೋಹಕ್ಕೆ ಬಲಿಯಾಗಿ ಸುಲಿಗೆಗೆ ಒಳಗಾಗಬೇಡಿ, ಒಂಟಿಯಾಗಿ ಓಡಾಡಿವಾಗ ಅಪರಿಚಿತ ವ್ಯಕ್ತಿಗಳು ನಿಮ್ಮ ಬಳಿ ನಿಧಾನವಾಗಿ ದ್ವಿಚಕ್ರದ ವಾಹನ ಚಾಲನೆ ಮಾಡಿಕೊಂಡು ಬಂದಾಗ ಅವರ ಕೈ ಗೆಟುಕುವ ಅಂತರದಲ್ಲಿ ನಿಲ್ಲಬೇಡಿ. ಜನನಿಬಿಡ ಪ್ರದೇಶದಲ್ಲಿ ಪಾರ್ಕ್, ಕತ್ತಲೆಯಲ್ಲಿ ಕುಳಿತುಕೊಳ್ಳುವ ಹವ್ಯಾಸ ತಪ್ಪಿಸಿ. ಅಪರಿಚಿತರು ನಂಬಿಸುವ ಅತೀಂದ್ರ ಶಕ್ತಿಗಳು, ಮಹಾನ್ ಪುರುಷರೆಂದು ಹೇಳಿದಾಗ ನಿಮ್ಮ ಮಾನಸಿಕ ಸಮತೋಲನವನ್ನು ಕಳೆದುಕೊಂಡು ಅವರ ನಿಯಂತ್ರಣಕ್ಕೆ ಒಳಗಾಗಿ ಮೋಸ ಹೋಗಬೇಡಿ.




ನಿಮ್ಮ ಬಳಿ ಅನುಮಾನಾಸ್ಪದ ವ್ಯಕ್ತಿ ಬಂದರೆ ತಕ್ಷಣ ಜೋರಾಗಿ ಕೂಗಿಕೊಂಡು ಅಕ್ಕಪಕ್ಕದವರನ್ನು ಸೇರಿಸಿ. ವಾಯು ವಿಹಾರಕ್ಕೆ ಹೋಗುವ ಸಂದರ್ಭದಲ್ಲಿ ಚಿನ್ನದ ಸರಗಳನ್ನು ಬಟ್ಟೆಯಿಂದ ಮರೆಮಾಡಿಕೊಳ್ಳಿ. ಅನಾವಶ್ಯವಾಗಿ ಅಧಿ ಕ ಆಭರಣಗಳನ್ನು ಧರಿಸಿ ಪ್ರದರ್ಶಿಸಬೇಡಿ ಕಳ್ಳರನ್ನು ಆಕರ್ಷಿಸಬೇಡಿ. ಆನ್‌ಲೈನ್ ವಂಚನೆ ಬಗ್ಗೆ ಎಚ್ಚರಿಕೆಯಿಂದ ಇರಿ. ಸಾರ್ವಜನಿಕರಾಗಲಿ, ಯಾವುದೇ ರೀತಿಯ ಸಂಶಯ ಬಂದಲ್ಲಿ ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ



ಮಾಹಿತಿ ಒದಗಿಸಿದಲ್ಲಿ ಕೂಡಲೇ ಸ್ಥಳಕ್ಕೆ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಆಗಮಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಮನೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಾವುದೇ ಅನುಮಾನಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ, ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡುವುದು ಒಳ್ಳೆಯದು.

☯

# ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ಮತ್ತೆ ವಜಾ, ಜೈಲೇ ಗತಿ!



ಮನೆಗೆಲಸದ ಮಹಿಳೆ ಮೇಲೆ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ಜೀವಿತಾವಧಿ ಸೆರೆವಾಸದ ಶಿಕ್ಷೆಗೆ ಒಳಗಾಗಿ ಬೆಂಗಳೂರು ಸೆಂಟ್ರಲ್ ಜೈಲ್ ಬಂಧಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಮತ್ತು ಶಿಕ್ಷೆ ಅಮಾನತ್ತಿನಲ್ಲಿಟ್ಟು ಜಾಮೀನು ನೀಡುವಂತೆ ಕೋರಿ ಸಲ್ಲಿಸಿರುವ ಮಧ್ಯಂತರ ಅರ್ಜಿಯ ವಿಚಾರಣೆ ಕಳೆದ ಶುಕ್ರವಾರ ನ್ಯಾಯಾಲಯದಲ್ಲಿ ನಡೆಯಿತು. ಪ್ರಜ್ವಲ್ ರೇವಣ್ಣ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ, ಪ್ರಕರಣಗಳ ಹಿಂದೆ ರಾಜಕೀಯ ದುರುದ್ದೇಶವಿದೆ ಎಂದು ಬಲವಾಗಿ ಪ್ರತಿಪಾದಿಸಿದರು. ವಕೀಲ ಸಿದ್ಧಾರ್ಥ್ ಲೂಥ್ರಾ ಅವರು, ಪ್ರಾಸಿಕ್ಯೂಷನ್‌ನ ವಾದದಲ್ಲಿನ ಹಲವಾರು ಲೋಪದೋಷಗಳನ್ನು ಮತ್ತು ಕಾಲಮಿತಿಯ ಸಂಶಯಗಳನ್ನು ನ್ಯಾಯಾಲಯದ ಗಮನಕ್ಕೆ ತಂದರು.

ವಿದೇಶ ಪ್ರಯಾಣದ ಕುರಿತು ಪ್ರಜ್ವಲ್ ರೇವಣ್ಣ ಅವರು 2024ರ ಏಪ್ರಿಲ್ ತಿಂಗಳಿನಲ್ಲಿ ವಿದೇಶಕ್ಕೆ ತೆರಳಿದಾಗ ಅವರ ಮೇಲೆ ಯಾವುದೇ ಕ್ರಿಮಿನಲ್ ಕೇಸುಗಳು ದಾಖಲಾಗಿರಲಿಲ್ಲ. ವಿದೇಶಕ್ಕೆ ತೆರಳಿದ ಬಳಿಕವಷ್ಟೇ ಪ್ರಕರಣಗಳು ದಾಖಲಾಗಿವೆ. ಮೊಬೈಲ್ ಫೋನ್ ಕುರಿತು ಪ್ರಾಸಿಕ್ಯೂಷನ್ ಪ್ರಜ್ವಲ್ ಆ್ಯಪಲ್ ಮೊಬೈಲ್ ಅನ್ನು ವಶಕ್ಕೆ ನೀಡಿಲ್ಲ ಎಂದು ಆರೋಪಿಸಿದೆ. ಆದರೆ, ಸಿಆರ್‌ಪಿಸಿ ಸೆಕ್ಷನ್ 91ರ ಅಡಿಯಲ್ಲಿ ಮೊಬೈಲ್ ನೀಡುವಂತೆ ನಮಗೆ ಯಾವುದೇ ನೋಟಿಸ್ ನೀಡಿಲ್ಲ. ಐಎಂಇಐ ನಂಬರ್ ಆಧರಿಸಿ ಮೊಬೈಲ್ ಕಂಪೆನಿಯಿಂದ ಮಾಹಿತಿ ಪಡೆಯಲು ಸಹ ಪೊಲೀಸರು ಯತ್ನಿಸಿಲ್ಲ' ಎಂದು ಲೂಥ್ರಾ ಪ್ರಶ್ನಿಸಿದರು.

ಸಂತ್ರಸ್ತೆಯ ಮೌನ ಮತ್ತು ರಾಜಕೀಯ ದುರುದ್ದೇಶ? ಅತ್ಯಾಚಾರಕ್ಕೆ ಒಳಗಾಗಿದ್ದೇನೆ (2019 ಮತ್ತು 2021) ಎಂದು ಹೇಳುವ ಸಂತ್ರಸ್ತೆ ಘಟನೆ ನಡೆದ ಬಳಿಕ ಸುಮಾರು 3 ವರ್ಷಗಳ ಕಾಲ ಮೌನವಾಗಿ ಇದ್ದಿದ್ದೇಕೆ? 2023ರಲ್ಲಿ ಏಕೆ ದೂರು ದಾಖಲಿಸಿದರು? ರಾಜಕೀಯ ದುರುದ್ದೇಶದಿಂದ ಸಂತ್ರಸ್ತೆಯನ್ನು ಇಲ್ಲಿನ ಸರ್ಕಾರವು ಬಳಸಿಕೊಂಡು ಏಕಕಾಲಕ್ಕೆ 4 ಪ್ರತ್ಯೇಕ ಕ್ರಿಮಿನಲ್ ಕೇಸುಗಳನ್ನು ದಾಖಲಿಸಿದೆ ಎಂದು ಆರೋಪಿಸಿದರು.

### ಎಫ್‌ಎಸ್‌ಎಲ್ ಸಾಕ್ಷಿ ಬಗ್ಗೆ ಸಂಶಯ

ಸಂತ್ರಸ್ತೆಯ ಬಟ್ಟೆಗಳನ್ನು ವಶಕ್ಕೆ ಪಡೆದಿರುವ ಕುರಿತು ವಾದ ಮಂಡಿಸಿದ ಲೂಥ್ರಾ, 'ಫಾರ್ಮ್ ಹೌಸ್'ಗೆ ಬಂದರೂ ಸಂತ್ರಸ್ತೆ ತಮ್ಮ ಬಟ್ಟೆಗಳನ್ನು ವಾಪಸ್ ಪಡೆಯಲಿಲ್ಲವೇಕೆ? ಪೊಲೀಸರು ಬಟ್ಟೆಯನ್ನು ವಶಕ್ಕೆ ಪಡೆದಿರುವುದೇ ಸಂಶಯಾಸ್ಪದವಾಗಿದೆ. ಡಿಎನ್‌ಎ ಪರೀಕ್ಷೆ ನಡೆಸಿದ ವ್ಯಕ್ತಿಯೇ ಮೃತಪಟ್ಟಿದ್ದಾರೆ. ಹೀಗಾಗಿ, ಪ್ರಸ್ತುತ ಎಫ್‌ಎಸ್‌ಎಲ್ ಸಾಕ್ಷ್ಯವು ನ್ಯಾಯಾಲಯದಲ್ಲಿ ಒಪ್ಪತಕ್ಕದ್ದಲ್ಲ ಎಂದು ಸಿದ್ಧಾರ್ಥ್ ಲೂಥ್ರಾ ವಾದವನ್ನು ಮಂಡಿಸಿ, ಶಿಕ್ಷೆ ಅಮಾನತು ಮತ್ತು ಜಾಮೀನು ನೀಡುವಂತೆ ಕೋರಿದರು. ಪ್ರಾಸಿಕ್ಯೂಷನ್ ವಾದ ಮಂಡನೆಯ ಬಳಿಕ ನ್ಯಾಯಾಲಯವು ಜಾಮೀನು ಅರ್ಜಿಯ ಕುರಿತು ತೀರ್ಪನ್ನು ಡಿಸೆಂಬರ್ 3 ಬುಧವಾರಕ್ಕೆ ನಿಗಧಿ ಪಡಿಸಿತ್ತು.

ಹೀಗಾಗಿ, ಪ್ರಕರಣದ ಮುಂದಿನ ಬೆಳವಣಿಗೆಯತ್ತ ಎಲ್ಲರ ಗಮನ ನೆಟ್ಟಿತ್ತು. ಇದೀಗ ಬಂದ ಮಾಹಿತಿ ಪ್ರಕಾರ, ಜನಪ್ರತಿನಿಧಿಗಳ ನ್ಯಾಯಾಲಯ ಪ್ರಜ್ವಲ್ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ!

### ಪ್ರಜ್ವಲ್ ರೇವಣ್ಣಗೆ ಜೈಲೇ ಗತಿ!

ಮನೆ ಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದ್ದು, ಈ ತೀರ್ಪು ಪ್ರಶ್ನಿಸಿ ಪ್ರಜ್ವಲ್ ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರು, ವಾದಪ್ರತಿವಾದ ಆಲಿಸಿದ ಬಳಿಕ ಪ್ರಜ್ವಲ್ ಜಾಮೀನು ಅರ್ಜಿಯನ್ನ ವಜಾಗೊಳಿಸಿದ್ದಾರೆ.

ಕೆಳಹಂತದ ನ್ಯಾಯಾಲಯ ಆದೇಶ ಅಮಾನತಿನಲ್ಲಿ ಇರಿಸಿ, ಜಾಮೀನು ನೀಡುವಂತೆ ಮನವಿ ಮಾಡಿದ್ದ ಪ್ರಜ್ವಲ್ ರೇವಣ್ಣ ಅವರ ಮನವಿಯನ್ನ ಹೈಕೋರ್ಟ್ ತಿರಸ್ಕರಿಸಿದೆ. ಹಾಗಾಗಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೈಲೇ ಗತಿಯಾಗಿದೆ! ನ್ಯಾಯಮೂರ್ತಿಗಳಾದ ಕೆ.ಎಸ್. ಮುದಗಲ್ ಹಾಗೂ ಟಿ. ವೆಂಕಟೇಶ್ ನಾಯ್ಕ್ ಅವರಿದ್ದ ವಿಭಾಗೀಯ ಪೀಠವು ಡಿಸೆಂಬರ್ 3ರಂದು ಈ ಮಹತ್ವದ ತೀರ್ಪನ್ನು ಪ್ರಕಟಿಸಿದ್ದು, ಪ್ರಜ್ವಲ್ ರೇವಣ್ಣ ಅವರಿಗೆ ಜೈಲು ವಾಸದಿಂದ ಸದ್ಯಕ್ಕೆ ಬಿಡುಗಡೆ ಭಾಗ್ಯ ದೊರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದೆ...

### ಚೂರು ಫ್ಲಾಶ್‌ಬ್ಯಾಕ್!

ಮನೆ ಕೆಲಸದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಗಂಭೀರ ಆರೋಪದ ಮೇಲೆ ಜನ ಪ್ರತಿನಿಧಿ ಗಳ ವಿಶೇಷ ನ್ಯಾಯಾಲಯವು ಕಳೆದ ಆಗಸ್ಟ್ 2025ರಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ದೋಷಿ ಎಂದು ಘೋಷಿಸಿತ್ತು. ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಅಪರಾಧ ಸಾಬೀತಾದ ಕಾರಣ, ನ್ಯಾಯಾಲಯವು ಅವರಿಗೆ ಜೀವಿತಾವಧಿ ಕಠಿಣ ಜೈಲು ಶಿಕ್ಷೆ ಮತ್ತು11 ಲಕ್ಷಕ್ಕೂ ಅಧಿಕ ದಂಡ ವಿಧಿಸಿ ಆದೇಶ ಹೊರಡಿಸಿತ್ತು. ವಿಧಿಸಲಾದ ದಂಡದ ಮೊತ್ತದಲ್ಲಿ ಬಹುಪಾಲನ್ನು ಸಂತ್ರಸ್ತೆಗೆ ಪರಿಹಾರವಾಗಿ ನೀಡಲು ಆದೇಶಿಸಲಾಗಿತ್ತು.

ವಿಶೇಷ ನ್ಯಾಯಾಲಯದ ಈ ತೀರ್ಪನ್ನು ಪ್ರಶ್ನಿಸಿ ಪ್ರಜ್ವಲ್ ರೇವಣ್ಣ ಅವರು ಹೈಕೋರ್ಟ್‌ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿಯ ವಿಚಾರಣೆ ಬಾಕಿ ಇರುವಾಗಲೇ, ತಮಗೆ ವಿಧಿಸಲಾದ ಶಿಕ್ಷೆಯನ್ನು ಅಮಾನತಿನಲ್ಲಿಟ್ಟು, ಜಾಮೀನು ನೀಡುವಂತೆ ಪ್ರಜ್ವಲ್ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಮನವಿ ಮಾಡಿದ್ದರು. ನೋ ಯೂಸ್!

# ಹಳೆಯ ದ್ವೇಷಕ್ಕೆ ಹರಿದ ನೆತ್ತರು: ಮಗನ ಜೀವ ಉಳಿಸಲು ಹೋಗಿ ಬಲಿಯಾದ ತಾಯಿ!



ಕೊಲೆಯಾದ ಗಂಗಮ್ಮ

ಮಗನ ಮೇಲಿನ ದಾಳಿಯನ್ನು ತಡೆಯಲು ಹೋಗಿ ಮಹಿಳೆಯೋರ್ವರು ಮೃತಪಟ್ಟಿರುವ ಘಟನೆ ಶಿವಮೊಗ್ಗದಲ್ಲಿ ನಡೆದಿದೆ. ತಾವು ಹಲ್ಲೆ ನಡೆಸಿದ್ದ ವ್ಯಕ್ತಿಗೆ ಉಪಚರಿಸಿರುವುದನ್ನೇ ನೆಪ ಮಾಡಿಕೊಂಡು ಜಗಳ ತೆಗೆದಿರುವ ಆರೋಪಿಗಳು, ಮೃತ ಮಹಿಳೆಯ ಮಗನ ಮೇಲೆ ಹಲ್ಲೆ ನಡೆಸಿದ್ದಾರೆ. ಮಚ್ಚಿನಿಂದ ದಾಳಿಗೂ ಯತ್ನಿಸಿದ್ದು, ಈ ವೇಳೆ ತಡೆಯಲು ಯತ್ನಿಸಿದ ಮಹಿಳೆಗೆ ಮಚ್ಚಿನೇಟು ಬಿದ್ದಿದೆ. ಗಂಭೀರ ಗಾಯಗೊಂಡ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಮಗನ ಮೇಲಿನ ದಾಳಿಯನ್ನು ತಡೆಯಲು ಹೋಗಿ ಮಹಿಳೆಯೋರ್ವರು ಬರ್ಬರವಾಗಿ ಕೊಲೆಯಾಗಿರುವ ಘಟನೆ ಶಿವಮೊಗ್ಗ ತಾಲೂಕು ದುಮ್ಮಳ್ಳಿ ಗ್ರಾಮದ ಸಿದ್ದೇಶ್ವರ ಬಡಾವಣೆಯಲ್ಲಿ ನಡೆದಿದೆ. ಗಂಗಮ್ಮ (45) ಮೃತ ದುರ್ದೈವಿಯಾಗಿದ್ದು, ಆರೋಪಿಗಳಾದ ಹರೀಶ್ ಮತ್ತು ನಾಗೇಶ್‌ರನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಮಚ್ಚಿನಿಂದ ದಾಳಿ ಮಾಡಿರುವ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಗಂಗಮ್ಮ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸಿದ್ದೇಶ್ವರ ಬಡಾವಣೆಯಲ್ಲಿ ನಿನ್ನೆ ರಾತ್ರಿ 11 ಗಂಟೆ ಸುಮಾರಿಗೆ ಆರೋಪಿಗಳಾದ ಹರೀಶ್ ಮತ್ತು ನಾಗೇಶ್ ಬೈಕ್‌ನಲ್ಲಿ ತೆರಳುತ್ತಿದ್ದ ಅದೇ ಬಡಾವಣೆಯ ಮಂಜುನಾಥ್ ಎಂಬವರ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿದ್ದರು. ಮಾನವೀಯತೆಯಿಂದ ಗಾಯಗೊಂಡ ಮಂಜುನಾಥನಿಗೆ ಗಂಗಮ್ಮ ಉಪಚರಿಸಿದ್ದರು. ಮಂಜುನಾಥ್ ತಲೆಗೆ ಅರಿಶಿಣ ಹಚ್ಚಿ, ನೀರು ಕುಡಿಸಿದ್ದರು. ಇದೇ ವಿಚಾರಕ್ಕೆ ಕುಪಿತಗೊಂಡ ಆರೋಪಿಗಳು ಗಂಗಮ್ಮ ಅವರ ಪುತ್ರ ಜೀವನ್ ಬಳಿ ಗಲಾಟೆ ಮಾಡಿದ್ದಾರೆ. ನಾವು ಹೊಡೆದವರಿಗೆ ಅರಿಶಿಣ ಹಚ್ಚುತ್ತೀರಾ ಎಂದು ತಗಾದೆ ತೆಗೆದು ಹಲ್ಲೆ ನಡೆಸಿದ್ದಾರೆ. ಬಳಿಕ ಮನೆಯಿಂದ ಮಚ್ಚು ತಂದು ಜೀವನ್ ಮೇಲೆ ಬೀಸಿದ್ದು, ಈ ವೇಳೆ ಅಲ್ಲೇ ಇದ್ದ ಗಂಗಮ್ಮ ತಲೆ ಮತ್ತು ಕುತ್ತಿಗೆ ಭಾಗಮನ್ನು ಮಚ್ಚು ಸೀಳಿದೆ. ಗಾಯಗೊಂಡ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳಕ್ಕೆ ತುಂಗಾ ನಗರ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಕೊಲೆ ಮಾಡಿ ತಪ್ಪಿಸಿಕೊಂಡಿದ್ದ ಆರೋಪಿಗಳನ್ನು ಬಂಧಿಸಲಾಗಿದ್ದು, ಹಳೆಯ ದ್ವೇಷದ ಹಿನ್ನಲೆ ಕೊಲೆ ಮಾಡಿರುವ ವಿಚಾರ ಬೆಳಕಿಗೆ ಬಂದಿದೆ.



ಆರೋಪಿಗಳಾದ ಹರೀಶ್ ಹಾಗೂ ನಾಗೇಶ್

### ಹಳೆಯ ದ್ವೇಷಕ್ಕೆ ಹರಿದ ನೆತ್ತರು

ಮೃತ ಗಂಗಮ್ಮ ಅವರ ಮಗ ಜೀವನ್ ಮೇಲೆ ಆರೋಪಿಗಳಿಗೆ ಹಳೆಯ ದ್ವೇಷ ಇತ್ತು ಎನ್ನಲಾಗಿದೆ. ಈ ಹಿಂದೆ ಇದೇ ದುಮ್ಮಳ್ಳಿ ಗ್ರಾಮದಲ್ಲಿ ಜೀವನ್ ಸಂಬಂಧಿಕರ ಮನೆ ಬಾಡಿಗೆ ಪಡೆದು ನಾಗೇಶ್ ಮತ್ತು ಹರೀಶ್ ನೆಲೆಸಿದ್ದರು. ಆದರೆ ಬಾಡಿಗೆ ಹಣ ನೀಡಿರಲಿಲ್ಲ. ಹೀಗಾಗಿ ಊರಿನ ಸರ್ಕಲ್‌ನಲ್ಲಿ ಹಣ ನೀಡುವಂತೆ ಜೀವನ್ ಕೇಳಿದ್ದ. ಆ ವೇಳೆ ಇವರ ನಡುವೆ ಗಲಾಟೆ ನಡೆದಿತ್ತು. ಆ ಬಳಿಕ ಜೀವನ್ ಮನೆ ಮುಂಭಾಗವೇ ಇರುವ ಮನೆಯಲ್ಲಿ ಬಂದು ನೆಲೆಸಿದ್ದ ಆರೋಪಿಗಳು, ಜೀವನ್‌ಗೆ ಗುರಾಯಿಸಿಕೊಂಡೇ ಓಡಾಡುತ್ತಿದ್ದರು. ಇವರ ನಡುವೆ ಆಗಾಗ ಸಣ್ಣಪುಟ್ಟ ಗಲಾಟೆ ಸಹ ನಡೆಯುತ್ತಿತ್ತು ಎನ್ನಲಾಗಿದೆ.

# ಸೌಜನ್ಯ ಫೈಲ್ಸ್



9

ನಿರೂಪಣೆ :

ಮೋಹನ್ ಬೋಳಂಗಡಿ

# ಕೊನೆಗೂ ಸಿಕ್ಕಿದ್ದರು ಟಿವಿ9 ಸಂಪರ್ಕ ಸೇತು!

ಸೌಜನ್ಯ ಹೋರಾಟವನ್ನು ಇನ್ನೊಂದು ಮಜಲಿಗೆ ಕೊಂಡೊಯ್ಯಬೇಕೆಂದು ಹವಣಿಸುತ್ತಿದ್ದ ಮಹೇಶ್ ಶೆಟ್ಟಿ ತಿಮರೋಡಿಯವರಿಗೆ ಸಂಪರ್ಕಕ್ಕೆ ಸಿಕ್ಕಿದವರೇ ಕಿನ್ನಿಗೋಳಿ ಪರಿಸರದ ಸಾಮಾಜಿಕ ಕಾರ್ಯಕರ್ತ ರಾಬರ್ಟ್ ರೊಸಾರಿಯೋ. ಇವರು ಕ್ರೈಸ್ತ ಧರ್ಮಗುರುಗಳು ಇಗರ್ಜಿಯ ಆಡಳಿತ ವ್ಯವಸ್ಥೆಯಲ್ಲಿ ಎಸಗುತ್ತಿದ್ದಂತಹ ಅವ್ಯವಹಾರಗಳನ್ನು ಪ್ರಶ್ನಿಸಿ ಸಾರ್ವಜನಿಕವಾಗಿ ಸುದ್ದಿಯಾಗುತ್ತಿದ್ದರು. ಆ ಸಂದರ್ಭದಲ್ಲಿ ಇವರ ಸೆಟಲೈಟ್ ಚಾನೆಲ್‌ಗಳ ವರದಿಗಾರರಿಗೆ ಸಂಪನ್ಮೂಲ ವ್ಯಕ್ತಿಯೂ ಆಗಿದ್ದರು. ಹಲವು ಪ್ರಕರಣಗಳ ಮಾಹಿತಿಗಳನ್ನು ಪತ್ರಕರ್ತರಿಗೆ ಒದಗಿಸುತ್ತಿದ್ದರು. ಸೆಟಲೈಟ್ ಚಾನೆಲ್‌ಗಳಲ್ಲಿ ಸುದ್ದಿ ಪ್ರಕಟ ಆಗಬೇಕಾಗಿದ್ದರೆ ದೂರುದಾರರು ಮತ್ತು ಇನ್ನೊಬ್ಬರ ಹೇಳಿಕೆ ಅಂದರೆ ಬೈಟ್ ಅಗತ್ಯ ಇರುತ್ತದೆ. ಅಂತಹ ಸಂದರ್ಭದಲ್ಲಿ ಸೆಟಲೈಟ್ ಚಾನೆಲ್‌ನ ವರದಿಗಾರರು ಬೈಟ್‌ಗಾಗಿ ರಾಬರ್ಟ್ ರೊಸಾರಿಯೋ ಅವರನ್ನು ಸಂಪರ್ಕಿಸುತ್ತಿದ್ದರು. ಅವರು ಅದಕ್ಕೆ ಸ್ಪಂದಿಸುತ್ತಿದ್ದರು. ವಾಸ್ತವಿಕವಾಗಿ ರಾಬರ್ಟ್ ರೊಸಾರಿಯೋ ಅವರಿಗೆ ಆ ವಿಷಯದ ಬಗ್ಗೆ ಯಾವುದೇ ಜ್ಞಾನ ಇರುತ್ತಿರಲಿಲ್ಲ. ವರದಿಗಾರರು ಏನನ್ನು ಹೇಳಿ ಕೊಟ್ಟರೋ ಅದೇ ರೀತಿಯಾಗಿ ಅವರು ಕ್ಯಾಮೆರಾ ಮುಂದೆ ಮಾತನಾಡುತ್ತಿದ್ದರು. ಇಂತಹ ಹಿನ್ನೆಲೆಯ ರಾಬರ್ಟ್ ರೊಸಾರಿಯೋ ಅವರನ್ನು ಮಹೇಶ್ ಶೆಟ್ಟಿ ತಿಮರೋಡಿ ತನ್ನ ಆಪ್ತರ ಮೂಲಕ ಸಂಪರ್ಕಿಸಿದರು. ಸೌಜನ್ಯ ಪ್ರಕರಣದ ಹಿನ್ನೆಲೆಯನ್ನು ತನಗೆ ತೋಚಿದ ರೀತಿಯಲ್ಲಿ ಮತ್ತು ತಾನು ಅರ್ಥೈಸಿಕೊಂಡಂತೆ ವಿವರಿಸಿದ್ದರು. ಅವರು ಹೇಳಿದ್ದನ್ನೇ ನಂಬಿದಂತಹ ರಾಬರ್ಟ್ ರೊಸಾರಿಯೊ ಅವರು ಈ ವಿಚಾರದಲ್ಲಿ ಮುಂದುವರಿದರೆ ಹೋರಾಟವೊಂದು ರೂಪುಗೊಳ್ಳಲು ಸಾಧ್ಯ ಎಂದು ಭಾವಿಸಿದರು. ಆ ಸಂದರ್ಭದಲ್ಲಿ ಟಿವಿ9ನ ಮಂಗಳೂರು ವರದಿಗಾರರಾಗಿದ್ದವರು ರಾಜೇಶ್.



ಸಂತೋಷ್ ರಾವ್

ಇವರು ಸೌಜನ್ಯ ಪ್ರಕರಣದ ಹಿನ್ನೆಲೆಯಲ್ಲಿ ಆರಂಭಿಕ ವರದಿಗಳನ್ನು ಮಾಡಿದವರು. ಕೃತ್ಯ ನಡೆದ ಸ್ಥಳಕ್ಕೆ ಎರಡು ದಿನಗಳ ನಂತರ ಹೋಗಿದ್ದವರು. ವೀಡಿಯೋ ಶೂಟಿಂಗ್ ಮಾಡಿದ್ದರು. ಸ್ಥಳೀಯವಾಗಿ ಹಲವರೊಂದಿಗೆ ಮಾತನಾಡಿದ್ದವರು. ಸೌಜನ್ಯಳ ಮನೆಯವರೊಂದಿಗೂ ಮಾತನಾಡಿದ್ದರು. ಘಟನೆ ನಡೆದ ದಿನದಂದು ಏನೇನು ನಡೆದಿತ್ತು ಎನ್ನುವುದರ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಿದ್ದರು. ಈ ಬಗ್ಗೆ ವಿಸ್ತತವಾಗಿ ವರದಿ ಮಾಡಿದ್ದರು. ಟಿವಿ9ನ ವಾರಂಟ್ ಕಾರ್ಯಕ್ರಮದಲ್ಲಿ ಇದು ಬಿತ್ತರವಾಗಿತ್ತು. ಆದ್ದರಿಂದ ರಾಜೇಶ್ ಅವರಿಗೆ ಇಡೀ ಪ್ರಕರಣದ ಹಿನ್ನೆಲೆಯ ಅರಿವಿತ್ತು. ಅವರನ್ನು ಸಂಪರ್ಕಿಸಿದ ರಾಬರ್ಟ್ ರೊಸಾರಿಯೋ ಅವರು ಟಿವಿ9ನ ಕೇಂದ್ರ ಕಚೇರಿಯನ್ನು ಸಂಪರ್ಕಿಸಿ ಸೌಜನ್ಯ ಪ್ರಕರಣದ ಬಗ್ಗೆ ವಿಸ್ತತ ಸಂದರ್ಶನ ಆಧಾರಿತ ಕಾರ್ಯಕ್ರಮವೊಂದನ್ನು ಪ್ರಸಾರ ಮಾಡುವಂತೆ ವಿನಂತಿಸಿದ್ದರು. ಟಿವಿ9 ನ ಸಂಪಾದಕೀಯ ಮಂಡಳಿ ಈ ಬಗ್ಗೆ ಅಭಿಪ್ರಾಯ ಸಂಗ್ರಹಿಸಿದ ಸಂದರ್ಭದಲ್ಲಿ ವಾಹಿನಿಯ ಟಿಆರ್‌ಪಿ ಮೇಲ್ಮಟ್ಟಕ್ಕೆ ಹೋಗಬಹುದು ಮತ್ತು ರಾಜ್ಯಾದ್ಯಂತ ಸಂಚಲನ ಸೃಷ್ಟಿಸಬಹುದು ಎನ್ನುವ ಮಾಹಿತಿಗಳು ಲಭ್ಯವಾಗಿತ್ತು. ಆ ಸಂದರ್ಶನ ಆಧಾರಿತ ಕಾರ್ಯಕ್ರಮದಲ್ಲಿ ಸ್ವತಃ ಸೌಜನ್ಯ ಅವರ ತಂದೆ ಚಂದಪ್ಪಗೌಡ, ತಾಯಿ ಕುಸುಮಾವತಿ, ಮಾವ ವಿಠಲಗೌಡ ಮತ್ತು ಸೌಜನ್ಯ ಪರ ಹೋರಾಟದಲ್ಲಿ ಭಾಗಿಯಾಗಿದ್ದ ಮಹೇಶ್ ಶೆಟ್ಟಿ ತಿಮರೋಡಿಯವರು ಭಾಗವಹಿಸುವುದು ಖಚಿತವಾಗಿದ್ದ ಈ ಮಾಹಿತಿ ಕ್ಷೇತ್ರಕ್ಕೆ ತಲುಪಿದಾಗ ಕ್ಷೇತ್ರದ ನೌಕರರು ಮತ್ತು ಸ್ಥಳೀಯರು ಮಹಾದ್ವಾರದ ಬಳಿ ಅಡ್ಡಲಾಗಿ ನಿಂತು ತಿಮರೋಡಿ ಮತ್ತು ಬಳಗದವರನ್ನು ಕ್ಷೇತ್ರದ ಒಳಗೆ ಬರಲು ಅವಕಾಶ ನೀಡಲಿಲ್ಲ. ಈ ಸಂದರ್ಭದಲ್ಲಿ ವಾಗ್ವಾದ ನಡೆಯಿತು. ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿದರು. ಈ ಘಟನೆ ಕ್ಷೇತ್ರದ ಮೇಲೆ ಸಾಕಷ್ಟು ಪರಿಣಾಮ ಬೀರಿತು. ಅಲ್ಲಿಯವರೆಗೆ ಸೌಜನ್ಯ ಪ್ರಕರಣಕ್ಕೂ ಕ್ಷೇತ್ರಕ್ಕೂ ಯಾವುದೇ ಸಂಬಂಧ ಇಲ್ಲ. ಘಟನೆ ನಡೆದ ದಿನದಿಂದ ಸೌಜನ್ಯ ಮನೆಯವರೊಂದಿಗೆ ಕ್ಷೇತ್ರದ ಧರ್ಮಾಧಿಕಾರಿಗಳು ಸಹಿತ ಇತರರು ಸಹಜ ರೀತಿಯ ಸಂಪರ್ಕದಲ್ಲಿ ಇದ್ದರು. ಸೌಜನ್ಯ ಮನೆಯವರೂ ಸಹ ಈ ವಿಚಾರವನ್ನು ಸ್ಪಷ್ಟಪಡಿಸಿದ್ದರು. ಆದರೆ ಅವರು ಮಹೇಶ್ ಶೆಟ್ಟಿ ತಿಮರೋಡಿಯವರೊಂದಿಗೆ ಸೇರಿಕೊಂಡು ಕ್ಷೇತ್ರದ ವಿರುದ್ಧವೇ ಅಪಪ್ರಚಾರ ನಿಲ್ದಾಣ ಪ್ರಾಧಿಕಾರದ ಸೀಲು, ವೀಸಾ ಪ್ರತಿ, ನ್ಯೂಯಾರ್ಕ್‌ನಲ್ಲಿ ನಗದು ವ್ಯವಹಾರ ನಡೆಸಿದ ದಾಖಲೆಯ ಪ್ರತಿ, ಟ್ರಾವೆಲ್ ಹಿಸ್ಟರಿಯನ್ನು ಮಾಧ್ಯಮದವರಿಗೆ ನೀಡಿದ್ದರು.



ನಿಶ್ಚಲ್ ಜೈನ್

ಅಲ್ಲಿಗೆ ಧರ್ಮಸ್ಥಳದವರು ತಮ್ಮ ಮೇಲೆ ಬಂದಿದ್ದ ಆರೋಪವನ್ನು ಸಾರಾಸಗಟಾಗಿ ನಿರಾಕರಿಸಿದ್ದರು. ಯಾವಾಗ ಈ ಎಲ್ಲಾ ಘಟನೆಗಳು ನಡೆಯುವ ಸಂದರ್ಭದಲ್ಲಿ ಸೌಜನ್ಯ ಪ್ರಕರಣದ ಸಿಓಡಿ ತನಿಖೆಯೂ ಪೂರ್ಣಗೊಂಡು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಾಗಿತ್ತು. ಆರೋಪಿ ಸಂತೋಷ್‌ರಾವ್ ಈ ಕೃತ್ಯ ನಡೆಸಿದ್ದಾನೆ ಎನ್ನುವುದಕ್ಕೆ ಎಲ್ಲಾ ರೀತಿಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಆರೋಪ ಪಟ್ಟಿ ಸಲ್ಲಿಸಲಾಗಿತ್ತು. ಇಷ್ಟೆಲ್ಲ ಆದ ನಂತರ ಜನರಲ್ಲಿ ಮತ್ತಷ್ಟು ಸಂಶಯಗಳು ಉಳಿದುಕೊಂಡಿತ್ತು. ಯಾಕೆಂದರೆ ಧರ್ಮಸ್ಥಳದ ಧರ್ಮಾಧಿಕಾರಿಗಳು ಪ್ರಭಾವಿಗಳು. ಎಲ್ಲಾ ರೀತಿಯ ಆಡಳಿತ ಯಂತ್ರವನ್ನು

ರಿಂದ ಟಿವಿ9ನ ಆಡಳಿತ ವರ್ಗ ಕಾರ್ಯಕ್ರಮ ಪ್ರಸಾರಕ್ಕೆ ಸಿದ್ಧತೆ ನಡೆಸಿತ್ತು. ಅದರ ನಿರೂಪಣೆಗಾರ ರಹಮಾನ್ ಎಲ್ಲಾ ರೀತಿಯ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಭಾಗಿಗಳಾಗುವುದು ಅತ್ಯಂತ ಗೌಪ್ಯತೆಯ ವಿಚಾರ ಆಗಿದ್ದರಿಂದ ಮಹೇಶ್ ಶೆಟ್ಟಿ ತಿಮರೋಡಿಯವರು ಸೌಜನ್ಯ ಮನೆಯವರನ್ನು ಮಂಗಳೂರಿಗೆ ಎಂದು ಹೇಳಿ ಕಾರಿನಲ್ಲಿ ಬೆಂಗಳೂರಿಗೆ ಕರೆದೊಯ್ದಿದ್ದರು. ಟಿವಿ9 ನಲ್ಲಿ ಕಾರ್ಯಕ್ರಮ ಪ್ರಸಾರ ಆಗುತ್ತಿದ್ದಂತೆಯೇ ರಾಜ್ಯಾದ್ಯಂತ ಸಂಚಲನ ಸೃಷ್ಟಿಯಾಯಿತು. ಆರಂಭದಲ್ಲಿ ಟಿವಿ ನಿರೂಪಕ ಕೇಳಿದ ಪ್ರಶ್ನೆಗಳಿಗೆ ಕುಸುಮಾವತಿಯವರು ಮತ್ತು ಮನೆಯವರು ಹಾಗೂ ತಿಮರೋಡಿ ಉತ್ತರಿಸುತ್ತಾ ನೇರವಾಗಿ ಧರ್ಮಸ್ಥಳದ ಆಡಳಿತ ವರ್ಗದವರ ವಿರುದ್ಧ ಆರೋಪ ಹೊರಿಸಿದ್ದರು. ಕಾರ್ಯಕ್ರಮ ಮುಂದುವರಿದಂತೆ ರಾಜ್ಯಾದ್ಯಂತ ವೀಕ್ಷಕರ ಸಂಖ್ಯೆಯೂ ಜಾಸ್ತಿಯಾಗುತ್ತಿದ್ದಂತೆ ಟಿವಿ9ನ ಆಡಳಿತ ವರ್ಗ ಕಾರ್ಯಕ್ರಮವನ್ನು ಮುಂದುವರಿಸಿಕೊಂಡೇ ಹೋಯಿತು ಅಲ್ಲದೇ ಸಹೋದರ ಇಂಗ್ಲಿಷ್ ವಾಹಿನಿಯಲ್ಲೂ ಕಾರ್ಯಕ್ರಮ ಬಿತ್ತಿರಿಸಿತು. ಸುಮಾರು 27 ಗಂಟೆಗಳ ಕಾಲ ಈ ಕಾರ್ಯಕ್ರಮ ಬಿತ್ತರವಾದಾಗ ಬೆಳ್ತಂಗಡಿಯಾದ್ಯಂತ ಒಂದು ರೀತಿಯ ಸಂಚಲನ ಸೃಷ್ಟಿಯಾಗಿತ್ತು. ಶ್ರೀ ಕ್ಷೇತ್ರ ಧರ್ಮಸ್ಥಳದ ಆಡಳಿತ ವರ್ಗದವರ ವಿರುದ್ಧ ಜನ ಆಕ್ರೋಶ ವ್ಯಕ್ತಪಡಿಸತೊಡಗಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಸೌಜನ್ಯ ಮನೆಯವರು ಊರಿಗೆ ಬರುವ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ 48ರ ಪೆರಿಯಶಾಂತಿ ಎಂಬಲ್ಲಿ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಜಮಾಯಿಸಿದ್ದರು. ಅವರನ್ನು ಮೆರವಣಿಗೆಯ ಮೂಲಕ ಕರೆದುಕೊಂಡು ಬರಲಾಯಿತು.



ಮಹೇಶ್ ಶೆಟ್ಟಿ ತಿಮರೋಡಿ

ನಡೆಸಿದ್ದು ಮತ್ತು ಅದಕ್ಕೆ ರಾಜ್ಯ ಮಟ್ಟದ ಮಾಧ್ಯಮವೊಂದನ್ನು ಬಳಸಿಕೊಂಡದ್ದನ್ನು ಗಮನಿಸಿದಾಗ ಈ ಷಡ್ಯಂತ್ರದ ಹಿಂದೆ ಕಾಣದ ಕೈ ಕೆಲಸ ಮಾಡುತ್ತಿದೆ ಎಂದು ಅರಿವಿಗೆ ಬಂದಿತ್ತು. ಆದರೆ ಅದು ಗೊತ್ತಾದಾಗ ವಿಳಂಬವಾಗಿತ್ತು. ಆ ಕಾಣದ ಕೈ ಕ್ಷೇತ್ರದ ವ್ಯಾಪ್ತಿಯಿಂದ ಕೆಲವೇ ಕಿ.ಮಿ.ಗಳ ದೂರದಲ್ಲಿತ್ತು ಮಾತ್ರವಲ್ಲದೇ ಈ ಹಿಂದೆ ಕ್ಷೇತ್ರದೊಂದಿಗೆ ಸಂಪರ್ಕದಲ್ಲಿದ್ದು ಕ್ಷೇತ್ರದಿಂದ ಹೊರದೂಡಲ್ಪಟ್ಟಿದ್ದ ವ್ಯಕ್ತಿಯದ್ದಾಗಿತ್ತು ಎಂಬುದು ಗಣನೆಗೆ ಬರಲಿಲ್ಲ.

ಟಿವಿ9 ಕಾರ್ಯಕ್ರಮದಲ್ಲಿ ಸೌಜನ್ಯ ಮನೆಯವರು ನೇರವಾಗಿ ಆರೋಪ ಹೊರಿಸಿದ್ದು ನಾಲ್ವರ ಮೇಲೆ. ಅದರಲ್ಲಿ ಪ್ರಮುಖ ಹೆಸರು ನಿಶ್ಚಲ್ ಜೈನ್ ಅವರದ್ದು. ಅವರು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಸಹೋದರ ಹರ್ಷೇಂದ್ರ ಕುಮಾರ್‌ರವರ ಮಗ. ಯಾವಾಗ ನಿಶ್ಚಲ್ ಜೈನ್ ಹೆಸರನ್ನು ಸೌಜನ್ಯ ಮನೆಯವರು ಎತ್ತಿದರೋ ಅದನ್ನು ಕ್ಲಾರಿಫೈ ಮಾಡುವಂತಹ ಜವಾಬ್ದಾರಿ ವೀರೇಂದ್ರ ಹೆಗ್ಗಡೆಯವರದ್ದಾಗಿತ್ತು. ಅದಕ್ಕಾಗಿ ಅವರು ಧರ್ಮಸ್ಥಳದಲ್ಲಿ ಪತ್ರಿಕಾಗೋಷ್ಠಿಯೊಂದನ್ನು ಕರೆದು ಸೌಜನ್ಯ ಹತ್ಯೆಗೂ ನಿಶ್ಚಲ್ ಜೈನ್‌ಗೂ ಯಾವುದೇ ಸಂಬಂಧ ಇಲ್ಲ. ಹತ್ಯೆ ನಡೆದ ದಿನದಂದು ಅಂದರೆ 9.10. 2012ರಂದು ನಿಶ್ಚಲ್ ಊರಲ್ಲಿ ಇರಲಿಲ್ಲ. ಬದಲಾಗಿ ಮೂರು ಸಾವಿರ ಕಿ.ಮೀ. ದೂರದ ಅಮೇರಿಕದಲ್ಲಿ ಇದ್ದರು. ಅವರು ಎಂ.ಬಿ.ಎ. ಉನ್ನತ ವ್ಯಾಸಂಗಕ್ಕಾಗಿ ಜೂನ್‌ನಲ್ಲಿ ಹೋಗಿದ್ದು, ಡಿಸೆಂಬರ್‌ನಲ್ಲಿ ಮೊದಲ ಸೆಮಿಸ್ಟರ್ ಮುಗಿಸಿ ಊರಿಗೆ ಬಂದಿದ್ದು, ನಂತರ 2013ರಲ್ಲಿ ಮತ್ತೇ ಅಮೆರಿಕಕ್ಕೆ ಹೋಗಿದ್ದು, ವಿದ್ಯಾಭ್ಯಾಸ ಮುಗಿಸಿ ವಾಪಾಸ್ಸು ಬಂದಿದ್ದಾರೆ. ಅವರ ಪಾಸ್‌ಪೋರ್ಟ್ ಪ್ರತಿ ಅದರಲ್ಲಿ ದಾಖಲಾಗಿದ್ದ ವಿಮಾನ



ಕುಸುಮಾವತಿ

ನಿಯಂತ್ರಿಸುವ ಶಕ್ತಿ ಉಳ್ಳವರು. ತಮಗೆ ಬೇಕಾದ ರೀತಿಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಬಲ್ಲವರು ಎಂದು ಜನರು ಆಡಿಕೊಳ್ಳುವಂತಾಗಿತ್ತು. ಆದ್ದರಿಂದ ಸ್ವತಃ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರು ಸ್ವತಃ ರಾಜ್ಯಸರಕಾರಕ್ಕೆ ವಿವರವಾದ ಪತ್ರವೊಂದನ್ನು ಬರೆದು ಸೌಜನ್ಯ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿದರು. ರಾಜ್ಯಸರಕಾರ ತಕ್ಷಣ ಈ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಿ ಆದೇಶ ಹೊರಡಿಸಿತ್ತು. ಆ ಸಂದರ್ಭದಲ್ಲಿ ರಾಜ್ಯದಲ್ಲಿ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರ ಅಸ್ತಿತ್ವದಲ್ಲಿತ್ತು. ರಾಜ್ಯಸರಕಾರದ ಆದೇಶದನ್ವಯ ಸಿಬಿಐ ರಂಗಪ್ರವೇಶ ಮಾಡಿತು. ಸಿಬಿಐನ ಚೆನ್ನೈ ವಿಭಾಗದ ಅಧಿಕಾರಿಗಳು ಅಧಿಕೃತವಾಗಿ ತನಿಖೆಯನ್ನು ಕೈಗೆತ್ತಿಕೊಂಡು ಬೆಂಗಳೂರಿನ ಸಿಬಿಐ ನ್ಯಾಯಾಲಯದಲ್ಲಿ ಎಫ್‌ಐಆರ್ ದಾಖಲಿಸಿದರು. ಆ ಸಂದರ್ಭದಲ್ಲಿ ಆರೋಪಿ ಸಂತೋಷ್ ರಾವ್ ಮಂಗಳೂರಿನ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಖೈದಿಯಾಗಿದ್ದ. ಸಿಬಿಐ ಅಧಿಕಾರಿಗಳು ಸಿಓಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪ ಪಟ್ಟಿಯ ಪ್ರತಿಯನ್ನು ಪಡೆದುಕೊಂಡು ಕೂಲಂಕಷವಾಗಿ ಪರಿಶೀಲನೆ ನಡೆಸಿದರು. ಸಿಓಡಿ ಅಧಿಕಾರಿಗಳು ಯಾರನ್ನೆಲ್ಲಾ ವಿಚಾರಣೆಗೆ ಗುರಿಪಡಿಸಿದ್ದಾರೋ ಅವರನ್ನೆಲ್ಲರನ್ನೂ ಮತ್ತೇ ವಿಚಾರಣೆ ನಡೆಸಿತು. ಆದರೆ ಹೆಚ್ಚುವರಿ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಾಗಲಿಲ್ಲ. ವಿಚಾರಣೆಗೆ ಹಾಜರಾದ ಎಲ್ಲರೂ ಕೂಡಾ ತಮಗೆ ತಿಳಿದಿದ್ದ ಅಂಶಗಳನ್ನೇ ಒತ್ತಿ ಹೇಳಿದ್ದರು. ಸಿಬಿಐ ಅಧಿಕಾರಿಗಳಿಗೂ ಸಹ ಮನದಟ್ಟಾಗಿತ್ತು ಈ ಪ್ರಕರಣದಲ್ಲಿ ಸಂತೋಷ್‌ರಾವ್‌ನನ್ನು ಹೊರತುಪಡಿಸಿ ಇನ್ನೊಬ್ಬ ಆರೋಪಿ ಇರಲು ಸಾಧ್ಯವಿಲ್ಲ ಎಂಬ ಅಂಶ. ಸಿಬಿಐನವರು ಸಿಬಿಐ ನ್ಯಾಯಾಲಯಕ್ಕೆ ಪೂರಕ ಆರೋಪ ಪಟ್ಟಿ ಸಲ್ಲಿಸಿದರು. ಸಂತೋಷ್ ರಾವ್ ಆರೋಪಿ ಎಂದು. ಪ್ರಕರಣ ಅಧಿಕೃತವಾಗಿ ಬೆಂಗಳೂರಿನ ಸಿಬಿಐ ನ್ಯಾಯಾಲಯಕ್ಕೆ ಹಸ್ತಾಂತರವಾಯಿತು.

ಮುಂದುವರಿಯುವುದು.....

# ಬೆಟ್ಟಿಂಗ್ ಕಿಂಗ್ ಶೆಟ್ಟಿಯ ಕಿಡ್ನಾಪ್ ಕೋಡಿಕೆರೆ ಗ್ಯಾಂಗ್ ರಿವೀಲ್

ಉಡುಪಿ

✍ ಮೋಹನ್ ಬೋಳಂಗಡಿ

ಇದೊಂದು ರೋಚಕ ರೋಚಕ ಕ್ರೈಂ ಸ್ಟೋರಿ ನೋಡಿ. ಉಡುಪಿ ಜಿಲ್ಲೆಯ ಕುಂದಾಪುರ ಹಾಗೂ ಬ್ರಹ್ಮಾವರ ತಾಲೂಕಿನ ವ್ಯಾಪ್ತಿಯಲ್ಲಿ ಏನಿಲ್ಲ ನೋಡಿ ಎಲ್ಲವೂ ಇದೆ ಅಲ್ಲಿ. ಇಲ್ಲಿಗಲ್ ಫೈನಾನ್ಸರ್ ಇದ್ದಾರೆ, ಬೆಟ್ಟಿಂಗ್ ಕಿಂಗ್‌ಗಳಿದ್ದಾರೆ, ಬೆಟ್ಟಿಂಗ್ ಆ್ಯಪ್‌ಗಳ ಮೂಲಕ ಕಮಾಯಿ ಮಾಡುತ್ತಿರುವವರಿದ್ದಾರೆ, ಮಾದಕ ವ್ಯಸನಿಗಳನ್ನು ಹುಟ್ಟು ಹಾಕಲು ಬೇಕಾದಂತಹ ಎಲ್ಲಾ ವ್ಯವಸ್ಥೆ ಮಾಡುವವರು ಇಲ್ಲಿದ್ದಾರೆ. ಯಾವುದೇ ಭಯ, ಯಾರದೇ ಅಂಜಿಕೆ ಇಲ್ಲದೆ ಸಕತ್ತಾಗಿ ದುಡ್ಡು ಮಾಡಿಕೊಂಡು ಹೋಗುತ್ತಿದ್ದಾರೆ. ಹಾಗೆಯೇ ಜನರ ತಲೆಗೆ ಮಖಮಲ್ ಟೋಪಿ ಇಡುತ್ತಿದ್ದಾರೆ ಕೂಡ. ಅಂಥವರ ದೊಡ್ಡ ಟೀಮೆ ಸ್ವತಂತ್ರವಾಗಿ ಇಲ್ಲಿ ಕಾರ್ಯಚರಿಸುತ್ತಿದೆ.ಚೇತು


ತೇಜಸ್ ಶೆಟ್ಟಿ

ನಂಬಿಕೆ ಬರುತ್ತಿಲ್ಲವೇ? ಈ ಸ್ಟೋರಿಯನ್ನೊಮ್ಮೆ ನೋಡಿ. ಇದೊಂದು ಅಪರಾಧ ಪ್ರಕರಣದ ಸ್ಟೋರಿ. ಈ ಸ್ಟೋರಿಯ ಜೊತೆ ಜೊತೆಗೆನೇ ಈ ಎಲ್ಲಾ ಇಲ್ಲಿಗಲ್ ಬಿಸ್‌ನೆಸ್‌ಗಳು ಹಾದು ಹೋಗುತ್ತವೆ. ನಂಬಿದರೆ ನಂಬಿ ಬಿಟ್ಟರೆ ಬಿಡಿ, ಈ ಸ್ಟೋರಿಯ ಜೊತೆ ಜೊತೆಗೇನೆ ಉಡುಪಿಯ ಪೊಲೀಸರು ಅಲರ್ಟ್ ಆಗುತ್ತಾರೆ ಎಂದು ನಂಬುತ್ತದೆ ಪತ್ರಿಕೆ.

ಅವನ ಹೆಸರು ತೇಜಸ್ ಶೆಟ್ಟಿ. ಉಡುಪಿ ಜಿಲ್ಲೆಯ ಹೆಬ್ರಿಯಲ್ಲಿ ಮನೆ ಮಾಡಿಕೊಂಡಿರುವ ಮೊಟ್ಟೆ ಮೂನು ಅಲಿಯಾಸ್ ಮೋಹನ್ ಶೆಟ್ಟಿ ಎಂಬವರ ಮಗನೇ, ಈ ತೇಜಸ್ ಶೆಟ್ಟಿ. ಈತ ಈ ಪ್ರಕರಣದ ಸಂತ್ರಸ್ತನ? ಅಥವಾ ಈ ಪ್ರಕರಣದ ಕ್ರಿಮಿನಲ್ ವ್ಯಕ್ತಿತ್ವದವನ? ಈ ತೇಜಸ್ ಶೆಟ್ಟಿಯ ತಂದೆ ತೀರ್ಥಹಳ್ಳಿಯಲ್ಲಿ, ಕಲ್ಲಿನ ಕೋರೆ ಮಾಡುತ್ತಿದ್ದಾರೆ. ಈ ಕೋರೆಗೆ ಲೈಸನ್ಸ್ ಇದೆಯೋ ಅಥವಾ ಇಲ್ಲವೋ ಗೊತ್ತಿಲ್ಲ, ಆದರೆ ಆತನ ಕೋರೆ ಹಗಲು ರಾತ್ರಿ ಎನ್ನದೆ ನಡೆಯುತ್ತಿರುತ್ತದೆ. ಕುಂದಾಪುರದ ಸಿದ್ದಾಪುರದ ಸಮೀಪ ಪೆಟ್ರೋಲ್ ಬಂಕ್ ಒಂದು ಈತನ ಹೆಸರಿನಲ್ಲಿದೆ. ಇನ್ನೂ ಹಲವು ಬಿಸ್‌ನೆಸ್ ಗಳನ್ನು ಮಾಡುತ್ತಿರುವ ಮೋಹನ್ ಶೆಟ್ಟಿಯ ಮಗನೇ ಈ ತೇಜಸ್ ಶೆಟ್ಟಿ. ಇನ್ನು 30ರ ಒಳಗಿನ ಆಸು ಪಾಸಿನಲ್ಲಿ ಇರುವಂತಹ ಯುವಕ. ಯಾವ ಚಟ ಇಲ್ಲ... ಎಲ್ಲಾ ಚಟಗಳು ಈತನಿಗೆ ಮೈ ತುಂಬಾ ಇದೆ. ಈತನ ಬೆಟ್ಟಿಂಗ್ ಆ್ಯಪ್‌ಗಳ ಮೂಲಕ ಮತ್ತು ಕ್ರಿಕೆಟ್ ಬೆಟ್ಟಿಂಗ್ ಮೂಲಕ ಸಖತ್ತಾಗಿ ಕಮಾಯಿ ಮಾಡಿದ್ದಾನೆ. ಈತನ ಆ್ಯಪ್‌ನಲ್ಲಿ ಆಡುವ ಜನಸಾಮಾನ್ಯರಿಗೆ, ಗೆದ್ದರೂ ಸಹ ಅವರಿಗೆ ಗೆದ್ದ ಹಣವು ಸಿಗುತ್ತಲೇ ಇರಲಿಲ್ಲ. ಅಂತಹ ಖದೀಮ ಯುವಕನೇ ಈ ತೇಜಸ್ ಶೆಟ್ಟಿ. ಹೆಬ್ರಿಯ ಮನೆಯಲ್ಲಿ ಇದ್ದುಕೊಂಡು ಪ್ರತಿದಿನ ಮಣಿಪಾಲಗೆ ಬಂದು ಮಣಿಪಾಲ್ ಕೇಂದ್ರವನ್ನಾಗಿಸಿಕೊಂಡು ತನ್ನ ಈ ಬೆಟ್ಟಿಂಗ್ ವ್ಯವಹಾರವನ್ನು ನಡೆಸುತ್ತಿದ್ದ.

ಅದೇ ತೇಜಸ್ ಶೆಟ್ಟಿಯನ್ನೇ ಮೊನ್ನೆ ನವೆಂಬರ್ 19ರಂದು ನಾಲ್ವರು ಇರುವಂತಹ ಅಪಹರಣಕಾರರ ತಂಡವು ತೇಜಸ್ ಶೆಟ್ಟಿಯನ್ನು ಅಪಹರಿಸುತ್ತದೆ. ಹಾಗೆ ಅಪಹರಿಸಿದ ಆ ತಂಡವು ತೇಜಸ್ ಶೆಟ್ಟಿಯ ತಂದೆಗೆ ಕಾಲ್ ಮಾಡಿ ಬರೋಬ್ಬರಿ ಮೂರು ಕೋಟಿ ಹಣವನ್ನು ಕೊಡಬೇಕು ಎಂದು ಡಿಮ್ಯಾಂಡ್ ಮಾಡಿದೆ. ತೇಜಸ್ ಶೆಟ್ಟಿಯ ತಂದೆ ಮೋಹನ್ ಶೆಟ್ಟಿ ಅಲಿಯಾಸ್ ಮೊಟ್ಟೆ ಮೋನು, ತಕ್ಷಣವೇ ಕೋಟ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತುತ್ತಾರೆ. ಅಲ್ಲಿಗೆ ಬಂದ ಮೋಹನ್ ಶೆಟ್ಟಿ, ತನ್ನ ಮಗನ ಫೋಟೋದ ಜೊತೆಗೆ ದೂರೊಂದನ್ನು ನೀಡುತ್ತಾರೆ. ಯಾರೋ ಅಪರಿಚಿತರು ಮಗನನ್ನು ಅಪಹರಿಸಿದ್ದಾರೆ, ಅವರಿಗ ಮೂರು ಕೋಟಿ ಹಣವನ್ನು ತಕ್ಷಣವೇ ನೀಡಲು ಒತ್ತಾಯಿಸುತ್ತಿದ್ದಾರೆ ಎಂದು ಹೇಳುತ್ತಿದ್ದಂತೆಯೇ, ಕೋಟ ಪೊಲೀಸರಿಗೆ ಈ ಪ್ರಕರಣದ ಗಂಭೀರತೆಯು ಅರ್ಥವಾಗಿದೆ. ತತ್‌ಕ್ಷಣವೇ ಮೋಹನ್ ಶೆಟ್ಟಿ ಅವರಿಂದ ದೂರ ತೆಗೆದುಕೊಂಡು ತನಿಖೆಯು ಪ್ರಾರಂಭವಾಗುತ್ತದೆ.

ತತ್‌ಕ್ಷಣವೇ ವೈಜ್ಞಾನಿಕವಾದಂತಹ ತನಿಕೆಯು ಪ್ರಾರಂಭವಾಗುತ್ತದೆ. ಆಗಲೇ ಅಪಹರಿಸಿದವರು ಮಂಗಳೂರು ಕಡೆಯವರು ಅನ್ನುವುದು ಗೊತ್ತಾಗುತ್ತದೆ. ಹಾಗ ಗೊತ್ತಾಗುತ್ತಿದ್ದಂತೆಯೇ ಉಡುಪಿ ಜಿಲ್ಲೆಯ ಅನೇಕ ಪೊಲೀಸ್ ಅಧಿಕಾರಿಗಳ ಹಾಗೂ ಮಂಗಳೂರಿನ ಅಧಿಕಾರಿಗಳ ಸಂಪರ್ಕ ಹಾಗೂ ಅವರ ಸಹಾಯದಿಂದ ಈ ಒಂದು ಅಪಹರಣದ ಕೃತ್ಯ ನಡೆಸಿದವರು ಯಾರೆನ್ನುವುದು ಸ್ಪಷ್ಟವಾಗುತ್ತದೆ. ಯಾವಾಗ ಅಪಹರಣ ಮಾಡಿದವರು ಯಾರೆನ್ನುವುದು ಗೊತ್ತಾಗುತ್ತದೆಯೋ, ಆಗ ಕಿಡ್ನ್ಯಾಪ್ ಪ್ರಕರಣಕ್ಕೆ ಮುಕ್ತಾಯವೂ ಪ್ರಾರಂಭವಾಗುತ್ತದೆ.


ಎಸ್ಪಿ ಹರಿರಾಮ್ ಶಂಕರ್


ಪಿಎಸ್ಐ ಪ್ರವೀಣ್

ಎಸ್, ಯಾವಾಗ ಈ ಪ್ರಕರಣದ ಕಿಡ್ನಾಪರ್ಸ್ ಮಂಗಳೂರಿನ ಕೋಡಿಕೆರೆ ಗ್ಯಾಂಗ್ ಅನ್ನುವುದು ರಿವೀಲ್ ಆಗುತ್ತದೆಯೋ, ಅಲ್ಲಿಗೆ ಪೊಲೀಸರ ಅರ್ಧ ಕೆಲಸ ಮುಗಿಯಿತು ಅಂತ ಅರ್ಥ. ಕೆಲವು ನುರಿತ ಪೊಲೀಸ್ ಅಧಿಕಾರಿಗಳು ಇಮ್ಮಿಡಿಯಟ್ಟಾಗಿ ಕೊಡಿಕೆರೆಯ ಹುಡುಗರ ಹೆಗಲ ಮೇಲೆ ಕೈ ಇಡುತ್ತಾರೆ. ಗುಂಡು ತಿನ್ನಬೇಕು ಅಂತಿದ್ದರೆ ಆಟ ಆಡು, ಇಲ್ಲ ಮರ್ಯಾದೆಯಾಗಿ ತೇಜಸ್ ಶೆಟ್ಟಿಯನ್ನು ಬಿಟ್ಟುಬಿಡು ಎಂಬ ಎಚ್ಚರಿಕೆಯ ಮಾತು ಪೊಲೀಸರ ಕಡೆಯಿಂದ ಯಾವಾಗ ಹುಡುಗರಿಗೆ ಪಾಸ್ ಆಯಿತೋ, ಆಗಲೇ ಅಪಹರಣ ಪ್ರಕರಣಕ್ಕೆ ಸುಖಾಂತ್ಯ ಸಿಕ್ಕಿತು. ಅಪಹರಣವಾಗಿ ಕೇವಲ ಮೂರೇ ಗಂಟೆಯಲ್ಲಿ ತೇಜಸ್ ಶೆಟ್ಟಿಯನ್ನು ಅಪಹರಣಕಾರರು ಬಿಟ್ಟುಬಿಡುತ್ತಾರೆ. ಈ ಅಪಹರಣ ಕಾರ್ಯಕ್ಕೆ ಬಳಸಲಾದ ಒಂದು ಇನ್ನೋವಾ ಕಾರು ಮತ್ತೊಂದು ಐ-20 ಕಾರು ಕುಂದಾಪುರದ ಮದ್ದು ಗುಡ್ಡೆ ಎಂಬಲ್ಲಿನ ಹೊಳೆಯ ಬದಿಯಲ್ಲಿ ಸಿಗುತ್ತದೆ.

ಅಪಹರಣಕಾರರಿಂದ ತೇಜಸ್ ಶೆಟ್ಟಿ ಏನು ಬಚಾವಾದ, ಆದರೆ ಪೊಲೀಸರು ಸುಮ್ಮನಿರಲು ಸಾಧ್ಯವೇ? ಆರೋಪಿಗಳನ್ನು ಬಂಧಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಾಗ ಉಡುಪಿ ಮೂಲದ ಸುಜಿತ್ ಹಾಗೂ ಸುದೀಪ್ ಎಬ್ಬಿಬ್ಬರು ಸೇರಿದಂತೆ ನಾಲ್ವರು ಅಪರಾಧಿಗಳನ್ನು ಬಂದಿಸಲಾಗುತ್ತದೆ. ಈ ಪ್ರಕರಣದ ಇನ್ನೂ ನಾಲ್ವರು ಅಪರಾಧಿಗಳನ್ನು ಬಂಧಿಸಬೇಕು ಅಷ್ಟೇ. ಪೊಲೀಸರು ಅವರ ಬೆನ್ನ ಹಿಂದಿದ್ದಾರೆ. ಇಂದಲ್ಲ ನಾಳೆ ಅವರು ಅರೆಸ್ಟ್ ಆಗುತ್ತಾರೆ ಬಿಡಿ. ಆದರೆ ಈ ಅಪಹರಣದ ಹಿಂದಿನ ಉದ್ದೇಶವೇನು? ಯಾರ ಕೈವಾಡವಿದೆ? ಅಪಹರಣ ಮಾಡಿದವರು ಪೊಲೀಸರ ಪ್ರಕಾರ ಕೊಡಿಕೆರೆ ಹುಡುಗರು, ಪಡೀಲಿನ ಚೇತು ಹಾಗೂ ಇತರರು. ಪತ್ರಿಕೆಗೆ ತಿಳಿದು ಬಂದ ಮಾಹಿತಿಯ ಪ್ರಕಾರ ಪಡಿಲಿನ ಚೇತು ನೇತೃತ್ವದಲ್ಲಿಯೇ ಈ ಅಪಹರಣ ನಡೆದಿದೆ. ಚೇತು ಸಹಿತ ಪ್ರಕರಣದಲ್ಲಿರುವ ಆರೋಪಿಗಳು ಜೊತೆಗಾರರಾಗಿದ್ದರು. ಈ ನಿಟ್ಟಿನಲ್ಲಿ ವಿವರವಾದಂತಹ, ಆಳವಾದಂತಹ ತನಿಖೆ ನಡೆಯುತ್ತಿದೆ ಕೋಟ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಪ್ರವೀಣ್ ಹಾಗೂ ಅವರ ತಂಡವು ಅಪರಾಧಿಗಳ ಹಿಂದೆ ಬಿದ್ದಿದ್ದಾರೆ. ಈ ಒಂದು ಅಪಹರಣದ ಹಿಂದಿನ ಸಂಚು ನೈಜತೆಯನ್ನು ತಿಳಿಯುವ ನಿಟ್ಟಿನಲ್ಲಿ ತನಿಖೆ ಮುಂದುವರೆಸಿದ್ದಾರೆ.


ಪಡೀಲ್ ಚೇತು

ಚಿತ್ರದುರ್ಗ ಎಂಎಲ್ಎ; ಚಿತ್ರದುರ್ಗ ಜಿಲ್ಲೆಯ ಶಾಸಕರೊಬ್ಬರ ಐದು ಕೋಟಿ ಹಣವನ್ನು ಈ ತೇಜಸ್ ಶೆಟ್ಟಿ ಮುಂಡಾ ಮೋಚಿದ್ದಾನಂತೆ. ಆ ಹಣದ ವಸೂಲಿಗೆ ಶಿವಮೊಗ್ಗದ ಕಡೆಯಿಂದ ಮಂಗಳೂರಿಗೆ ಕಾಂಟ್ರಾಕ್ಟ್ ಬಂದಿದೆಯಂತೆ. ಉಡುಪಿಯ ಒಂದು ಟೀಮಿಗೂ ಹೋಗಿತ್ತಂತೆ, ಅವರು ಕೇವಲ ಕಥೆ ಹೇಳುತ್ತಲೇ ಕಳೆದಿದ್ದರಿಂದ, ಅದನ್ನು ಕ್ಯಾನ್ಸಲ್ ಮಾಡಿ ಮಂಗಳೂರಿನ ಈ ಟೀಮಿಗೆ ಡೀಲ್ ಕೊಟ್ಟರಂತೆ ಅನ್ನುವುದು ಒಂದು ಕಡೆಯಲ್ಲಿ ವೈರಲ್ ಆದ ಸುದ್ದಿ ಆದರೆ, ಒಂದು ಕಡೆಯಲ್ಲಿ ಇನ್ನೊಂದು ತರಹದ ನ್ಯೂಸ್ ಹರಡಿದೆ. ಆ ನ್ಯೂಸ್ ಪ್ರಕಾರ ಈ ತೇಜಸ್ ಶೆಟ್ಟಿ ತನ್ನ ಚಟಗಳಿಂದಾಗಿ ಸಾಕಷ್ಟು ಸಾಲ ಮಾಡಿಕೊಂಡಿದ್ದಾನೆ, ಅದರಿಂದಾಗಿ ಸಾಲಗಾರರು ಬೆನ್ನು ಹತ್ತಿದ್ದಾರೆ. ಅವರಿಂದ ಬಚಾವಾಗ ಬೇಕು ಅಂದ್ರೆ, ಹಣ ಬೇಕು. ಅಪ್ಪ ಮೋಹನ್ ಶೆಟ್ಟಿ, ಇಂತಹ ಕೆಲಸಕ್ಕೆ ಹಣ ಕೊಡುವುದಿಲ್ಲ. ಅಪ್ಪನ ವ್ಯವಹಾರದಲ್ಲಿ ನಿಯತ್ತಾಗಿ ತೊಡಗಿಕೊಳ್ಳಲು ಈ ಮಗ ಎಂಬ ಮಹಾನುಭಾವ ಸಿದ್ದನಿಲ್ಲ. ಹಾಗಾಗಿ ಅಪ್ಪನಿಂದ ಹಣ ಪಡೆಯುವುದಕ್ಕಾಗಿ ಈತನೇ ಕಿಡ್ನ್ಯಾಪ್ ನಾಟಕ ರಚಿಸಿದ್ದಾನೆ. ನೀವು ನನ್ನನ್ನು ಕಿಡ್ನಾಪ್ ಮಾಡಿ ಮೂರು ಕೋಟಿ ಡಿಮ್ಯಾಂಡ್ ಮಾಡಿ. ಅಪ್ಪ ಕೊಟ್ಟೆ ಕೊಡುತ್ತಾರೆ. ಅದರಲ್ಲಿ 50 ಲಕ್ಷ ನಿಮಗೆ, ಉಳಿದ ಎರಡುವರೆ ಕೋಟಿ ನನಗೆ ಎಂದು ಮಾತುಕತೆ ನಡೆಸಿ ಈ ಒಂದು ಕಿಡ್ನ್ಯಾಪ್ ಪ್ರಹಸನ ನಡೆಸಲಾಗಿದೆ. ಅಪಹರಣಕಾರರ ಪೈಕಿ ಒಂದಿಬ್ಬರು ತೇಜಸ್ ಶೆಟ್ಟಿಯ ಕಾರಿನಲ್ಲಿ ಆತನ ಜೊತೆಗೆ ಬಂದಿದ್ದಾರೆ ಅನ್ನೋದು ಇನ್ನೊಂದು ಬಗೆಯ ಸ್ಟೋರಿ.

ಇದು ಎರಡು ಬಿಟ್ಟು ಇನ್ನೂ ಒಂದು ಸ್ಟೋರಿ ಇದೆ. ಆ ಸ್ಟೋರಿಯ ಪ್ರಕಾರ ಬ್ರಹ್ಮಾವರದ ವಿಕ್ಕಿ ಶೆಟ್ಟಿಯೋ, ತೆಕ್ಕಟ್ಟೆಯ ನಿಖಿಲ್ ಶೆಟ್ಟಿಯೋ ಸ್ಪಷ್ಟವಾಗಿಲ್ಲ. ಆದ್ರೆ ಇವರಿಬ್ಬರೂ ಸಹ ಬೆಟ್ಟಿಂಗ್ ಆಪ್ ಓನರ್‌ಗಳೇ. ಇವರಿಬ್ಬರ ಪೈಕಿ ಒಬ್ಬ ತೇಜಸ್ ಶೆಟ್ಟಿಗೆ ಹತ್ತು ಲಕ್ಷ ಸಾಲ ನೀಡಿದ್ದ. ಆ ಸಾಲವನ್ನು ವಾಪಸ್ ಕೊಡದೆ ಸತಾಯಿಸುತ್ತಿದ್ದ. ಅದನ್ನು ವಸೂಲಿ ಮಾಡಲು ಹಲವರಲ್ಲಿ ಮಾತುಕತೆ ನಡೆದಿತ್ತು, ಕೆಲವರು ವಸೂಲಿ ಮಾಡಿ ಕೊಡಲು ತಯಾರಿಯೂ ಇದ್ದರೂ ಎನ್ನಲಾಗುತ್ತದೆ. ಆದರೆ ಈ ಪ್ರಕರಣವು ಅಪಹರಣ ಪ್ರಕರಣಕ್ಕೆ ಟ್ಯಾಲಿಯಾಗುತ್ತಿಲ್ಲ.

ಈ ತೇಜಸ್ ಶೆಟ್ಟಿ ಕೇವಲ ಇಲ್ಲಿ ಅಪಹರಣಕ್ಕೊಳಗಾದ ವ್ಯಕ್ತಿ ಅಷ್ಟೇ ಅಲ್ಲ ಸಾಕಷ್ಟು ಬಾನ ಗಡಿಯ ವ್ಯಕ್ತಿಯು ಹೌದು. ಡ್ರಿಂಕ್ಸ್ ಹಾಗೂ ಡ್ರಗ್ಸ್ ವ್ಯಸನಿಯೂ ಹೌದು. ಗಾಂಜಾದ ನಶೆಯಲ್ಲಿ ತೇಲಾಡುವಂತಹ ವ್ಯಕ್ತಿಯು ಹೌದು. ಇದರ ಜೊತೆಗೆ ಮಣಿಪಾಲ ಕೇಂದ್ರವನ್ನಾಗಿಸಿಕೊಂಡು ಕ್ರಿಕೆಟ್ ಬೆಟ್ಟಿಂಗ್ ಮತ್ತು ಆ್ಯಪ್‌ಗಳ ಮೂಲಕ ಹಲವು ಜೂಜಿನ ವ್ಯವಹಾರ ನಡೆಸುತ್ತಿದ್ದ. ಈ ಒಂದು ಜೂಜಿನ ಆ್ಯಪ್ ರಚಿಸುವುದಕ್ಕಾಗಿ ಮಹಾರಾಷ್ಟ್ರದ ನಾಗಪುರಕ್ಕೆ ಹೋಗಿದ್ದ. ಅಲ್ಲಿಂದಲೇ ಈ ಆ್ಯಪ್ ಸಿದ್ದ ಮಾಡಿಸಿಕೊಂಡು ಬಂದಿದ್ದಾನೆ. ಹಾಗೆ ಬಂದವನು ಮಣಿಪಾಲವನ್ನು ಅಡ್ಡೆಯನ್ನಾಗಿಸಿ ಕೊಂಡು ತನ್ನ ಅವ್ಯವಹಾರ ಶುರು ಮಾಡಿಕೊಂಡಿದ್ದಾನೆ.

ಈತ ಬೆಟ್ಟಿಂಗ್‌ನಲ್ಲಿ ಹಣ ಕಟ್ಟಿದವರಿಗೆ, ಅವರು ಗೆದ್ದರೆ ವಾಪಸ್ ಹಣ ನೀಡುವುದರಲ್ಲಿ ಹಿಂದೆ, ಜೂಜು ಆಡಿದವರಿಗೆ ಟೋಪಿ ಹಾಕುತ್ತಿದ್ದ. ಇದರಿಂದಾಗಿ ಕೆಲವು ಸಮಯದ ಹಿಂದೆ ಮಣಿಪಾಲದಲ್ಲಿ ಎರ್ರಾಬಿರ್ರಿ ಒದೆಯನ್ನು ತಿಂದಿದ್ದ ನೋಡಿ.

ಎಎಸ್‌ಪಿ ರೈಡ್; ಈ ಹಿಂದೆ ಈತನ ಮನೆ ಇರುವ ಹೆಬ್ರಿಯ ನಿವಾಸದ ಮೇಲೆ ಕಾರ್ಕಳ ಎಎಸ್‌ಪಿಯ ತಂಡ ರೈಡ್ ಮಾಡಿತ್ತು. ಪಕ್ಕಾ ಇನ್‌ಫರ್ಮೇಷನ್ ಆಧಾರದಲ್ಲಿಯೇ ಆ ರೈಡ್ ನಡೆದಿತ್ತು. ಆವತ್ತು ಆ ಮನೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ಮತ್ತು ಕೆಲವು ಜೂಜಿನ ಆ್ಯಪ್‌ಗಳು ಜೊತೆಗೆ ಒಂದಿಷ್ಟು ಗಾಂಜಾ ಕೂಡ ಅಲ್ಲಿ ದೊರಕಿದ್ದವು. ಅದರ ಅರ್ಥ ಈತ ಸಂಭಾವಿತನಲ್ಲ, ಹಲವು ಬಗೆಯ ಇಲ್ಲಿಗಲ್ ವ್ಯವಹಾರದ ಜೊತೆಗೆ ಮೈತುಂಬ ಬ್ಯಾಡ್ ಚಟಗಳೆ ತುಂಬಿಕೊಂಡಿವೆ ಅನ್ನುವುದು ಸ್ಪಷ್ಟವಾಗುತ್ತದೆ.

ಅದೇನೇ ಇರಲಿ, ಈಗ ಈ ಒಂದು ಅಪಹರಣವು ನೈಜವಾಗಿರಲಿ ಅಥವಾ ಪ್ರಹಸನವೇ ಆಗಿರಲಿ ಇದರ ಆಳ ಅಗಲದ ಜೊತೆಗೆ ಈತನ ಎಲ್ಲಾ ರೀತಿಯ ಇಲ್ಲೀಗಲ್ ವ್ಯವಹಾರಕ್ಕೆ ಬೀಗ ಪರಮನೆಂಟ್ ಬೀಳಬೇಕು. ಹಾಗೆಯೇ ಈ ಪ್ರಕರಣದ ಆರೋಪಿಗಳಿಗೆ ಶಿಕ್ಷೆಯು ಆಗಬೇಕು. ಜೊತೆಗೆ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬೆಟ್ಟಿಂಗ್ ಮತ್ತು ಆಪ್ ಬ್ರೋಕರ್ಸ್‌ಗಳ ಮೇಲೆ ದಾಳಿಯು ಅನಿವಾರ್ಯ. ಜಿಲ್ಲಾ ಎಸ್‌ಪಿ ಹರಿರಾಮ್ ಶಂಕರ್ ಹಾಗೂ ಉಡುಪಿ ಡಿವೈಎಸ್ಪಿ ಪ್ರಭು ಅವರು ಈ ನಿಟ್ಟಿನಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುತ್ತಾರೆಂದು ಈ ಭಾಗದ ಜನರು ಆಶಿಸುತ್ತಿದ್ದಾರೆ. ಯಾಕಂದ್ರೆ, ಎಲ್ಲಿ ಇಲ್ಲಿಗಲ್ ವ್ಯವಹಾರ ಇರುತ್ತದೆ ಅಲ್ಲಿ ಕ್ರೈಂ ರೇಟ್ ಕೂಡ ಹೆಚ್ಚಿರುತ್ತದೆ. ಕ್ರೈಂ ರೇಟ್ ತಹಬಂದಿಗೆ ಬರಬೇಕು ಅಂದ್ರೆ ಇಲ್ಲಿಗಲ್ ವ್ಯವಹಾರಕ್ಕೆ ಅಂಕುಶ ಬೀಳಲೇಬೇಕು ಅಲ್ಲವೇ?

☯

# ಸ್ಮೃತಿ ಮಂಧನಾ ಪ್ರೀತಿಗೆ ದ್ರೋಹ ಮಾಡಿದ ಪಲಾಶ್ ಮುಚ್ಚಲ್? ಕೊನೆಗೂ ನಿಂತೇ ಹೋಯಿತು ಮದುವೆ!



ಕ್ರಿಕೆಟರ್ ಸ್ಮೃತಿ ಮಂಧನಾ ಮತ್ತು ಸಂಗೀತ ನಿರ್ದೇಶಕ ಪಲಾಶ್ ಮುಚ್ಚಲ್ ಅವರ ವಿವಾಹವು ಸ್ಮೃತಿ ತಂದೆಯ ಅನಾರೋಗ್ಯದಿಂದ ಮುಂದೂಡಲ್ಪಟ್ಟಿದೆ ಎಂದು ಹೇಳಲಾಗಿತ್ತು. ಆದರೆ, ಪಲಾಶ್ ಅವರ ಅಕ್ರಮ ಸಂಬಂಧದ ವದಂತಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ...

ಭಾರತೀಯ ಮಹಿಳಾ ಕ್ರಿಕೆಟ್ ಆಟಗಾರ್ತಿ ಸ್ಮೃತಿ ಮಂಧನಾ ಮತ್ತು ಸಂಗೀತ ನಿರ್ದೇಶಕ ಪಲಾಶ್ ಮುಚ್ಚಲ್ ಅವರ ಮದುವೆ ಮುಂದೂಡಲು ಪಲಾಶ್ ಅವರ ಅಕ್ರಮ ಸಂಬಂಧವೇ ಕಾರಣ ಎಂಬ ವರದಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಕಳೆದ ಭಾನುವಾರ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಸ್ಮೃತಿ ಮತ್ತು ಪಲಾಶ್ ಮುಚ್ಚಲ್ ಅವರ ವಿವಾಹ ನಡೆಯಬೇಕಿತ್ತು. ಮದುವೆಯ ದಿನ ಸ್ಮೃತಿ ಅವರ ತಂದೆ ಶ್ರೀನಿವಾಸ್ ಮಂಧನಾ ಅವರಿಗೆ ಹೃದಯಾಘಾತವಾದ ಕಾರಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೇ ಕಾರಣಕ್ಕೆ ಮದುವೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಎರಡೂ ಕುಟುಂಬಗಳು ಸ್ಪಷ್ಟಪಡಿಸಿದ್ದವು.



ಶ್ರೀನಿವಾಸ್ ಮಂದನಾ ಆಸ್ಪತ್ರೆಗೆ ದಾಖಲಾದ ಬೆನ್ನಲ್ಲೇ, ದೈಹಿಕ ಅಸ್ವಸ್ಥತೆಯಿಂದ ಪಲಾಶ್ ಮುಚ್ಚಲ್ ಅವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಆರೋಗ್ಯ ಸುಧಾರಿಸಿದ ನಂತರ ಪಲಾಶ್ ಅವರನ್ನು ಡಿಸ್ಚಾರ್ಜ್ ಮಾಡಲಾಯಿತು. ಇದರ ಬೆನ್ನಲ್ಲೇ, ಸ್ಮೃತಿ ಮಂಧನಾ ಅವರ ತಂದೆಯ ಆರೋಗ್ಯ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮದುವೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಮತ್ತು ಈ ಕಷ್ಟದ ಸಮಯದಲ್ಲಿ ಎಲ್ಲರೂ ಎರಡೂ ಕುಟುಂಬಗಳ ಖಾಸಗಿತನವನ್ನು ಗೌರವಿಸಬೇಕು ಎಂದು ಪಲಾಶ್ ಮುಚ್ಚಲ್ ಅವರ ಸಹೋದರಿ ಪಲಕ್ ಮುಚ್ಚಲ್ ಸಾಮಾಜಿಕ ಮಾಧ್ಯಮಗಳಲ್ಲಿ ಸ್ಪಷ್ಟಪಡಿಸಿದ್ದರು. ಆದರೆ ತದ ನಂತರವೇ, ಪಲಾಶ್‌ಗೆ ಬೇರೆ ಸಂಬಂಧವಿದೆ ಎಂದು ಹೇಳಲಾಗುವ ಯುವತಿಯೊಂದಿಗಿನ ಚಾಟ್‌ನ ಸ್ಕ್ರೀನ್ ಶಾಟ್‌ಗಳು 'ರೆಡ್ಡಿಟ್'ನಲ್ಲಿ ವೈರಲ್ ಆಗಿವೆ!



### ಮದುವೆ ಮುಂದೂಡಲು ಅಕ್ರಮ ಸಂಬಂಧ ಕಾರಣ?

ಮೇರಿ ಡಿ ಕೋಸ್ಟಾ ಎಂಬ ಯುವತಿ ಪಲಾಶ್ ಜೊತೆ ನಡೆಸಿದ ವಾಟ್ಸಾಪ್ ಚಾಟ್‌ನ ಸ್ಕ್ರೀನ್‌ಶಾಟ್‌ಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಆದರೆ, ಇದು ನಿಜವಾಗಿಯೂ ಪಲಾಶ್ ಜೊತೆಗಿನ ಸಂಭಾಷಣೆಯೇ ಎಂಬುದು ಇನ್ನೂ ಖಚಿತವಾಗಿಲ್ಲ! ಹರಿದಾಡುತ್ತಿರುವ ವದಂತಿಗಳ ಬಗ್ಗೆ ಎರಡೂ ಕುಟುಂಬಗಳು ಇನ್ನೂ ಪ್ರತಿಕ್ರಿಯಿಸಿಲ್ಲ. ಯುವತಿಯನ್ನು ಮ್ಯಾರಿಯಟ್ ಹೋಟೆಲ್‌ನ ಪೂಲ್‌ನಲ್ಲಿ ಒಟ್ಟಿಗೆ ಈಜಲು ಆಹ್ವಾನಿಸುವುದು, ಸ್ಮೃತಿ ಜೊತೆಗಿನ ಸಂಬಂಧದ ಬಗ್ಗೆ ಪ್ರಶ್ನೆಗಳು ಮತ್ತು ಪಲಾಶ್ ಅವರ ಉತ್ತರಗಳು ವಾಟ್ಸಾಪ್ ಚಾಟ್ ನಲ್ಲಿವೆ.

### ಅನುಮಾನ ಹುಟ್ಟಿಸಿದ ಸ್ಮೃತಿ ಮಂಧನಾ ನಡೆ

ಇದರ ಬೆನ್ನಲ್ಲೇ ಸ್ಮೃತಿ ಮಂಧನಾ ತಮ್ಮ ಸಾಮಾಜಿಕ ಮಾಧ್ಯಮಗಳಿಂದ ಮದುವೆಗೆ ಸಂಬಂಧಿಸಿದ ಫೋಟೋ ಮತ್ತು ವಿಡಿಯೋಗಳನ್ನು ಡಿಲೀಟ್ ಮಾಡಿದ್ದಾರೆ. ಮುಂಬೈನ ಡಿ.ವೈ ಪಾಟೀಲ್ ಸ್ಟೇಡಿಯಂ ಮಧ್ಯದಲ್ಲಿ ಪಲಾಶ್ ಮುಚ್ಚಲ್ ಪ್ರಪೋಸ್ ಮಾಡಿದ ವಿಡಿಯೋವನ್ನೂ ಸ್ಮೃತಿ ಡಿಲೀಟ್ ಮಾಡಿದ್ದಾರೆ! ಸ್ಮೃತಿ ಮಾತ್ರವಲ್ಲದೆ, ಭಾರತೀಯ ತಂಡದ ಆಪ್ತ ಸ್ನೇಹಿತರಾದ ಜೆಮಿಮಾ ರೋಡ್ರಿಗ್ಸ್ ಮತ್ತು ಶ್ರೇಯಾಂಕ ಪಾಟೀಲ್ ಕೂಡ ಸ್ಮೃತಿ ಮದುವೆಗೆ ಸಂಬಂಧಿಸಿದ ಎಲ್ಲಾ ಪೋಸ್ಟ್‌ಗಳನ್ನು ಸಾಮಾಜಿಕ ಮಾಧ್ಯಮಗಳಿಂದ ತೆಗೆದು ಹಾಕಿದ್ದಾರೆ. ಆದರೆ, ಪಲಾಶ್ ಮುಚ್ಚಲ್ ಅವರ ಸಾಮಾಜಿಕ ಮಾಧ್ಯಮಗಳಲ್ಲಿ ಇವೆಲ್ಲವೂ ಲಭ್ಯವಿದೆ.




2019ರಲ್ಲಿ ಸ್ಮೃತಿ ಮತ್ತು ಪಲಾಶ್ ಪ್ರೀತಿಸಲು ಆರಂಭಿಸಿದ್ದರು. 2024 ರವರೆಗೆ ಇಬ್ಬರೂ ತಮ್ಮ ಪ್ರೇಮಕಥೆಯನ್ನು ರಹಸ್ಯವಾಗಿಟ್ಟಿದ್ದರು. ಕಳೆದ ವರ್ಷವಷ್ಟೇ ಇದು ಬಹಿರಂಗವಾಗಿತ್ತು.



### ಮೋದೀಜಿ ಶುಭಾಶಯ ಕೋರಿದ್ದರು!

ಮದುವೆಯಾಗಲಿರುವ ಸ್ಮೃತಿ ಮಂಧನಾ ಮತ್ತು ಪಲಾಶ್ ಮುಚ್ಚಲ್‌ಗೆ ಪ್ರಧಾನಿ ನರೇಂದ್ರ ಮೋದಿ ಪತ್ರದ ಮೂಲಕ ಶುಭ ಹಾರೈಸಿದ್ದರು. ಸ್ಮೃತಿ ಮತ್ತು ಪಲಾಶ್‌ಗೆ ಸಂತೋಷದ ಜೀವನವನ್ನು ಹಾರೈಸಿ ಪ್ರಧಾನ ಮಂತ್ರಿ ಕಚೇರಿಯಿಂದ ಪತ್ರ ಕಳುಹಿಸಲಾಗಿತ್ತು. ಈ ಹಿಂದೆ,ಭಾರತ ಮಹಿಳಾ ವಿಶ್ವಕಪ್ ಗೆದ್ದ ನಂತರ, ಪಲಾಶ್ ಮುಚ್ಚಲ್ ತಮ್ಮ ಎಡಗೈ ಮಣಿಕಟ್ಟಿನ ಮೇಲೆ ಸ್ಮೃತಿಯ ಜರ್ಸಿ ಸಂಖ್ಯೆಯನ್ನು ನೆನಪಿಸುವ 'SM 18' ಎಂದು ಬರೆದ ಟ್ಯಾಟೂ ಹಾಕಿಸಿಕೊಂಡ ವಿಡಿಯೋವನ್ನು ಹಂಚಿಕೊಂಡಿದ್ದರು. ಒಟ್ಟಾರೆ, ನಡೆಯಬೇಕಿದ್ದ ಇಂಟರ್‌ನ್ಯಾಷನಲ್ ಸೆಲೆಬ್ರಿಟಿಸ್ ಮದುವೆಯೊಂದು ಕಡೆಗಳಿಗೆಯಲ್ಲಿ ರದ್ದಾಗಿದೆ. ಇದನ್ನು ಸ್ಮೃತಿಯೇ ನಿನ್ನೆ ಪತ್ರಿಕಾಗೋಷ್ಠಿ ನಡೆಸಿ ತಿಳಿಸಿದ್ದಾರೆ.

# ವಿಶ್ವ ದಾಖಲೆ ನಿರ್ಮಿಸಿದ ವಿರಾಟ್ ಕೊಹ್ಲಿ...

ದಾಖಲೆಗಳ ಸರದಾರ ವಿರಾಟ್ ಕೊಹ್ಲಿ ಹೆಸರಿಗೆ ಮತ್ತೊಂದು ವಿಶ್ವ ದಾಖಲೆ ಸೇರ್ಪಡೆಯಾಗಿದೆ. ಈ ಬಾರಿ ಆಸ್ಟ್ರೇಲಿಯಾದ ಮಾಜಿ ಆಟಗಾರ ಮೈಕಲ್ ಬೆವೆನ್ ಅವರ ವಿಶ್ವ ದಾಖಲೆಯನ್ನು,ಮುರಿದು ಕಿಂಗ್ ಕೊಹ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಅದು ಕೂಡ ಅತ್ಯುತ್ತಮ ಸರಾಸರಿಯೊಂದಿಗೆ ಎಂಬುದು ವಿಶೇಷ.

ಏಕದಿನ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿಯ ಪಾರುಪತ್ಯ ಮುಂದುವರೆದಿದೆ. ಈ ಪಾರುಪತ್ಯದೊಂದಿಗೆ ಕಿಂಗ್ ಕೊಹ್ಲಿ ಮತ್ತೊಂದು ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಆದರೆ ಈ ಬಾರಿ ನಿರ್ಮಿಸಿರುವುದು ಅಂತಿಂಥ ದಾಖಲೆಯಲ್ಲ. ಬದಲಾಗಿ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ಯಾರಿಂದಲೂ ಸಾಧ್ಯವಾಗದ ವರ್ಲ್ಡ್ ರೆಕಾರ್ಡ್ ಎಂಬುದು ವಿಶೇಷ.

ಸೌತ್ ಆಫ್ರಿಕಾ ವಿರುದ್ಧದ 2ನೇ ಏಕದಿನ ಪಂದ್ಯದಲ್ಲಿ ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ವಿರಾಟ್ ಕೊಹ್ಲಿ 102 ರನ್ ಬಾರಿಸಿದ್ದರು. ಈ 102 ರನ್‌ಗಳೊಂದಿಗೆ ಕಿಂಗ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ 50 ಪ್ಲಸ್ ಸರಾಸರಿಯನ್ನು ಮುಂದುವರೆಸಿದ್ದಾರೆ. ಈ ಮೂಲಕ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ 4 ಸಾವಿರಕ್ಕೂ ಅಧಿಕ ದಿನಗಳ ಕಾಲ 50 ಪ್ಲಸ್ ಅವರೇಜ್ ನಲ್ಲಿ ಕಾಣಿಸಿಕೊಂಡ ಬ್ಯಾಟರ್ ಎನಿಸಿಕೊಂಡಿದ್ದಾರೆ.





ಇದಕ್ಕೂ ಮುನ್ನ ಇಂತಹದೊಂದು ದಾಖಲೆ ಆಸ್ಟ್ರೇಲಿಯಾದ ಮೈಕಲ್ ಬೆವೆನ್ ಹೆಸರಿನಲ್ಲಿತ್ತು. ಆಸ್ಟ್ರೇಲಿಯಾ ಪರ 232 ಏಕದಿನ ಪಂದ್ಯಗಳನ್ನಾಡಿರುವ ಬೆವೆನ್ 53.17 ಸರಾಸರಿಯಲ್ಲಿ ಒಟ್ಟು 6912 ರನ್ ಕಲೆಹಾಕಿದ್ದಾರೆ. ಈ ವೇಳೆ ಅವರು 3409 ದಿನಗಳ ಕಾಲ 50+ ಸರಾಸರಿ ಕಾಯ್ದುಕೊಂಡು ವಿಶ್ವ ದಾಖಲೆ ನಿರ್ಮಿಸಿದ್ದರು.

ಇದೀಗ ಈ ದಾಖಲೆಯನ್ನು ಅಳಿಸಿ ಹಾಕಿ ವಿರಾಟ್ ಕೊಹ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಕಿಂಗ್ ಕೊಹ್ಲಿ ಈವರೆಗೆ 307 ಏಕದಿನ ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 14412 ರನ್‌ಗಳನ್ನು ಕಲೆಹಾಕಿದ್ದಾರೆ. ಇದರ ನಡುವೆ 4431 ದಿನಗಳ ಕಾಲ 50 ಪ್ಲಸ್ ಅವರೇಜ್ ಅನ್ನು ಕಾಯ್ದುಕೊಂಡಿದ್ದಾರೆ.

ಈ ಮೂಲಕ 54 ವರ್ಷಗಳ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಧಿಕ ದಿನಗಳ ಕಾಲ 50+ ಅವರೇಜ್ ಕಾಯ್ದುಕೊಂಡ ಬ್ಯಾಟರ್ ಎಂಬ ವಿಶ್ವ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ವಿಶೇಷ ಎಂದರೆ ಕಿಂಗ್ ಕೊಹ್ಲಿಯನ್ನು ಹೊರತುಪಡಿಸಿ ವಿಶ್ವದ ಬೇರೆ ಯಾವುದೇ ಬ್ಯಾಟರ್‌ಗೂ ಏಕದಿನ ಕ್ರಿಕೆಟ್‌ನಲ್ಲಿ 4 ಸಾವಿರಕ್ಕೂ ಅಧಿಕ ದಿನಗಳ ಕಾಲ 50 ಪ್ಲಸ್ ಸರಾಸರಿಯನ್ನು ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲ. ಇದೀಗ ಯಾರಿಂದಲೂ ಸಾಧ್ಯವಾಗದ ವಿಶೇಷ ವಿಶ್ವ ದಾಖಲೆಗೆ ಕಿಂಗ್ ಕೊಹ್ಲಿ ಕೊರೊಳೊಡ್ಡಿದ್ದಾರೆ.

ಈ ಮೂಲಕ 54 ವರ್ಷಗಳ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ಅತ್ಯಧಿಕ ದಿನಗಳ ಕಾಲ 50 ಪ್ಲಸ್ ಅವರೇಜ್ ಕಾಯ್ದುಕೊಂಡ ಬ್ಯಾಟರ್ ಎಂಬ ವಿಶ್ವ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ವಿಶೇಷ ಎಂದರೆ ಕಿಂಗ್ ಕೊಹ್ಲಿಯನ್ನು ಹೊರತುಪಡಿಸಿ ವಿಶ್ವದ ಬೇರೆ ಯಾವುದೇ ಬ್ಯಾಟರ್‌ಗೂ ಏಕದಿನ ಕ್ರಿಕೆಟ್‌ನಲ್ಲಿ 4 ಸಾವಿರಕ್ಕೂ ಅಧಿಕ ದಿನಗಳ ಕಾಲ 50 ಪ್ಲಸ್ ಸರಾಸರಿಯನ್ನು ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲ. ಇದೀಗ ಬಹುಷಃ ಯಾರಿಂದಲೂ ಸಾಧ್ಯವಾಗದ ವಿಶೇಷ ವಿಶ್ವ ದಾಖಲೆ ನಿರ್ಮಿಸಿದ್ದಾರೆ ಕಿಂಗ್ ಕೊಹ್ಲಿ...

# 'ಐ ಬೊಮ್ಮ' ಪೈರಸಿ ಮಾಸ್ಟರ್ ಮೈಂಡ್ ಇಮ್ಮಡಿ ರವಿ ಲಾಕ್!




ಬಹುಕೋಟಿ ಚಲನಚಿತ್ರ ಪೈರಸಿ ದಂಧೆಯ ಮಾಸ್ಟರ್‌ಮೈಂಡ್ ಹಾಗೂ 'ಐ ಬೊಮ್ಮ' ವೆಬ್‌ಸೈಟ್ ಮಾಲೀಕ ಇಮ್ಮಡಿ ರವಿ ಎಂಬಾತನನ್ನು ಹೈದರಾಬಾದ್ ಸೈಬರ್ ಕ್ರೈಮ್ ಪೊಲೀಸರು ಬಂಧಿಸಿದ್ದಾರೆ. ಈತ ಈ ಹಿಂದೆ 'ಧಮ್ ಇದ್ರೆ ನನ್ನನ್ನು ಅರೆಸ್ಟ್ ಮಾಡಿ' ಎಂದು ಸೈಬರ್ ಕ್ರೈಂ ಪೊಲೀಸರಿಗೆ ಬಹಿರಂಗವಾಗಿ ಸವಾಲು ಹಾಕಿದ್ದ! ಈ ಸವಾಲನ್ನು ಸ್ವೀಕರಿಸಿದ್ದ ಹೈದರಾಬಾದ್ ಪೊಲೀಸರು, ಸೈಬರ್ ಲೋಕಕ್ಕೇ ಸಾವಾಲಗಿದ್ದ ಈ ಕ್ರಿಮಿನಲ್ ಅನ್ನು ಕೆರಬಿಯನ್ ದ್ವೀಪದಲ್ಲಿರೋ ವಿಮಾನ ನಿಲ್ದಾಣದಲ್ಲಿ ಬಂಧಿಸಿ ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡಿದ್ದಾರೆ!




ಮೂರು ತಿಂಗಳ ಹಿಂದೆ ಸೈಬರ್ ಪೊಲೀಸರು ಈ ದಂಧೆಗೆ ಸಂಬಂಧಿಸಿದ ಅನೇಕರನ್ನು ಬಂಧಿಸಿ ಪತ್ರಿಕಾಗೋಷ್ಠಿ ನಡೆಸಿದಾಗ, ರವಿ ಪೊಲೀಸರಿಗೆ 'ಧಮ್ ಇದ್ರೆ ನನ್ನನ್ನು ಅರೆಸ್ಟ್ ಮಾಡಿ' ಎಂದು ಸವಾಲು ಹಾಕಿದ್ದ! 2019 ರಿಂದ ಈತ ಕೆರೆಬಿಯನ್ ದ್ವೀಪಗಳಲ್ಲಿ ವಾಸಿಸುತ್ತಾ, ಅಲ್ಲಿಂದಲೇ ತನ್ನ ಪೈರೇಟೆಡ್ ನೆಟ್ವರ್ಕ್ ಅನ್ನು ದೇಶಾದ್ಯಂತ ವಿಸ್ತರಿಸಿ ಮೆರೆಯುತ್ತಿದ್ದ. ಸುಮಾರು 27 ಸಾವಿರಕ್ಕೂ ಹೆಚ್ಚು ಚಲನಚಿತ್ರಗಳನ್ನು ಹಾರ್ಡ್ ಡಿಸ್ಕ್‌ನಲ್ಲಿ ಸಂಗ್ರಹಿಸಿದ್ದ. ಹೊಸ ಚಿತ್ರಗಳು ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ HD ಗುಣಮಟ್ಟದಲ್ಲಿ ತನ್ನ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡುತ್ತಿದ್ದ. ತನ್ನ ವೆಬ್‌ಸೈಟ್‌ಗೆ ಭೇಟಿ ನೀಡಿದ ಸುಮಾರು 50 ಲಕ್ಷ ಜನರ ಡೇಟಾವನ್ನು ಈತ ಅಕ್ರಮವಾಗಿ ಸಂಗ್ರಹಿಸಿದ್ದ.

ಈ ಕ್ರಿಮಿನಲ್ ರವಿ ಮೂಲತಃ ಆಂಧ್ರಪ್ರದೇಶದ ವಿಜಯವಾಡದವನು. B.Tech ಪದವೀಧರ. ಮನೆಯವರಿಗೆ ಹೈದರಾಬಾದ್‌ನಲ್ಲಿ ಕೆಲಸ ಮಾಡುತ್ತಿರುವುದಾಗಿ ಸುಳ್ಳು ಹೇಳಿ ಈ ಕಾನೂನುಬಾಹಿರ ದಂಧೆ ನಡೆಸುತ್ತಿದ್ದ. ಸವಾಲ್ ಸ್ವೀಕರಿಸಿ ಕಾರ್ಯಾಚರಣೆ ನಡೆಸುತ್ತಿದ್ದ ಸೈಬರ್ ಕ್ರೈಂ ಪೊಲೀಸರು ನವೆಂಬರ್ 24 ರಂದು ಆತ ಹೈದರಾಬಾದ್‌ಗೆ ಬಂದು ಹೋಗಲು ಟಿಕೆಟ್ ಬುಕ್ ಮಾಡಿದ್ದ ಮಾಹಿತಿ ಸಂಗ್ರಹಿಸಿ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಹೈದರಾಬಾದ್ ಪೊಲೀಸ್ ಕಮಿಷನರ್ ಸಜ್ಜನ್ ರಾವ್ ಅವರು ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಈತನಿಂದ ಅನೇಕ ಹಾರ್ಡ್ ಡಿಸ್ಕ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಕಂಪ್ಯೂಟರ್‌ಗಳನ್ನು ಜಪ್ತಿ ಮಾಡಲಾಗಿದೆ. ಇವನ ಬ್ಯಾಂಕ್ ಖಾತೆಗಳಲ್ಲಿರುವ ಸುಮಾರು 4 ಕೋಟಿಗೂ ಹೆಚ್ಚು ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಪೈರಸಿ ಒಂದು ದೊಡ್ಡ ಅಪರಾಧ. ಇದು ಚಿತ್ರೋದ್ಯಮಕ್ಕೆ, ಕಲಾವಿದರಿಗೆ ಮತ್ತು ಸಾವಿರಾರು ಕಾರ್ಮಿಕರಿಗೆ ಅಪಾರ ನಷ್ಟ ಉಂಟುಮಾಡುತ್ತದೆ. ಸೋ, ಯಾರೂ ಪೈರೇಟ್ ಮಾಡಬೇಡಿ, ಮಾಡಲು ಬಿಡಬೇಡಿ... ☯

# ದಿ ಡೆವಿಲ್ ಭವಿಷ್ಯ ರೀವೀಲ್!







5 ☞ ಸಖತ್ ಮಾಸ್ ಆಗಿ ಮೂಡಿಬಂದಿದೆ. ಬ್ಯಾಕ್ ಟು ಬ್ಯಾಕ್ ಪಂಚಿಂಗ್ ಡೈಲಾಗ್ಸ್ ಕಿವಿಗೆ ಅಪ್ಪಳಿಸುತ್ತವೆ! ಅಂಡರ್ ವರ್ಲ್ಡ್ ಹಾಗೂ ಪೊಲಿಟಿಕಲ್ ಬ್ಯಾಕ್ ಡ್ರಾಪ್‌ನಲ್ಲಿ 'ದಿ ಡೆವಿಲ್' ಕಥೆ ಹೆಣೆದಿರುವುದು ಟ್ರೇಲರ್‌ನಲ್ಲಿ ಗೋಚರಿಸುತ್ತದೆ!

'ದಿ ಡೆವಿಲ್' ಸಿನಿಮಾದಲ್ಲಿ ನಟ ದರ್ಶನ್ ನಿಜಕ್ಕೂ ಪಾಶ್



ಲುಕ್‌ನಲ್ಲಿ ಮಿಂಚಿದ್ದಾರೆ! ಹಿಂದೆಂದೂ ನೀವು ಕಂಡಿರದ ಹೇರ್ ಸ್ಟೈಲ್, ಕಾಸ್ಟ್ಯೂಮ್ಸ್ ಹಾಗೂ ಔಟ್‌ಫಿಟ್‌ನಲ್ಲಿ 'ದಿ ಡೆವಿಲ್' ವಿಜೃಂಭಿಸಿದೆ!

''ಅವಲಕ್ಕಿ ಪವಲಕ್ಕಿ ಕಾಂಚಣ ಮಿಣ ಮಿಣ ಕೊಂಯ್ಯ ಕೊಟಾರ್'' ಅಂತ ದಾಸ ಡೈಲಾಗ್ ಹೇಳೋ ಮೂಲಕ 'ದಿ ಡೆವಿಲ್' ಟ್ರೇಲರ್ ಪ್ರಾರಂಭವಾಗುತ್ತದೆ. 'ಕ್ಷಣಕ್ಕೊಂದು ಬಣ್ಣ, ಗಳಿಗೆಗೊಂದು ವೇಷ..', 'ಲುಕ್‌ನಲ್ಲಿ ಹೀರೋನೇ.... ಕಿಕ್‌ನಲ್ಲಿದ್ದರೆ ಫುಲ್ ಆನ್ ಡೆವಿಲ್' ಎಂಬ ಡೈಲಾಗ್‌ಗಳ ಮೂಲಕ ಡೆವಿಲ್ ಕ್ಯಾರೆಕ್ಟರ್ ಅನ್ನು ರಿವೀಲ್ ಮಾಡಲಾಗಿದೆ! 'ಸೂರ್ಯನಿಗೆ ತುಂಬಾ ಹೊತ್ತು ಗ್ರಹಣ ಹಿಡಿಯಲ್ಲ...ನಾನು ಬರ್ತಿದ್ದೀನಿ ಚಿನ್ನ...' ಎಂಬ ಡೈಲಾಗ್ ಅಂತೂ ದಾಸನ ಫ್ಯಾನ್ಸ್‌ಗೆ ಬೇಗ ಕನೆಕ್ಟ್ ಆಗೋಗಿದೆ!! ತತ್ಪರಿಣಾಮವಾಗಿ, ಟ್ರೇಲರ್ ಬಿಡುಗಡೆಯಾದ ಒಂದೇ ತಾಸಿನಲ್ಲಿ 12 ಮಿಲಿಯನ್ ವಿವ್ಸ್ ಆಗಿತ್ತು! ಅಡ್ವಾನ್ಸ್ ಬುಕಿಂಗ್ ಕೂಡ ದಾಖಲೆ ಬರೆಯುತ್ತಿದೆ ಎನ್ನಲಾಗುತ್ತಿದೆ!!

ಅಂದಹಾಗೆ, 'ದಿ ಡೆವಿಲ್' ಸಿನಿಮಾದಲ್ಲಿ ದರ್ಶನ್‌ಗೆ ಹೀರೋಯಿನ್ ಆಗಿ ರಚನಾ ರೈ, ವಿಲ್ಲನ್ ಆಗಿ ಬಾಲಿವುಡ್ ಸ್ಟಾರ್ ಮಹೇಶ್ ಮಂಜ್ರೇಕರ್, ಕಾಟೇರ ಕಾನ್ಸ್‌ಟೇಬಲ್ ಅಚ್ಯುತ್‌ಕುಮಾರ್, ಶರ್ಮಿಳಾ ಮಾಂಡ್ರೆ, ಬಿಗ್‌ಬಾಸ್ ಪ್ರತಿಭೆಗಳಾದ ವಿನಯ್‌ಗೌಡ, ಚಂದುಗೌಡ, ಟುಡೇ ಸೂಪರ್ ಕಾಮಿಡಿಯನ್ ಗಿಲ್ಲಿ ನಟ, ಕೆಜಿಎಫ್ ಆಫೀಸ್ ಬಾಯ್ ಗೋವಿಂದೇಗೌಡ ಅಭಿನಯಿಸಿದ್ದಾರೆ. ಕಾಂತಾರ ಫೇಮ್ ಬಿ. ಅಜನೀಶ್ ಲೋಕನಾಥ್ ಅಬ್ಬರದ ಮ್ಯೂಸಿಕ್ ಇದೆ! ಒಟ್ಟಾರೆ, 'ದಿ ಡೆವಿಲ್' ಹವಾ ಜೋರಾಗಿದೆ!!! ☯





# ಮಧ್ಯದ ಬೆರಳು ತೋರಿದ ಶಾರುಖ್ ಖಾನ್ ಪುತ್ರನ ವಿರುದ್ಧ ಕಾನೂನು ಕ್ರಮವಾಗಲಿ...


ಶಾರುಖ್ ಖಾನ್ ಪುತ್ರ, ಆರ್ಯನ್ ಖಾನ್ ಅಭಿಮಾನಿಗಳತ್ತ ತಮ್ಮ ಮಧ್ಯದ ಬೆರಳು ತೋರಿಸಿ ಉದ್ಧಟತನ ಮೆರೆದಿರುವ ವಿಡಿಯೋವೊಂದು ವ್ಯಾಪಕ ವೈರಲ್ ಆಗುತ್ತಿದೆ! ಖಾಸಗಿ ಕಾರ್ಯಕ್ರಮದ ಸಲುವಾಗಿ ಬೆಂಗಳೂರಿಗೆ ಬಂದಿದ್ದ ಆರ್ಯನ್ ಖಾನ್, ಇಲ್ಲಿಗೆ ಬಂದಿದ್ದು ಎಷ್ಟು ಸುದ್ದಿಯಾಯಿತೋ ಅವನ ವರ್ತನೆ ಅದಕ್ಕಿಂತಲೂ ಹೆಚ್ಚು ಸುದ್ದಿಗೆ ಗ್ರಾಸವಾಗುತ್ತಿದೆ. ಬೆಂಗಳೂರಿನ ಪಬ್‌ವೊಂದಕ್ಕೆ ಬಂದಿದ್ದ ಆರ್ಯನ್ ಖಾನ್ ತಮ್ಮನ್ನು ನೋಡಲು ಬಂದಿದ್ದ ಅಭಿಮಾನಿಗಳತ್ತ ಮಧ್ಯದ ಬೆರಳು ತೋರಿಸಿ ಅಗೌರವ ತೋರಿದ್ದಾನೆ!

ಪಬ್‌ನಲ್ಲಿ ಆರ್ಯನ್ ಖಾನ್ ಅವರನ್ನು ನೋಡಲು ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ಆಗ ಆರ್ಯನ್ ಖಾನ್ ಅಭಿಮಾನಿಗಳತ್ತ ಕೈ ಬೀಸುತ್ತಿದ್ದಾಗಲೇ ಸಾರ್ವಜನಿಕವಾಗಿ ಮಧ್ಯದ ಬೆರಳು ತೋರಿಸಿದ್ದಾನೆ ಎನ್ನಲಾಗಿದೆ. ಅವಾಗ ಪಕ್ಕದಲ್ಲಿಯೇ ಇದ್ದ ನಲಪಾಡ್, ಆರ್ಯನ್‌ಗೆ ಕಿವಿಯಲ್ಲಿ ಏನೋ ಪಿಸುಗುಟ್ಟಿದ್ದು, ನಂತರ ಆರ್ಯನ್ ಕೈ ಬೀಸುತ್ತಾ ಒಳಗೆ ಹೋಗಿದ್ದಾನೆ.

ಇನ್ನು ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್ ಸುಪುತ್ರ ಝೈದ್ ಖಾನ್ ಕೂಡ ಆರ್ಯನ್ ಜೊತೆಗಿದ್ದರು. ಬೆಂಗಳೂರಿನ ಅಶೋಕನಗರ ಠಾಣಾ ವ್ಯಾಪ್ತಿಯ ಪಬ್‌ನಲ್ಲಿ ಈ ಘಟನೆ ನಡೆದಿದೆ. ನವೆಂಬರ್ 28ರಂದು ಆರ್ಯನ್ ಖಾನ್ ಅವರು ಬೆಂಗಳೂರಿಗೆ ಬಂದಿದ್ದರು. ಆಗ ಅವರು ದುರ್ವರ್ತನೆ ತೋರಿದ್ದಾರೆ. ವಿಡಿಯೋ ವೈರಲ್ ಆದ ಬಳಿಕ ಈ ಘಟನೆ ಬೆಳಕಿಗೆ ಬಂದಿದೆ. ಪಬ್‌ನ ಬಾಲ್ಕನಿಯಲ್ಲಿ ನಿಂತು ಜನರತ್ತ ಮಧ್ಯದ ಬೆರಳು ತೋರಿಸಿದ ಆರ್ಯನ್ ಅವರ ವರ್ತನೆಯನ್ನು ಸೋಶಿಯಲ್ ಮೀಡಿಯಾದಲ್ಲಿ ಖಂಡಿಸಲಾಗುತ್ತಿದೆ.

ಇನ್ನು ಆರ್ಯನ್ ಖಾನ್‌ರ ಈ ವರ್ತನೆಯ ವಿಡಿಯೋ ವ್ಯಾಪಕ ವೈರಲ್ ಆಗುತ್ತಿದ್ದು, ಸೋಶಿಯಲ್ ಮೀಡಿಯಾದಲ್ಲಿ ವಿಡಿಯೋ ನೋಡಿದ ನೆಟ್ಟಿಗರು ಟೀಕೆ ವ್ಯಕ್ತಪಡಿಸಿದ್ದಾರೆ. ಆರ್ಯನ್ ಖಾನ್ ಅವರ ಮೇಲೆ ಬೆಂಗಳೂರು ಪೊಲೀಸರು ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಲಾಗುತ್ತಿದೆ. ☯

# ಗುಮ್ಮಡಿ ನರಸಯ್ಯನವರ ನಿವಾಸಕ್ಕೆ ಶಿವಣ್ಣ ದಂಪತಿ!



'ಗುಮ್ಮಡಿ ನರಸಯ್ಯ' ಸಿನಿಮಾದ ಮೂಲಕ ಶಿವರಾಜ್ ಕುಮಾರ್ ಅವರು ಇದೆ ಮೊದಲ ಭಾರಿಗೆ ಹೀರೋ ಆಗಿ ತೆಲುಗು ಚಿತ್ರರಂಗಕ್ಕೆ ಕಾಲಿಡುತ್ತಿದ್ದಾರೆ. ಡಿ.6ರಂದು ಈ ಸಿನಿಮಾದ ಮುಹೂರ್ತ ಸಮಾರಂಭ ನಡೆದಿದೆ. ಅದಕ್ಕೂ ಮುನ್ನ ಗುಮ್ಮಡಿ ನರಸಯ್ಯ ನಿವಾಸಕ್ಕೆ ಶಿವಣ್ಣ ದಂಪತಿ ಭೇಟಿ ನೀಡಿದ್ದಾರೆ. ಮಾಜಿ ಶಾಸಕ ಗುಮ್ಮಡಿ ನರಸಯ್ಯ ಅವರ ಜೀವನಧಾರಿತ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ನಟಿಸಲಿದ್ದಾರೆ ಎಂಬ ಸುದ್ದಿ ಹದಿನೈದು ದಿನಗಳ ಹಿಂದೆಯೇ ಪ್ರಕಟಗೊಂಡಿತ್ತು.



ಗುಮ್ಮಡಿ ನರಸಯ್ಯ ಅವರ ಪಾತ್ರವನ್ನು ಶಿವಣ್ಣ ಮಾಡಲಿರುವುದರಿಂದ ಈ ಭೇಟಿ. ಮಾಜಿ ಶಾಸಕ, ಹುಟ್ಟು ಹೋರಾಟಗಾರ ಗುಮ್ಮಡಿ ನರಸಯ್ಯ ಅವರು ಸಾಕಷ್ಟು ಖ್ಯಾತಿ ಹೊಂದಿದ್ದಾರೆ. ಅವರು 5 ಬಾರಿ ಶಾಸಕರಾಗಿ ಆಯ್ಕೆ ಆಗಿದ್ದರು. ತಮ್ಮ ಸರಳ ವ್ಯಕ್ತಿತ್ವ ಕಾರಣದಿಂದ ಅವರು ಎಲ್ಲರಿಗೂ ಮಾದರಿಯಾಗಿದ್ದಾರೆ. ಜೀವಮಾನದಲ್ಲೇ ಲಂಚ ಮುಟ್ಟಿದವರಲ್ಲ. ಈಗಲೂ ಅವರು ಹೆಂಚಿನ ಹಳೇ ಮನೆಯಲ್ಲೇ ನೆಲೆಸಿದ್ದಾರೆ. ಶಿವಣ್ಣ ಮುಖ್ಯ ಪಾತ್ರದಲ್ಲಿ ನಟಿಸಲಿರುವ ಮೊದಲ ತೆಲುಗು ಸಿನಿಮಾ ಇದು. ಹಾಗಾಗಿ ಸಾಕಷ್ಟು ನಿರೀಕ್ಷೆ ಮೂಡಿಸಿದೆ. ಈಗಾಗಲೇ ಈ ಸಿನಿಮಾದ ಫಸ್ಟ್ ಲುಕ್ ಕೂಡ ಬಿಡುಗಡೆ ಆಗಿದೆ...



# ಲಂಡನ್‌ನಲ್ಲಿ ತಮ್ಮದೇ ಪ್ರತಿಮೆ ಅನಾವರಣ ಮಾಡಿದ ಶಾರುಖ್-ಕಾಜಲ್!

ಬಾಲಿವುಡ್‌ನ ಎವರ್‌ಗ್ರೀನ್ ಹಿಟ್ ಪೇರ್ ಶಾರುಖ್ ಖಾನ್ ಹಾಗೂ ಕಾಜಲ್ ಜೊತೆಯಾಗಿ ನಿಂತು ತಮ್ಮದೇ ಪ್ರತಿಮೆಯನ್ನ ಅನಾವರಣ ಮಾಡಿದ್ದಾರೆ! ವಿಶೇಷ ಅಂದ್ರೆ, ಪ್ರತಿಮೆ ಸ್ಥಾಪನೆಯಾಗಿರೋದು ಲಂಡನ್‌ನಲ್ಲಿ. 30 ವರ್ಷದ ಹಿಂದಿನ ಎರಡು ಪಾತ್ರದ ಮಾಯೆಗೆ ಇಂದು ಲಂಡನ್‌ನಲ್ಲಿ ಪ್ರತಿಮೆಯಾಗಿದೆ. ಅದುವೇ 'ಡಿಡಿಎಲ್‌ಜೆ' ಚಿತ್ರದ ರಾಜ್ ಹಾಗೂ ಸಿಮ್ರನ್ ಪಾತ್ರದ ಮೋಡಿ! ಬಹುತೇಕ ಲಂಡನ್‌ನಲ್ಲಿ ಚಿತ್ರೀಕರಣವಾಗಿದ್ದ ಡಿಡಿಎಲ್‌ಜೆ ಚಿತ್ರದ ರಾಜ್ ಹಾಗೂ ಸಿಮ್ರನ್ ಪಾತ್ರದ ಜೋಡಿ ಪ್ರತಿಮೆಯನ್ನ ಖುದ್ದು ಕಾಜಲ್ ಹಾಗೂ ಶಾರುಖ್ ಖಾನ್ ಹಾಜರಿದ್ದು ತಮ್ಮ ಕೈಯಾರೆ ಅನಾವರಣ ಮಾಡಿದ್ದಾರೆ.

'ಬಾಜೀಗರ್' ಸಿನಿಮಾದಿಂದ ಶುರುವಾದ ಈ ಜೋಡಿಯ ಸಕ್ಸಸ್ ಜರ್ನಿ ಕರಣ್ ಅರ್ಜುನ್, ಡಿಡಿಎಲ್‌ಜೆ, ಕುಚ್ ಕುಚ್ ಹೋತಾ ಹೈ, ಕಭಿ ಖುಷಿ ಕಭಿ ಗಂ....ವರೆಗೂ ಮುಂದುವರೆದಿದೆ! ಬಾಜೀಗರ್ ಬಳಿಕ ಈ ಜೋಡಿ ತೆರೆಮೇಲೆ ವಿಸ್ಮಯ ಸೃಷ್ಟಿಸಿದ ಚಿತ್ರವೆಂದರೆ ಅದು 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೇಂಗೆ' ಈ ಚಿತ್ರದಲ್ಲಿ ಶಾರುಖ್ ಖಾನ್ ರಾಜ್ ಪಾತ್ರದಲ್ಲಿ ಕಾಜಲ್ ಸಿಮ್ರನ್ ಪಾತ್ರದಲ್ಲಿ ಮಿಂಚಿದ್ದರು. ಈ ಮ್ಯೂಸಿಕಲ್ ಹಿಟ್ ಚಿತ್ರ ತೆರೆಕಂಡ ಮೂವತ್ತು ವರ್ಷಗಳಿಂದ ಮುಂಬೈನ ಮರಾಠಾ ಚಿತ್ರಮಂದಿರಲ್ಲಿ ಪ್ರತಿದಿನ ಪ್ರದರ್ಶನ ಕಾಣುತ್ತಿದೆ! ಇದು ಭಾರತೀಯ ಚಿತ್ರರಂಗದಲ್ಲೇ ದಾಖಲೆ!

ಲಂಡನ್‌ನಲ್ಲಿ ರಾಜ್, ಸಿಮ್ರನ್ ಜೋಡಿಯ ಪ್ರೇಮ್ ಕಹಾನಿ ಶುರುವಾಗಿ ಮದುವೆ ಮನೆಯಲ್ಲಿ ಕೊನೆಗೊಳ್ಳುತ್ತದೆ. 1995ರಲ್ಲಿ ಬಿಡುಗಡೆ ಕಂಡಾಗ ಲಂಡನ್‌ನಲ್ಲೂ ಡಿಡಿಎಲ್‌ಜೆ ದಾಖಲೆ ಮಾಡಿತ್ತು. ಇದೀಗ ಅಲ್ಲಿ ಶೂಟಿಂಗ್ ನಡೆದ ಜಾಗದಲ್ಲಿ ರಾಜ್ ಹಾಗೂ ಸಿಮ್ರನ್ ಕಂಚಿನ ಪುತ್ಥಳಿ ಮ್ಯೂಸಿಯಂ ಒಳಗೆ ಉಳಿದುಕೊಳ್ಳಲಿದೆ ಅನ್ನೋದು ವಿಶೇಷ...

# ಅಕಟಕಟಾ...'ಅಖಂಡ-2' ಶೋ ರದ್ದು!

ಬಾಲಯ್ಯ ಸಿನಿಮಾ ಅಂದ್ರೆ, ಆಂಧ್ರ, ತೆಲಂಗಾಣದಲ್ಲಿ ಮಾತ್ರವಲ್ಲ, ನಮ್ಮಲ್ಲೂ ಕೂಡ ವಿಪರೀತ ಕ್ರೇಜ್ ಇರುತ್ತೆ... ಅವರ ಸಿನಿಮಾಗಳು ಕರ್ನಾಟಕದಲ್ಲಿಯೇ ವರ್ಷ ಕಾಲ, 25 ವಾರ ಕಾಲ ಆರಾಮವಾಗಿ ಓಡುತ್ತವೆ. ಇನ್ನೂ ವಿಚಿತ್ರ ಅಂದ್ರೆ, ಯಾರ ಸಿನಿಮಾ ಗೆಲ್ಲುತ್ತವೋ ಸೋಲುತ್ತವೋ, ಬಾಲಯ್ಯನ ಸಿನಿಮಾಗಳಂತು ಸಾಲು ಸಾಲಾಗಿ ಗೆಲ್ಲುತ್ತಲೇ ಇದ್ದಾವೆ!



ಇತ್ತೀಚಿಗೆ ಅವರ ಅಭಿನಯದ ಅಖಂಡ ಸೂಪರ್ ಹಿಟ್ ಆಗಿತ್ತು. ಅದು ದೇವರ ಅಸ್ತಿತ್ವದ ಬಗ್ಗೆ ಹಿಂದೂ ಧರ್ಮದ ಹಿನ್ನಲೆಯಲ್ಲಿ ಮೂಡಿ ಬಂದಂತ ಸಿನಿಮಾ. ಈಗ ಅದೇ ಟೀಮ್ 'ಅಖಂಡ-2' ಚಿತ್ರಿಸಿದ್ದು, ಮೊನ್ನೆ ಶುಕ್ರವಾರ ಬಿಡುಗಡೆ ಆಗಬೇಕಿತ್ತು. ಗುರುವಾರವೇ ಥೇಟರ್ಸ್ ಮುಂದೆ ತ್ರಿಶೂಲ ದಾರಿ ಬಾಲಯ್ಯನ ಕಟ್ ಔಟ್ ಬಿದ್ದಿತ್ತು. ಆದರೆ, ಶೋ ಆರಂಭವಾಗಲು ಎರಡು ಗಂಟೆ ಇದೆ ಅನ್ನೋವಾಗ, ಶೋ ರದ್ದಾಗಿ ಬಿಟ್ಟಿದೆ! ಇದಕ್ಕೆ ಕಾರಣ, ಪ್ರಿನ್ಸ್ ಮಹೇಶ್ ಬಾಬು ಚಿತ್ರಗಳು ಎನ್ನಲಾಗಿದೆ!

ಮಹೇಶ್ ಬಾಬುಗೂ ಬಾಲಯ್ಯನಿಗೂ ಏನು ಜಗಳ? ಅಂದುಕೊಂಡಿರಾ... ಈಗ ಅಖಂಡ ಸಿನಿಮಾ ನಿರ್ಮಿಸಿರುವ '14 ರೀಲ್ಸ್' ಸಂಸ್ಥೆ ಈ ಹಿಂದೆ ಮಹೇಶ್ ಬಾಬು ನಟಿಸಿದ್ದ 'ನಂ.1 ನೇನೊಕ್ಕಡೇನೆ' ಮತ್ತು 'ಆಗಡು' ಎಂಬೆರಡು ಸಿನಿಮಾಗಳನ್ನು ನಿರ್ಮಾಣ ಮಾಡಿತ್ತು. ಆ ಸಿನಿಮಾಗಳಿಗೆ ಬಾಲಿವುಡ್‌ನ ಇರೋಸ್ ಇಂಟರ್‌ನ್ಯಾಷನಲ್ ಸಂಸ್ಥೆ ಹಣಕಾಸಿನ ನೆರವು ನೀಡಿತ್ತು. ಆದರೆ, ಆ ಎರಡೂ ಸಿನಿಮಾಗಳು ಸೋತಿದ್ದರಿಂದ ನಿರ್ಮಾಪಕರು ಹಣವನ್ನು ಹಿಂತಿರುಗಿಸಲಿಲ್ಲ. ಹೀಗಾಗಿ ಅಸಲಿಗೆ ಬಡ್ಡಿ ಮೇಲೆ ಬಡ್ಡಿ ಬೆಳೆದಿತ್ತು. ಇರೋಸ್‌ನಿಂದ 27.8 ಕೋಟಿ ನೆರವು ಪಡೆದಿದ್ದ 14 ರೀಲ್ಸ್ 2019ರಿಂದ ಶೇ.14ರಷ್ಟು ಬಡ್ಡಿಯನ್ನೂ ಕಟ್ಟಿರಲಿಲ್ಲ!

ಹೀಗಾಗಿ 27.8 ಕೋಟಿ ಅಸಲು ಪ್ಲಸ್ 24.79 ಕೋಟಿ ಬಡ್ಡಿ ಸೇರಿಸಿ ಒಟ್ಟು 52.59 ಕೋಟಿ ರೂ. ನೀಡಬೇಕೆಂದು ಇರೋಸ್ ಗುರುವಾರ ಕೋರ್ಟ್ ಮೆಟ್ಟಿಲೇರಿತ್ತು ಎಂದು 'ಡೈಲಿ ಕಲ್ಚರ್' ವರದಿ ಮಾಡಿದೆ! ಇರೋಸ್ ಇಂಟರ್ ನ್ಯಾಷನಲ್ 'ಅಖಂಡ-2' ಸಿನಿಮಾ ಬಿಡುಗಡೆಯನ್ನು ತಡೆಯುವಂತೆ ಮದ್ರಾಸ್ ಹೈಕೋರ್ಟ್ ಮೊರೆ ಹೋಗಿತ್ತು. ಅವರ ಮನವಿಯನ್ನು ಪುರಸ್ಕರಿಸಿರೋ ಮದ್ರಾಸ್ ಹೈಕೋರ್ಟ್‌ನ ನ್ಯಾಯಾಶರಾದ ಎಸ್.ಎಂ. ಸುಬ್ರಮಣಿಯಂ ಹಾಗೂ ಸಿ. ಕುಮಾರಪ್ಪನ್ ದ್ವಿಪಕ್ಷಿಯ ಪೀಠ ಸಿನಿಮಾ ಬಿಡುಗಡೆಗೆ ತಡೆಯಾಜ್ಞೆ ನೀಡಿದ್ದು, 'ಅಖಂಡ-2' ಶೋ ದಿಢೀರ್ ರದ್ದಾಗಿದೆ!! ಹಾಗಾದ್ರೆ, ರಿಲೀಸ್ ಯಾವಾಗ? 14 ರೀಲ್ಸ್ ಸಮಸ್ಯೆ ಬಗೆಹರಿಸಿಕೊಳ್ಳದ ಹೊರತು ಬಿಡುಗಡೆ ಸಾಧ್ಯವೇ ಇಲ್ಲಾ! ಎಷ್ಟೇ ಆದರೂ ಇದು ಬಾಲಯ್ಯ ಸಿನಿಮಾ. ಸೋ, ಏನೋ ಒಂದು ತೀರ್ಮಾನ ವಾಗಿ ರಿಲೀಸ್ ಡೇಟ್ ಅನೌನ್ಸ್ ಆಗಬಹುದು...

# ಮೂರು ಸಿನಿಮಾಗಳಲ್ಲೂ ಮರ್ಡರ್ ಆಗುತ್ತಾರೆ...

ಪೊಲೀಸ್ ಅಧಿಕಾರಿಗಳ ಮಿತ್ರ ವೃಂದದಿಂದ ತಯಾರಾದ ಕೋವಿಡ್ ಅಕ್ರಮದ ಕತೆಯುಳ್ಳ ಸಿನಿಮಾ 'ದಿ ಟಾಸ್ಕ್'. ಈ ಸಿನಿಮಾ ಅಮೋಘ 25ನೇ ದಿನದಲ್ಲಿ ಪ್ರದರ್ಶನಗೊಳ್ಳುತ್ತಿದೆ. ಒಳ್ಳೆಯ ಸಿನಿಮಾಗಳನ್ನು ಪ್ರೇಕ್ಷಕರು ಕೈ ಬಿಡುವುದಿಲ್ಲ ಅನ್ನೋದಕ್ಕೆ ಇದೇ ಸಾಕ್ಷಿ. ಈ ಸಿನಿಮಾ ಹೀರೋ ಇದ್ದಾರಲ್ಲ... ಜೈಸೂರ್ಯ ಆರ್. ಅಜಾದ್, ಇವರು ಕ್ಲೈಮ್ಯಾಕ್ಸ್‌ನಲ್ಲಿ ಸಾಯುತ್ತಾರೆ! ಭ್ರಷ್ಟರ ಕೈಗೆ ಸಿಕ್ಕಿ ಸಾಯಲಿದ್ದ ಬಾಲಕಿಯನ್ನು ರಕ್ಷಿಸಿ ತಾನು ಕೊಲೆಯಾಗುವ ಜೈ ಅವರನ್ನು ನೋಡಿ ಕಣ್ಣೀರು ಹಾಕುತ್ತಾರೆ, ಜನ! ಈ ಕ್ಲೈಮ್ಯಾಕ್ಸ್ ಬದಲಿಸಬೇಕಿತ್ತು ಅಂತ ಒತ್ತಾಯ ಕೂಡ ಕೇಳಿಬಂದಿತ್ತು. ಅದಿರಲಿ, ಸಮಾಜಮುಖಿ ಪೊಲೀಸ್ ಆಫೀಸರ್ ಎಲ್.ವೈ. ರಾಜೇಶ್ ಅವರ ಮಗ ಜೈಸೂರ್ಯ ಅವರು ಬೆಳ್ಳಿತೆರೆಗೆ ಬಂದದ್ದು 'ಸಲಗ' ಚಿತ್ರದ ಮೂಲಕ. ನಂತರ 'ಭೀಮ' ಈ ಎರಡೂ ಚಿತ್ರಗಳಲ್ಲಿ ಖಳನಾಗಿ ಮಿಂಚಿದ್ದರು. ಈಗ ಹೀರೋ ಆಗಿದ್ದಾರೆ. ವಿಶೇಷ ಅಂದ್ರೆ, ಜೈ ನಟಿಸಿರೋ ಮೂರೂ ಚಿತ್ರಗಳಲ್ಲಿ ಮರ್ಡರ್ ಆಗುತ್ತಾರೆ!!! ನಿಮಗೆ ಕೈ ಮುಗೀತೀವಿ, ಮುಂದಿನ ಚಿತ್ರದಲ್ಲಾದರೂ ಕ್ಲೈಮ್ಯಾಕ್ಸ್ ಬದಲಿಸಿ ಪ್ಲೀಸ್... ಎನ್ನುತ್ತಿದ್ದಾರೆ, ಅಭಿಮಾನಿಗಳು!!



Vol. 41 No. 27 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==